ಜನವರಿ 12, 2025
40ನೇ ವರ್ಷದಲ್ಲಿ
www.facebook.com/firstcrimenewspaper/
ಸ್ಥಾಪಕ ಸಂಪಾದಕ : ದಿ||ಎಂ. ಮಲ್ಲಿಕಾರ್ಜುನಯ್ಯ

# ಪೊಲೀಸ್ ನ್ಯೂಸ್

1967
ಪರಿಶೋಧನೆ, ಪತ್ತೇದಾರಿಕೆ ಮತ್ತು ರೋಚಕ ಸುದ್ದಿಗಳ ಸಚಿತ್ರ ಕನ್ನಡ ವಾರಪತ್ರಿಕೆ
ಬೆಲೆ : ₹20/-

## ಪುಷ್ಪ-2 ಸಿನಿಮಾ ನೋಡುತ್ತಿದ್ದ ಬಾಲಕರ ಕಿಡ್ನ್ಯಾಪ್ ಮಾಡಿದ ನಕಲಿ ಜ್ಯೋತಿಷಿ!





## ನಕಲಿ ಚಿನ್ನ ಅಡವಿಟ್ಟು ಮೋಸ ಮಾಡಬಹುದು ಹುಷಾರ್!



## ಜಮೀನು ವಿವಾದದಲ್ಲಿ 24ರ ತರುಣನನ್ನು ಕೊಂದ ಸಿದ್ದ!

## ಹಣಕ್ಕಾಗಿ ರೈಲ್ವೆ ನೌಕರನ ಕೊಂದ ಚಿಲ್ಟಾರಿಗಳು!





## ಡಿಸೆಂಬರ್ 31 ಪಾರ್ಟಿ ನಂತರ ಕಾಣೆಯಾಗಿದ್ದ ವ್ಯಕ್ತಿ ಶವವಾಗಿ ಪತ್ತೆ!



# ಸಮತೋಲನದ ಸಮಾಜಕ್ಕೆ ವೇಶ್ಯಾವಾಟಿಕೆ ಬೇಕೇ?!

**ವೇಶ್ಯಾವಾಟಿಕೆಗೆ ಕಾನೂನಿನಲ್ಲಿ ಅವಕಾಶ ಮಾಡಿಕೊಡುವುದು ಎಷ್ಟು ಕಷ್ಟವೋ, ಅದನ್ನು ತಡೆದು ನಿಲ್ಲಿಸುವುದೂ ಅಷ್ಟೇ ಕಷ್ಟ. ವೇಶ್ಯಾವಾಟಿಕೆಯನ್ನು ನಿಲ್ಲಿಸಲು ಹೊರಟ ದೇಶಗಳೂ ಸೋತಿವೆ, ಮುಕ್ತಗೊಳಿಸಿ ಒಪ್ಪಿಕೊಂಡ ದೇಶಗಳೂ ನಂತರದಲ್ಲಿ ಇದಕ್ಕೊಂದು ರೂಪುರೇಷೆ ಕೊಡುವಲ್ಲಿಯೂ ಎಡವಿವೆ. ವೇಶ್ಯಾವಾಟಿಕೆಯನ್ನು ನಿಲ್ಲಿಸಲು ಸ್ವೀಡನ್ ಹೊಸಮಾದರಿ ಕಾನೂನೊಂದನ್ನು 1999ರಲ್ಲಿ ಜಾರಿಮಾಡಿತು. ಇದರ ಪ್ರಕಾರ ವೇಶ್ಯೆಯರಿಗೆ ಶಿಕ್ಷೆಯಿಲ್ಲ, ಅಲ್ಲಿ ಗ್ರಾಹಕ ಮಾತ್ರ ಅಪರಾಧ. ಮುಂದೆ ಹಲವು ದೇಶಗಳು ಇಂಥದೇ ಕಾನೂನನ್ನು ಜಾರಿಮಾಡಿ ನಿಯಂತ್ರಿಸುವಲ್ಲಿ ಕೊಂಚ ಯಶಸ್ಸನ್ನು ಕಂಡಿವೆ. ಡೆನ್ಮಾರ್ಕ್‌ನಲ್ಲಿ ವೇಶ್ಯಾವಾಟಿಕೆ, ಸೆಕ್ಸ್- ದೇಹವನ್ನು ಮಾರುವುದು ಮತ್ತು ಖರೀದಿಸುವುದು- ಎರಡೂ ಅಪರಾಧವಲ್ಲ; ಆದರೆ ವ್ಯವಸ್ಥಿತ ಸಂಸ್ಥೆಯಂತೆ ಇದರ ದಂಧೆ ನಡೆಸುವುದು ಅಪರಾಧ. ಅಲ್ಲಿ ವೇಶ್ಯೆಯರಿಗೆ ಅವಕಾಶವಿದೆಯೇ ವಿನಾ, ವೇಶ್ಯಾಗೃಹಗಳಿಗಲ್ಲ. ಹೀಗೆ ಜಗದ ವಿವಿಧ ದೇಶಗಳಲ್ಲಿ ಹತ್ತಾರು ರೀತಿಯ ಕಾನೂನುಗಳಿವೆ. ದಕ್ಷಿಣ ಅಮೆರಿಕದ ದೇಶಗಳಲ್ಲಿ ಈ ವೇಶ್ಯಾವಾಟಿಕೆ ಒಂದು ನಿರಂಕುಶ ಸಾಮ್ರಾಜ್ಯ; ಯಾವುದೇ ಕಾನೂನುಗಳು ಅದನ್ನು ಸಂಪೂರ್ಣ ನಿಲ್ಲಿಸುವಲ್ಲಿ ಅಥವಾ ಅದರ ಸುತ್ತ ನಡೆವ ಅನ್ಯ ಅಪರಾಧಗಳನ್ನು ನಿಗ್ರಹಿಸುವಲ್ಲಿ ಯಶಸ್ವಿಯಾಗಿಲ್ಲ.**

ಛೇ, ಇವರೆಲ್ಲಾ ಮನುಷ್ಯರೇ ಹೌದೇ?! ಅಥವಾ ರಾಕ್ಷಸರೇ? ಇವರನ್ನೆಲ್ಲ 'ರಾಕ್ಷಸರು' ಎಂದೆನ್ನುವಂತೆಯೂ ಇಲ್ಲ. ಏಕೆಂದರೆ, ಪೌರಾಣಿಕ ರಕ್ಕಸರು ಕೂಡ ಇವರ ಮುಂದೆ ತೀರಾ ಸಾಚಾ ಅನ್ನಿಸಿಬಿಡುತ್ತಾರೆ! ದೆಹಲಿ. 9 ವರ್ಷದ ಕೂಸು, ಹೆಣ್ಣು ಮಗು. ನಲವತ್ತು ದಾಟಿದ ಇಬ್ಬರು ಗಂಡಸರು ಆ ಮಗುವನ್ನು ರೇಪ್ ಮಾಡಿ ಸುಟ್ಟುಹಾಕುತ್ತಾರೆ ಎಂದರೆ? ದಿನ ಬೆಳಗಾದರೆ ಭಾರತ, ಹಿಂದೂ ಸಂಸ್ಕಾರ, ಸನಾತನ ಧರ್ಮ, ಪುರಾಣ, ಉಪನಿಷತ್ತು, ಭಗವದ್ಗೀತೆ ಎಂದೆಲ್ಲಾ ಬೊಂಬಡಾ ಹೊಡೆದುಕೊಳ್ಳುವವರಲ್ಲಿಯೇ ಇದನ್ನು ಪ್ರಶ್ನಿಸಬೇಕು! ಎಲ್ಲಿದೆ ಸ್ವಾಮಿ ಈ ನೆಲದ ಸಂಸ್ಕಾರ, ಸಂಸ್ಕೃತಿ ಇತ್ಯಾದಿ ಇತ್ಯಾದಿ? ನಾವು ಇಂಥ ಅಮಾನುಷ ಸುದ್ದಿಯನ್ನು ಕೇಳಿದಾಗೆಲ್ಲ, ರಾಕ್ಷಸರೂ ತೀರಾ ಸಾಚಾ, ಡಿಗ್ನಿಫೈಡ್ ಎನಿಸಿಬಿಡುತ್ತಾರೆ. ನರಭಕ್ಷಕ ಹುಲಿ-ಸಿಂಹಗಳು ಕೂಡ ಸಹ್ಯವಾಗಿಬಿಡಬಹುದು, ಆದರೆ ಇಂಥ ಹೆಣ್ಣುಬಾಕ 'ಮೃಗೀಯ' ಗಂಡಸರು? ಮಾನವೀ ಯತೆಯ ಪರಮ ದಾರಿದ್ರ್ಯವಿರುವ ಇಂಥವರನ್ನು ಕಂಡಾಗ, ಮರಣದಂಡನೆ ಕೂಡ ಕಡಿಮೆ ಅನ್ನಿಸಿಬಿಡುತ್ತದೆ. ಪತ್ರಿಕೆಯಲ್ಲಿ ಒಂದೆಡೆ, ಪಿ.ವಿ. ಸಿಂಧು ಎಂಬ ಸಾಧಕಿಯ ಮದುವೆಯ ಫೋಟೋಗಳು; ಅದರ ಪಕ್ಕದಲ್ಲೇ, 9 ವರ್ಷದ ಮಗುವಿನ ಅತ್ಯಾಚಾರವಾದ ಸುದ್ದಿ. ಇದೆಂಥ ವೈರುಧ್ಯ?!

ವರದಿಯಾಗುವ ಅತ್ಯಾಚಾರಗಳ ಸಂಖ್ಯೆಯ ಪ್ರಕಾರ, ಜಗತ್ತಿನ ದೇಶಗಳ ಪಟ್ಟಿಯಲ್ಲಿ ಭಾರತವು 60ನೇ ಸ್ಥಾನದಲ್ಲಿದೆ. ಇದರರ್ಥ, ನಮ್ಮಲ್ಲಾಗುವ ಅತ್ಯಾಚಾರಗಳಿಗೆ ನೇರ ಅನುಪಾತವನ್ನು ಕಲ್ಪಿಸುವಂತಿಲ್ಲ, 'ನಾವು ಇಲ್ಲಿದ್ದೇವೆ,



ಅವರು ಅಲ್ಲಿದ್ದಾರೆ' ಎಂದೆಲ್ಲ ತಾಳೆಲೆಕ್ಕ ಹಾಕುವಂತಿಲ್ಲ. ವರದಿಯಾಗುವ ಅತ್ಯಾಚಾರ ಪ್ರಕರಣಗಳ ಸಂಖ್ಯೆಯು ಸಮಾಜ, ಕಾನೂನು ಸ್ಥಿತಿ, ಅದು ವ್ಯವಹರಿಸುವ ರೀತಿ ಹೀಗೆ ಹತ್ತಾರು ವಿಚಾರಗಳನ್ನು ಅವಲಂಬಿಸಿರುತ್ತದೆ ಎಂಬುದನ್ನು ನಿಮಗೆ ಬಿಡಿಸಿ ಹೇಳಬೇಕಿಲ್ಲ. ಅತ್ಯಾಚಾರ ಎಂಬುದು ನಮ್ಮ ದೇಶವೊಂದರದ್ದೇ ಕಥೆ-ವ್ಯಥೆ ಅಂದುಕೊಳ್ಳಬೇಡಿ; ಮಧ್ಯಪ್ರಾಚ್ಯ ವಲಯವನ್ನು ಬಿಟ್ಟು ಉಳಿದ ದೇಶಗಳದ್ದೂ ಇದೇ ಹಣೆಬರಹ. ಪ್ರಮಾಣದಲ್ಲಿ ಸ್ವಲ್ಪ ಹೆಚ್ಚು-ಕಡಿಮೆ ಇರುತ್ತದೆಯಷ್ಟೇ. ದಕ್ಷಿಣ ಅಮೆರಿಕಾ, ಉತ್ತರ ಅಮೆರಿಕಾ, ಸ್ವೀಡನ್, ಬೆಲ್ಜಿಯಂ, ಸ್ಪೇನ್ ಮೊದಲಾದ ದೇಶಗಳಲ್ಲಿನ 'ಅತ್ಯಾಚಾರದ ಅಂಕಿ-ಅಂಶ'ಗಳನ್ನು ಒಮ್ಮೆ ನೋಡಿದರೆ ಬೆಚ್ಚಿ ಬೀಳಬೇಕಾಗುತ್ತದೆ! ಕೆಲವು ದೇಶಗಳಂತೂ ತಮ್ಮಲ್ಲಾಗುವ ಅತ್ಯಾಚಾರಗಳ ಲೆಕ್ಕವನ್ನು ಸಾರ್ವಜನಿಕವಾಗಿ ಪ್ರಕಟಿಸುವುದೇ ಇಲ್ಲ!

'ಸಭ್ಯ' ಎನಿಸಿಕೊಂಡ ಎಲ್ಲ ದೇಶಗಳಲ್ಲೂ ಇಂಥ ತೀರಾ ಅಮಾನವೀಯ ಕೃತ್ಯ ನಡೆದಾಗ, ಒಂದಿಷ್ಟು ಸುದ್ದಿಯಾಗುತ್ತದೆ, ಚರ್ಚೆ ನಡೆಯುತ್ತದೆ, ಸಭ್ಯ ಜನರ ಅಸಹಾಯಕತೆ ಮತ್ತು ಹತಾಶೆ ಮುನ್ನೆಲೆಗೆ ಬರುತ್ತವೆ. ಸಂಖ್ಯೆ ಹೆಚ್ಚಿದಾಗಲೆಲ್ಲ ಜನರಲ್ಲಿ 'ಇನ್‌ಸೆನ್ಸಿಟಿವಿಟಿ' ಹೆಚ್ಚುತ್ತಾ ಹೋಗುತ್ತದೆ. 'ನಿರ್ಭಯಾ' ಪ್ರಕರಣ ನಡೆದ ಸಮಯದಲ್ಲಿ, ಅದಕ್ಕಿಂತ ಮೊದಲು ಹಾಗೂ ನಂತರವೂ ಇಂಥ ಅದೆಷ್ಟೋ ಅಮಾನವೀಯ ಕೃತ್ಯಗಳು ನಡೆದಿವೆ- ಆದರೆ ಅವೆಲ್ಲವೂ ಅಷ್ಟು ಪ್ರಚಾರ ಪಡೆದುಕೊಂಡಿಲ್ಲ. ಕೆಲವು ಥಕ್ಕನೆ ಸುದ್ದಿಯಾಗಿ ಮಾರನೆಯ ದಿನವೇ ಮಸುಕಾಗಿಹೋಗಿವೆ. ಹೀಗಾದಾ ಗಲೆಲ್ಲ, 'ಇದೆಲ್ಲ ಇರುವುದೇ ಹೀಗೆ, ಏನೂ ಮಾಡಲಿಕ್ಕೆ ಸಾಧ್ಯವಿಲ್ಲ' ಎಂಬಿತ್ಯಾದಿ ಮಾತುಗಳು ಹೊಮ್ಮಿ ನಾಗರಿಕರ 'ಸಹೃದಯ'ವನ್ನು ಹಿಂಡುತ್ತವೆ. ಅತ್ಯಾಚಾರವೆಂಬುದು ಮಹಿಳೆಯರ ಮೇಲಷ್ಟೇ ಆಗುವುದಲ್ಲ, ಪುರುಷರ ಮೇಲೆ, ಅದರಲ್ಲೂ ಅಪ್ರಾಪ್ತ ಬಾಲಕರ ಮೇಲೆ ಕೂಡ ಆಗುತ್ತದೆ ಎನ್ನುವುದೆಲ್ಲ ತಿಳಿದ ವಿಚಾರವೇ. ಆದರೆ ಹೆಣ್ಣಿನ ಮೇಲಾಗುವ ಅತ್ಯಾಚಾರ ಪ್ರಮಾಣವು, ಯಾವುದೇ ದೇಶ/ರಾಜ್ಯವನ್ನು ತೆಗೆದುಕೊಂಡರೂ, ಐದಾರು ಪಟ್ಟು ಹೆಚ್ಚು.

ಸಾಮಾನ್ಯವಾಗಿ ಇಂಥ ಘಟನೆಯಾದಾಗ, ಎಲ್ಲ ಸಮಾಜಗಳಲ್ಲಿ, ದೇಶಗಳಲ್ಲಿ ಇದರ ಪರಿಹಾರೋಪಾಯದ ಬಗ್ಗೆ ಒಂದಿಷ್ಟು ಚರ್ಚೆಯಾಗುತ್ತದೆ. ''ದುಬೈ, ಮಧ್ಯಪ್ರಾಚ್ಯ ದೇಶಗಳಲ್ಲಿರುವಂಥ ಕಠಿಣ ಕಾನೂನು ನಮ್ಮಲ್ಲೂ ಇರಬೇಕು; ತ್ವರಿತ ನ್ಯಾಯ ವಿಲೇವಾರಿ, ಸ್ಪೆಷಲ್ ಕೋರ್ಟ್ ಬೇಕು'' ಎಂಬಿತ್ಯಾದಿ ಹೇಳುವುದು, 'ಕಾನೂನು ಬದಲಾವಣೆಯ ಮಾರ್ಗವೇ ಸರಿ' ಎನ್ನುವುದು ಒಂದು ವರ್ಗದ ಮಂದಿಯ ವಾಡಿಕೆ. ಇನ್ನು ಕೆಲವರ ವಾದವು ಸಮಾಜದಲ್ಲಿನ ಮೌಲ್ಯಕ್ಕೆ ಸಂಬಂಧಿಸಿದ್ದು; ''ವೇಶ್ಯಾವಾಟಿಕೆಯನ್ನು ಸಮಾಜ ಒಪ್ಪಿಕೊಳ್ಳಬೇಕು, ಅದುವೇ ಪರಿಹಾರ'' ಎಂಬುದು ಮತ್ತೊಂದು ವರ್ಗದ ವಾದ. ಒಟ್ಟಾರೆ, ನಮ್ಮ ಸುತ್ತಲೂ ಆಗಿಹೋಗುವ ಅತ್ಯಾಚಾರಗಳಿಗೆ ಪರಿಹಾರ ಹುಡುಕಿ ಹೊರಟಾಗ, ಎದುರಿಗೆ ಸಿಗುವ ಎಲ್ಲ ವಿಚಾರಗಳಲ್ಲೂ ಒಂದೊಂದು ನ್ಯೂನತೆಗಳು ಪುನಃ ಮುನ್ನೆಲೆಗೆ ಬಂದು, ಒಂದಿಷ್ಟು ಗೊಂದಲಗಳಾಗುತ್ತವೆ. ''ಎಲ್ಲವೂ ಆಗಬೇಕು, ಕಾನೂನು ಬದಲಾಯಿಸಿಕೊಳ್ಳುವುದರ ಜತೆಜತೆಗೆ ವೇಶ್ಯಾವಾಟಿಕೆ ಕೂಡ ಇರಬೇಕು'' ಎಂಬ 'ಮಿಶ್ರವಾದ' ಮಂಡಿಸುವ ಇನ್ನೊಂದು ವರ್ಗವೂ ಇದೆ.

ವೇಶ್ಯಾವಾಟಿಕೆಯ ಜಾಗತಿಕ ಇತಿಹಾಸವನ್ನು ಬಿಚ್ಚಿಡುವ ಒಂದೊಳ್ಳೆ ಪುಸ್ತಕ- 'ಲವ್ ಫಾರ್ ಸೇಲ್'. ಇದನ್ನು ಬರೆದವರು ನಾರ್ವೆ ದೇಶದ ಬರಹಗಾರ ನೀಲ್ಸ್ ಜೋಹಾನ್ ರಿಂಗ್‌ದಾಲ್. ಇದರಲ್ಲಿ ನೀಲ್ಸ್ ಒಂದು ಕಡೆ, ''ಯಾರೇ ತಮ್ಮ ದೇಹವನ್ನು ಕಾಮಕ್ಕಾಗಿ ಮಾರಿಕೊಳ್ಳ ಬಯಸಿದಲ್ಲಿ ಮತ್ತು ಅದು ಒತ್ತಾಯಪೂರ್ವಕವಾಗಿಲ್ಲದಿದ್ದಲ್ಲಿ, ಕಾಮವನ್ನು ಬಯಸುವ ಮತ್ತು ಒದಗಿಸುವ- ಹೀಗೆ ಇಬ್ಬರನ್ನೂ ಶಿಕ್ಷೆಗೆ ಗುರಿಪಡಿಸುವುದು ಎಷ್ಟು ಸರಿ?'' ಎಂದು ಪ್ರಶ್ನಿಸುತ್ತಾರೆ. ''ಈ ರೀತಿ, ಒತ್ತಾಯವಲ್ಲದ ವೇಶ್ಯಾವಾಟಿಕೆ ಒಂದು ರೀತಿಯ ಖಾಸಗಿ ವ್ಯವಹಾರ; ಇದನ್ನು ಪ್ರಶ್ನಿಸಲು ಸರಕಾರಕ್ಕೆ ಅಧಿಕಾರವಿಲ್ಲ'' ಎಂದು ಪ್ರತಿಪಾದಿಸುತ್ತಾರೆ. ಭಾರತವೂ ಸೇರಿದಂತೆ ಹತ್ತು ಹಲವು ದೇಶಗಳ ವೇಶ್ಯಾವಾಟಿಕೆಯ ಇತಿಹಾಸವನ್ನು ನೀಲ್ಸ್ ಇದೇ ಪುಸ್ತಕದಲ್ಲಿ ಬಿಚ್ಚಿಡುತ್ತಾರೆ. ಈ ಪುಸ್ತಕವನ್ನು ಓದಿದಾಗ, ವೇಶ್ಯಾವಾಟಿಕೆಯ ಬಗೆಗಿನ ಒಂದು ಹೊಸ ಆಯಾಮವೇ ನಮ್ಮೆದುರಿಗೆ ತೆರೆದುಕೊಳ್ಳುತ್ತದೆ.

ಮನುಷ್ಯ ಸಮಾಜದ ಅತಿಹಳೆಯ ಮತ್ತು ಲಾಭದಾಯಕ ವೃತ್ತಿಯಲ್ಲಿ ವೇಶ್ಯಾವಾಟಿಕೆ ಕೂಡ ಒಂದು. ಎಷ್ಟು ಹಳೆಯದು ಎನ್ನುವುದಕ್ಕೆ ಯಾವುದೇ ಇತಿಹಾಸದ ಪುಟ ತೆರೆದು ನೋಡಿದರೂ ಅಲ್ಲಿರುವ ಉಲ್ಲೇಖಗಳು, ಕಥೆಗಳೇ ಸಾಕ್ಷಿಯಾಗುತ್ತವೆ. ಇನ್ನು, ಅದೆಷ್ಟು ಲಾಭದಾಯಕ ಎಂಬ ಪ್ರಶ್ನೆ. 'ಅರ್ಬನ್ ಇನ್‌ಸ್ಟಿಟ್ಯೂಟ್' ಸಂಸ್ಥೆಯು ಅಮೆರಿಕದ 10 ನಗರಗಳಲ್ಲಿ ನಡೆಸಿದ ಸಮೀಕ್ಷೆ ಈ ನಿಟ್ಟಿನಲ್ಲಿ ಒಂದಿಷ್ಟು ಬೆಳಕು ಚೆಲ್ಲುತ್ತದೆ. ಅಮೆರಿಕದ ಅಟ್ಲಾಂಟಾ ಪ್ರದೇಶದ ಅತ್ಯಂತ ದುಬಾರಿ ವೇಶ್ಯೆಯು ಪ್ರತಿ ವಾರಕ್ಕೆ ಸುಮಾರು 33,000 ಡಾಲರ್ ಸಂಪಾದಿಸುತ್ತಾಳಂತೆ. ಇದನ್ನು ವರ್ಷಕ್ಕೆ ಅನ್ವಯಿಸಿದರೆ ರುಪಾಯಿ ಲೆಕ್ಕದಲ್ಲಿ 12 ಕೋಟಿ! ಈ ಮೊತ್ತವನ್ನು ಮೊದಲಿಗೆ ನೋಡಿದಾಗ ನಾನು ಕೂಡ ಕಣ್ಣುಜ್ಜಿಕೊಂಡು ಸೊನ್ನೆಗಳನ್ನು ಇನ್ನೊಮ್ಮೆ ಲೆಕ್ಕಹಾಕಿದ್ದೆ. ಹಾಗಂತ ಅಮೆರಿಕದ ವೇಶ್ಯೆಯರೆಲ್ಲ ಇಷ್ಟೇ ದುಡ್ಡು ಮಾಡುತ್ತಾರೆಂದಲ್ಲ. ''ಇಷ್ಟು ಲಾಭವೇ! ಈಗ ಕಾಲ ಕೆಟ್ಟುಹೋಗಿದೆ, ಹಾಗಾಗಿ ಇದು ಇಷ್ಟು ಲಾಭ ತರುವ ವೃತ್ತಿಯಾಗಿದೆ'' ಎಂದು ಮೂಗು ಮುರಿಯಬೇಕಿಲ್ಲ. ಬಹಳ ಹಿಂದಿನ ಕಾಲದಿಂದಲೂ, ವೇಶ್ಯಾವಾಟಿಕೆ ಎಂಬುದು ಅತ್ಯಂತ ಲಾಭ ತರುವ ವೃತ್ತಿ ಎಂಬ ಸಂಗತಿಯು 'ಲವ್ ಫಾರ್ ಸೇಲ್' ಪುಸ್ತಕದಿಂದ ತಿಳಿಯುತ್ತದೆ. 'ಫ್ರೀಕಾನೊಮಿಕ್ಸ್' ಖ್ಯಾತಿಯ ಸ್ಟೀವನ್ ಲೆವಿಟ್ ಮತ್ತು ಕಿನ್ಸ್ಲೆ ಇನ್‌ಸ್ಟಿಟ್ಯೂಟ್‌ನ ವರದಿಯ ಪ್ರಕಾರ, 1900ರಲ್ಲಿ ಅಂದಿನ ಹಣದ ಬೆಲೆಯನ್ನು ಇಂದಿಗೆ ಹೋಲಿಸಿಕೊಂಡಲ್ಲಿ ವೇಶ್ಯೆಯೊಬ್ಬಳು ಇಂದಿಗಿಂತ ಎರಡು ಪಟ್ಟು ಹೆಚ್ಚು ಹಣವನ್ನು ಅಂದು ಸಂಪಾದಿಸುತ್ತಿದ್ದಳು. ಇದನ್ನು ಅರ್ಥಶಾಸ್ತ್ರಜ್ಞರು 'ಬೇಡಿಕೆ ಮತ್ತು ಪೂರೈಕೆ'ಯ ಮಸೂರದಡಿ ಇಟ್ಟು ನೋಡುತ್ತಾರೆ! 1948ರಲ್ಲಿ ಹಣ ಕೊಟ್ಟು ಸೆಕ್ಸ್ ಪಡೆವ ಪುರುಷರ ಸಂಖ್ಯೆಯು ಅಮೆರಿಕದಲ್ಲಿ ಶೇ.69ರಷ್ಟಿದ್ದರೆ, ಉಳಿದ ರಾಷ್ಟ್ರಗಳಲ್ಲಿನ ಪ್ರಮಾಣವೂ ಬಹುತೇಕ ಇಷ್ಟೇ ಇತ್ತು. ಈಗ ಅದರ ಪ್ರಮಾಣ ಶೇ.10-12ಕ್ಕೆ ಇಳಿದಿದೆ. ಅಂದಿನ ಕಾಲದಲ್ಲಿ ಸಾಮಾಜಿಕ ಕಾರಣಗಳಿಂದಾಗಿ ಹಣ ಪಡೆದು ಸೆಕ್ಸ್ ಅನ್ನು ನೀಡುವ ವೇಶ್ಯೆಯರ ಸಂಖ್ಯೆ ಕಡಿಮೆಯಿದ್ದುದರಿಂದಾಗಿ, ಸೆಕ್ಸ್ ಪಡೆಯಲು ಸಹಜವಾಗಿ ಹೆಚ್ಚಿನ ಹಣ ತೆರಬೇಕಾಗಿತ್ತು. ಇಂದು ವೇಶ್ಯಾವಾಟಿಕೆಗೆ ಇಂಟರ್ನೆಟ್ ಬಜಾರಿದೆ, ದಂಧೆಗೆ ಹತ್ತಾರು ಮಾರ್ಗಗಳಿವೆ. ಇಂಟರ್ನೆಟ್‌ನಲ್ಲಿ ಸುಲಭದಲ್ಲಿ ಸೆಕ್ಸ್ ಅನ್ನು ಮಾರಲು ಅವಕಾಶಗಳಿವೆ. ಇಂಟರ್ನೆಟ್ ಕಾರಣದಿಂದಾಗಿಯೇ ಕಾನೂನುಬಾಹಿರ ವೇಶ್ಯಾವಾಟಿಕೆಯನ್ನು ನಿಲ್ಲಿಸುವುದು, ಬಂಧಿಸುವುದು ಇವೆಲ್ಲ ಇನ್ನಷ್ಟು ಕಷ್ಟಕರವಾಗಿದೆ.

ಹಾಗಂತ, ಕಾನೂನುಬಾಹಿರ ವೇಶ್ಯಾವಾಟಿಕೆ ಇಂದಿನ ದಿನದಲ್ಲಿ ಅಂದುಕೊಂಡಷ್ಟು ಸುಲಭದ್ದಲ್ಲ; ಮುಂದುವರಿದ ಪೊಲೀಸ್ ವ್ಯವಸ್ಥೆ ಮತ್ತು ಕಠಿಣ ಶಿಕ್ಷೆಗಳಿಂದಾಗಿ ಅದು ಇನ್ನಷ್ಟು ಕಷ್ಟಸಾಧ್ಯವಾಗಿದೆ. ಈ ಕಾರಣಕ್ಕೆ 'ಕಾನೂನುಬದ್ಧ ವೇಶ್ಯಾವಾಟಿಕೆ'ಯ ಬೇಡಿಕೆ ಹೆಚ್ಚುತ್ತಿದೆ ಅಂತ ನೀವಂದುಕೊಂಡಿದ್ದರೆ ಅದೂ ತಪ್ಪು. ಅದಕ್ಕೆ ಕೆಲವೊಂದು ವಿಚಿತ್ರ ಕಾರಣಗಳಿವೆ. ಅಮೆರಿಕ ಸೇರಿದಂತೆ ಬಹುತೇಕ ರಾಷ್ಟ್ರಗಳಲ್ಲಿಂದು ಕಾನೂನುಬದ್ಧ ವೇಶ್ಯಾಗೃಹಗಳು ಸಂಕಷ್ಟದಲ್ಲಿವೆ. ವೇಶ್ಯಾವಾಟಿಕೆಯನ್ನು ಕಾನೂನುಬದ್ಧಗೊಳಿಸಿದ್ದಲ್ಲಿ ಸರಕಾರವೇ ಒಂದಿಷ್ಟು ನೀತಿ-ನಿಯಮಗಳನ್ನು ರೂಪಿಸಬೇಕಾಗುತ್ತದೆ. ಸಾಮಾನ್ಯವಾಗಿ ಸರಕಾರವು ವೇಶ್ಯಾವಾಟಿಕೆಗೆಂದೇ ಒಂದಿಷ್ಟು ಪ್ರದೇಶವನ್ನು ಗೊತ್ತುಮಾಡಿರುತ್ತದೆ, ಅಲ್ಲಿ ಮಾತ್ರವೇ ಈ ಬಾಬತ್ತಿಗೆ ಒಪ್ಪಿಗೆಯಿರುತ್ತದೆ. ಇಂಥ ಕಾನೂನುಬದಟಥಿ ವೇಶ್ಯಾವಾಟಿಕೆಗೆ ನೂರೆಂಟು ಕಟ್ಟಳೆಗಳಿರುತ್ತವೆ. ಅಂದರೆ- ಅಲ್ಲಿ ಕೆಲಸ ಮಾಡುವವರು ವಾರಕ್ಕೊಮ್ಮೆ ಗುಪ್ತರೋಗಗಳ ಪರೀಕ್ಷೆ ಮಾಡಿಸಿಕೊಳ್ಳಬೇಕು, ಇಲ್ಲಿ ದಕ್ಕುವ ಆದಾಯಕ್ಕೆ ತೆರಿಗೆ ಕಟ್ಟಬೇಕು, ತಿಂಗಳಿಗೊಮ್ಮೆ ಎಚ್‌ಐವಿ ಪರೀಕ್ಷಿಸಿಕೊಳ್ಳಬೇಕು, ಗ್ರಾಹಕನಿಗೆ ಗುಪ್ತರೋಗ ಅಮರಿಕೊಂಡರೆ ವೇಶ್ಯಾಗೃಹವೇ ಅದರ ಹೊಣೆಹೊರ

☞ 12

# ಡಿಸೆಂಬರ್ 31 ಪಾರ್ಟಿ ನಂತರ ಕಾಣೆಯಾಗಿದ್ದ ವ್ಯಕ್ತಿ ಶವವಾಗಿ ಪತ್ತೆ

# ಇದು ಆಕಸ್ಮಿಕ ಸಾವಾ...? ಕೊಲೆನಾ...?



ಮೃತ ದುರ್ದೈವಿ ವಾಟರ್‌ಮೆನ್ ಮಧು

**ಸಾಮಾನ್ಯವಾಗಿ ಯಾವುದಾದರೊಂದು ನೆಪ ಮಾಡಿಕೊಂಡು ಸ್ನೇಹಿತರು, ಸಂಬಂಧಿಕರು ಪಾರ್ಟಿ ಮಾಡುವುದು ಸಹಜವಾಗಿರುವ ವಿಚಾರ. ಕೆಲವರು ಮೊದಲೇ ಸ್ಕೆಚ್ ಹಾಕಿಕೊಂಡು ಎಣ್ಣೆ ಪಾರ್ಟಿ ಫುಲ್ ಟೈಟ್ ಆದ ನಂತರ ಸಣ್ಣಪುಟ್ಟ ವಿಚಾರಕ್ಕೆ ಗಲಾಟೆ ತೆಗೆದು ಕೊನೆಗೆ ಕೊಲೆ ಮಾಡಿ ಕಾಣದಂಗೆ ನಾಪತ್ತೆಯಾಗುತ್ತಾರೆ. ಇಂತಹ ಪ್ರಕರಣಗಳನ್ನು ಪೊಲೀಸ್ ಅಧಿಕಾರಿಗಳು ತನಿಖೆ ನಡೆಸಿ ಕೊಲೆ ಮಾಡಿ ತಲೆಮರೆಸಿಕೊಂಡಿದ್ದ ಆರೋಪಿಗಳನ್ನು ಎಡೆಮುರಿಕಟ್ಟಿ ಜೈಲಿಗಟ್ಟಿರುವ ಸುಮಾರು ಪ್ರಕರಣಗಳು ಇವೆ. ಅದರಲ್ಲೂ ಹೊಸ ವರ್ಷ ಬರುತ್ತಿದ್ದಂತೆ ಹಳೆಯ ವರ್ಷ ಸವಿ ನೆನಪುಗಳು ನೋವು, ನಲಿವುಗಳನ್ನು ಮರೆತು ಹೊಸ ವರ್ಷ ಬರ ಮಾಡಿಕೊಳ್ಳುವ ವಿಚಾರಕ್ಕೆ ಡಿಸೆಂಬರ್ 31ರಂದು ಎಷ್ಟೋ ಜನ ಅವರವರ ಊರುಗಳಲ್ಲಿ ಎಣ್ಣೆ ಪಾರ್ಟಿ ಮಾಡಿ ಕೇಕ್ ಕಟ್ ಮಾಡುವುದು ಒಂದು ವಿಶೇಷತೆ. ಇನ್ನು ಕೆಲವರು ಗಲಾಟೆ ಪಲಾಟೆ ಮಾಡಿಕೊಂಡು ಗಂಟಲು ಪೂರ್ತಿ ಕುಡಿದು ಅಮಲಿನಲ್ಲಿ ಯಾರು ಯಾರನ್ನ ಸಾಯಿಸುತ್ತಾರೆ ಎಂಬುದು ಗೊತ್ತೇ ಆಗುವುದಿಲ್ಲ. ಇಂತಹ ವಿಚಾರಗಳನ್ನು ಪತ್ತೆ ಮಾಡುವುದೇ ಪೊಲೀಸರಿಗೆ ಒಂದು ದೊಡ್ಡ ತಲೆನೋವಾಗಿದೆ.**



ಮೃತನ ಬಾಮೈದ ಸಾಗರ್ – ಅನುಮಾನಸ್ಪದ ವ್ಯಕ್ತಿ

## ರಾಮನಗರ

✍ ಶಾಂತರಾಜು ಜಿ. ಕಲ್ಲಹಳ್ಳಿ

ರಾಮನಗರ ಜಿಲ್ಲೆ ಚನ್ನಪಟ್ಟಣದ ಗ್ರಾಮಾಂತರ ಪೊಲೀಸ್ ಠಾಣಾ ವ್ಯಾಪ್ತಿಯ ಮಳೂರು ಪಟ್ಟಣದ ಗ್ರಾಮದಲ್ಲಿ ವಾಟರ್‌ಮೆನ್ ಆಗಿ ಕೆಲಸ ಮಾಡುವ ಮೂಲಕ ಇಡೀ ಗ್ರಾಮದ ಪ್ರತಿ ಮನೆಯಲ್ಲಿ ಪರಿಚಿತನಾಗಿ ಎಲ್ಲರ ಮನದಲ್ಲಿ ಮನೆ ಮಾಡಿದ್ದ ಮಧು. ಈತ ಡಿಸೆಂಬರ್ 31ರ ರಾತ್ರಿ ತನ್ನ ಪತ್ನಿಯ ದೊಡ್ಡಪ್ಪನ ಮಗ ಸಾಗರ್ ಎಂಬಾತನ ಜೊತೆ ಹೊಸ ವರ್ಷದ ಪಾರ್ಟಿ ಮಾಡಲು ಫಿಕ್ಸ್ ಆಗಿ ಮಳೂರು ಪಟ್ಟಣ ಗ್ರಾಮದಿಂದ ಕೂಡ್ಲೂರು ಗ್ರಾಮದ ಕಡೆ ಸ್ಯಾಂಟ್ರೋ ಕಾರಿನಲ್ಲಿ ಹೋಗಿ ಎಣ್ಣೆ ಪಾರ್ಟಿ ಮುಗಿದ ನಂತರ ವಾಟರ್‌ಮೆನ್ ಮಧು ಕಾಣೆಯಾಗಿದ್ದಾನೆ ಎನ್ನಲಾಗಿದ್ದು, ಅಲ್ಲದೆ ಅಂದು ರಾತ್ರಿ ಮಧು ಪತ್ನಿಗೆ ಮೊಬೈಲ್ ಮೂಲಕ ಕರೆ ಮಾಡಿ ನನ್ನನ್ನು ಯಾರೋ ಬಂದು ಹೊಡೆಯುತ್ತಿದ್ದಾರೆ ಎಂದು ಹೇಳಿದ ನಂತರ ಮೊಬೈಲ್ ಸ್ವಿಚ್ ಆಫ್ ಆಗಿತ್ತು ಎಂದು ಮಧು ಪತ್ನಿ ತಿಳಿಸಿದ್ದಾರೆ. ಈ ವಿಚಾರವಾಗಿ ಮಧು ಅವರ ಕುಟುಂಬದವರು ಚನ್ನಪಟ್ಟಣ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಮಧು ಕಾಣೆಯಾಗಿರುವ ಬಗ್ಗೆ ದೂರು ನೀಡಲಾಗಿ, ಮೂರು ದಿನಗಳು ಕಳೆದ ನಂತರ ಮಧು ಪಾಳುಬಾವಿಯಲ್ಲಿ ಕೊಳೆತ ಸ್ಥಿತಿಯಲ್ಲಿ ಶವವಾಗಿ ಪತ್ತೆಯಾಗಿದ್ದು, ಮಧು ಪತ್ನಿಯ ದಾಯಾದಿ ಅಂದ್ರೆ ದೊಡ್ಡಪ್ಪನ ಮಗ ಸಾಗರ್‌ನಿಂದಲೇ ಕೊಲೆಯಾಗಿದ್ದಾನೆ ಎಂಬ ಅನುಮಾನ ಗ್ರಾಮಸ್ಥರಲ್ಲಿ ವ್ಯಕ್ತವಾಗಿದೆ.



ಮಧು ಮೃತದೇಹ ಹೊರ ತೆಗೆದಿರುವುದು

### ಮೃತ ಮಧು ಪ್ರೇಮವಿವಾಹ


ಮಳೂರು ಪಟ್ಟಣ ಗ್ರಾಮದ ವಾಟರ್‌ಮೆನ್ ಆಗಿದ್ದ ಮಧು ಇದೇ ಗ್ರಾಮದ ಯುವತಿಯನ್ನು ಪ್ರೀತಿಸಿ ಮದುವೆ ಆಗಿದ್ದ. ಈ ಪ್ರೇಮವಿವಾಹಕ್ಕೆ ಆರಂಭದಲ್ಲಿ ಸ್ವಲ್ಪ ವಿರೋಧ ಎದುರಾದರೂ ಗ್ರಾಮದಲ್ಲಿ ಒಳ್ಳೆಯ ಹೆಸರು ಮಾಡಿದ್ದ ಮಧು, ಈತನಿಗೆ ಸ್ನೇಹಿತರು ಮತ್ತು ಗ್ರಾಮಸ್ಥರ ಸಹಕಾರ ಸಿಕ್ಕ ನಿಟ್ಟಿನಲ್ಲಿ ಇವರ ಪ್ರೇಮವಿವಾಹಕ್ಕೆ ಯಾವುದೇ ರೀತಿ ಸಮಸ್ಯೆ ಇರಲಿಲ್ಲ. ಅಲ್ಲದೇ ಈ ನವಜೋಡಿ ಸುಖಕರ ಜೀವನ ಸಾಗಿಸುತ್ತಿದ್ದರು. ಈ ದಂಪತಿಗಳಿಗೆ ಆರು ತಿಂಗಳ ಹೆಣ್ಣು ಮಗು ಇದೆ. ಮಧು ಈತನ ಪ್ರೇಮವಿವಾಹದ ಹಿನ್ನೆಲೆಯಲ್ಲಿ ಈ ಕೊಲೆ ನಡೆದಿದೆಯೆ ಎಂಬ ಅನುಮಾನವೂ ಸಹ ಗ್ರಾಮಸ್ಥರಲ್ಲಿ ಮೂಡಿದೆ ಎಂಬುದು ಎಲ್ಲೆಡೆ ಕೇಳಿಬರುತ್ತಿದೆ.

ಮಧು ಪತ್ನಿಯ ದೊಡ್ಡಪ್ಪನ ಮಗ ಸಾಗರ್‌ನ ಕಾರಿನಲ್ಲಿ ಹೊಸ ವರ್ಷದ ಪಾರ್ಟಿ ಮಾಡಲು ಹೋಗಿದ್ದ. ಅಂದು ಹೊಸ ವರ್ಷದ ಆರಂಭಕ್ಕೂ ಮುನ್ನವೇ ಅಂದರೆ ಡಿಸೆಂಬರ್ 31ರ ರಾತ್ರಿ 11 ಗಂಟೆ 13 ನಿಮಿಷದಲ್ಲಿ ಮಧು ಪತ್ನಿಗೆ ಕರೆ ಮಾಡಿ ನಿಮ್ಮವರು ನನ್ನನ್ನು ಹೊಡೆದು ಸಾಯಿಸುತ್ತಿದ್ದಾರೆ ಎಂದು ಹೇಳಇದ್ದು, ಬಳಿಕ ಫೋನ್ ಕಟ್ ಆಗಿದೆ. ನಂತರ ಮತ್ತೆ ಮಧು ಪತ್ನಿ ಪತಿಯ ಮೊಬೈಲ್‌ಗೆ ಕರೆ ಮಾಡಿದಾಗ ಎಂಗೇಜ್ ಬಂದಿದ್ದು ರಾತ್ರಿ 11 ಗಂಟೆ 17 ನಿಮಿಷಕ್ಕೆ ಮೊಬೈಲ್ ಸ್ವಿಚ್ ಆಫ್ ಆಗಿದೆ ಎಂದು ತಿಳಿಸಿದ್ದು, ಕೊಲೆ ಮಾಡಿದವರೆ ಮಧುರವರ ಮೊಬೈಲ್‌ನಿಂದ ಪತ್ನಿಗೆ ಕರೆ ಮಾಡಿ ಯಾರೋ ಹೊಡೆಯುತ್ತಿದ್ದಾರೆ ಎಂದು ಹೇಳಿರಬಹುದು ಎಂದು ಮಧುನ ಸ್ನೇಹಿತರು ಅನುಮಾನ ವ್ಯಕ್ತಪಡಿಸಿದ್ದಾರೆ.


ವಾಟರ್‌ಮೆನ್ ಮಧು ಕಾಣೆಯಾಗಿರುವ ಬಗ್ಗೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾದ ನಂತರ ಗ್ರಾಮಾಂತರ ಪೊಲೀಸರು ಗ್ರಾಮದಲ್ಲಿ ವಿಚಾರಣೆ ಮಾಡಿದ್ದು, ಜೊತೆಗೆ ಗ್ರಾಮದ ರಸ್ತೆಯಲ್ಲಿದ್ದ ಸಿ.ಸಿ. ಕ್ಯಾಮರಾವನ್ನು ಪರಿಶೀಲನೆ ನಡೆಸಲಾಗಿ ಅದರಲ್ಲಿ ಸೆರೆಯಾಗಿದ್ದ ಸಾಕಷ್ಟು ದೃಶ್ಯಗಳನ್ನು ಪರಿಶೀಲನೆ ಮಾಡಿದ್ದು, ಈ ವೇಳೆ ಸಾಗರ್ ಮತ್ತು ಮಧು ಕೆರೆ ಏರಿಯ ಮೇಲೆ ನಿಂತು ವಾಗ್ವದ ಗಲಾಟೆ ಮಾಡುತ್ತಿರುವ ಬಗ್ಗೆ ದೃಶ್ಯ ಕಂಡು ಬಂದಿದ್ದು, ಈ ನಿಟ್ಟಿನಲ್ಲಿ ಪೊಲೀಸರು ಸಾಗರ್‌ನನ್ನು ವಶಕ್ಕೆ ಪಡೆದು ವಿಚಾರಣೆ ಮಾಡಿದ ಬಳಿಕ ಗ್ರಾಮದಲ್ಲೇ ಇದ್ದ ಸಾಗರ್ ಶುಕ್ರವಾರ ಮಧು ಶವ ಪತ್ತೆಯಾಗಿ ಶವ ಸಾಗಿಸುತ್ತಿದ್ದಂತೆ ಸಾಗರ್ ಮತ್ತು ಆತನ ತಂದೆ ಅಲ್ಲಿಂದ ನಾಪತ್ತೆಯಾಗಿದ್ದಾರೆ ಎನ್ನುವ ಚರ್ಚೆಗಳು ಗ್ರಾಮಸ್ಥರಲ್ಲಿ ಕೇಳಿ ಬಂದಿದೆ.



ಎಸ್ಪಿ ಕಾರ್ತಿಕ್ ರೆಡ್ಡಿ



ಡಿವೈಎಸ್ಪಿ ಕೆ.ಸಿ. ಗಿರಿ



ಸಿಪಿಐ ಟಿ.ಟಿ. ಕೃಷ್ಣ

ಈ ಪ್ರಕರಣದಲ್ಲಿ ಸಾಗರ್‌ನನ್ನು ವಶಕ್ಕೆ ಪಡೆದಿದ್ದ ಪೊಲೀಸರು ವಿಚಾರಣೆ ಮಾಡಿದ ವೇಳೆ ಸಾಗರ್

☞ 10






ಸಿಸಿಟಿವಿಯಲ್ಲಿ ಸೆರೆ ಸಿಕ್ಕ ದೃಶ್ಯ




ಜೆಸಿಬಿ ಮೂಲಕ ಶವ ಹೊರ ತೆಗೆಯುತ್ತಿರುವುದು

## ಸಹೋದರ ಸಂಬಂಧಿಗಳ ನಡುವೆ ಭುಗಿಲೆದ್ದ ಜಮೀನು ವಿವಾದ...

# 24ರ ತರುಣನನ್ನು ಕೊಚ್ಚಿ ಕೊಚ್ಚಿ ಕೊಲೆಗೈದು ಆತನ ತಂದೆಯನ್ನು ಬರ್ಬರವಾಗಿ ಗಾಯಗೊಳಿಸಿದ ಹಂತಕ ಯುವಕನ ಬಂಧನ!


ಸಹೋದರ ಸಂಬಂಧಿಯಿಂದಲೇ ಕೊಲೆಯಾದ ರಾಮಪ್ಪ ಕೌಜಲಗಿ


ಜಮೀನು ವಿವಾದದಲ್ಲಿ ಕೊಲೆಗಾರನಾದ ಸಿದ್ದಪ್ಪ ಕೌಲಲಗಿ

**ಬೆಳಗಾವಿ**
ಮನ್ನಾಪೂರ

**ತನ್ನ ಖಾಸಾ ಅಣ್ಣ ತನ್ನ ಪಾಲಿನ ಜಮೀನನ್ನು ತಮ್ಮನಿಗೆ ಪಾಲಿನಿಂದ ನೀಡದೆ ಸಹೋದರ ಸಂಬಂಧಿಗೆ ನೀಡಿದ್ದನು. ಇದನ್ನು ವಿರೋಧಿಸಿದ ತಂದೆ-ಮಗ ಇಬ್ಬರು 'ನಮ್ಮ ಅಣ್ಣನ ಜಮೀನು ನೀನೇಕೆ ಪಾಲಿನಿಂದ ಮಾಡಿರುವೆ... ಅದನ್ನು ನಾವು ಮಾಡುತ್ತೇವೆ' ಎಂದು ಎರಡು ವರ್ಷಗಳಿಂದ ವಾದ-ವಿವಾದ ಪರಸ್ಪರರಲ್ಲಿ ನಡೆದಿತ್ತು. ಜಮೀನನ್ನು ಪಾಲಿನಿಂದ ಮಾಡಿದ್ದ ಸಹೋದರ ಸಂಬಂಧಿ ಮತ್ತು ಆತನ ಮಗ ನೀರು ಉಣಿಸುವ ವಿಚಾರದಲ್ಲಿ ಮೇಲಿಂದ ಮೇಲೆ ಜಗಳ ಕಾಯುತ್ತಿದ್ದರು. ಈ ಕುರಿತು ಊರಲ್ಲಿ ರಾಜಿ ಪಂಚಾಯತಿಗಳು ನಡೆದಿದ್ದವು. ಇತ್ತೀಚಿಗೆ ಜಮೀನಿಗೆ ನೀರು ಉಣಿಸುವ ವಿಚಾರದಲ್ಲಿ ವಿವಾದ ಭುಗಿಲೆದ್ದಿತ್ತು. ಕಳೆದ ದಿನಾಂಕ 30-12-2025ರಂದು ಸಾಯಂಕಾಲ ನೀರಿನ ಜಗಳ ತಾರಕಕ್ಕೇರಿದೆ. ಇದರಿಂದ ಆಕ್ರೋಶಗೊಂಡ ಸಹೋದರ ಸಂಬಂಧಿಯ ಮಗ ಕಬ್ಬು ಕತ್ತರಿಸುವ ಕುಡುಗೋಲಿನಿಂದ 24 ವರ್ಷದ ಯುವಕನನ್ನು ಅಟ್ಟಾಡಿಸಿಕೊಂಡು ಬರ್ಬರವಾಗಿ ಕೊಚ್ಚಿ... ಕೊಚ್ಚಿ ಕೊಲೆಗೈದಿದ್ದಾನೆ. ಇದ್ದೊಬ್ಬ ಮಗನನ್ನು ರಕ್ಷಿಸಿಕೊಳ್ಳಲು ಧಾವಿಸಿದ ತಂದೆಯನ್ನು ಮಾರಣಾಂತಿಕವಾಗಿ ಗಾಯಗೊಳಿಸಿದ್ದಾನೆ. ಪ್ರಕರಣ ದಾಖಲಿಸಿಕೊಂಡು ತನಿಖೆಗೆ ಇಳಿದ ಸಿಪಿಐ ಶ್ರೀಶೈಲ ಬ್ಯಾಕೋಡ, ಪಿಎಸ್ಐ ರಾಜು ಪೂಜೇರಿ ಮತ್ತು ಸಿಬ್ಬಂದಿಗಳು ಹಂತಕ ಯುವಕನನ್ನು ಬಂಧಿಸಿ ಜೈಲಿಗಟ್ಟಿರುವ ಪ್ರಕರಣ ಬೆಳಗಾವಿ ಜಿಲ್ಲೆ ಮೂಡಲಗಿ ಪೊಲೀಸ್ ಠಾಣೆಯ ವ್ಯಾಪ್ತಿಯ ಪುಲಗಡ್ಡಿ ಗ್ರಾಮದಿಂದ ವರದಿಯಾಗಿದೆ.**

'ಹೆಣ್ಣಿಗಾಗಿ ರಾಮಾಯಣ-ಮಣ್ಣಿಗಾಗಿ ಮಹಾಭಾರತ' ಎಂಬ ಮಾತು ಐತಿಹಾಸಿಕ ಸತ್ಯವಾಗಿದೆ. ಆದರೂ ನಮ್ಮಲ್ಲಿ ದುರಾಸೆ ಕಡಿಮೆ ಆಗಿಲ್ಲ. 'ಹೆಣ್ಣು... ಹೊನ್ನು... ಮಣ್ಣು' ಇವುಗಳ ಬೆನ್ನು ಬಿದ್ದು ಘೋರ ದುರಂತವನ್ನು ಕಂಡವರು ಬಹಳಷ್ಟು ಜನರಿದ್ದಾರೆ. ಇದಕ್ಕೆ


ಎಸ್ಪಿ ಡಾ. ಭೀಮಾಶಂಕರ ಗುಳೇದ


ಹೆಚ್ಚುವರಿ ಎಸ್ಪಿ ಶ್ರುತಿ ಎನ್.ಎಸ್.


ಹೆಚ್ಚುವರಿ ಎಸ್ಪಿ ರಾಮನಗೌಡ ಬಸರಗಿ


ಡಿವೈಎಸ್ಪಿ ಡಿ.ಹೆಚ್. ಮುಲ್ಲಾ


ಸಿಪಿಐ ಶ್ರೀಶೈಲ ಬ್ಯಾಕೋಡ


ಪಿಎಸ್ಐ ರಾಜು ಪೂಜೇರಿ

ಜೀವಂತ ನಿದರ್ಶನಗಳು ಇಂದು ಸಾಕಷ್ಟಿವೆ. ಇಂತಹುದೇ ಒಂದು ದುರಂತ ಬೆಳಗಾವಿ ಜಿಲ್ಲೆ, ಮೂಡಲಗಿ ತಾಲ್ಲೂಕಿನ ಪುಲಗಡ್ಡಿ ಎಂಬ ಗ್ರಾಮದಲ್ಲಿ ನಡೆದು ಹೋಗಿದೆ. ಸಹೋದರ ಸಂಬಂಧಿಗಳಲ್ಲಿ ನಡೆದ ಜಮೀನು ವಿವಾದದಲ್ಲಿ 24 ವರ್ಷದ ರಾಮಪ್ಪ ಬಸಪ್ಪ ಕೌಜಲಗಿ ಬರ್ಬರವಾಗಿ ಕೊಲೆಯಾಗಿದ್ದಾನೆ. ಈತನ ತಂದೆ ಬಸಪ್ಪ ಮಾರಣಾಂತಿಕವಾಗಿ ಗಾಯಗೊಂಡು ಅದೃಷ್ಟವಶಾತ್ ಆಸ್ಪತ್ರೆಯಲ್ಲಿ ಬದುಕುಳಿದಿದ್ದಾನೆ. ಇದ್ದೊಬ್ಬ ಮಗನನ್ನು ಕಳೆದುಕೊಂಡು ಕುಟುಂಬದವರ ಗೋಳು ಹೇಳತೀರದಾಗಿದೆ. ತನ್ನದಲ್ಲದ ಜಮೀನಿಗಾಗಿ ಸಿಟ್ಟಿನ ಕೈಯಲ್ಲಿ ಬುದ್ಧಿ ಕೊಟ್ಟ ಯುವಕ ಸಿದ್ದಪ್ಪ ಮಲ್ಲಪ್ಪ ಕೌಜಲಗಿ ಇಂದು ಹಂತಕನಾಗಿ ಜೈಲು ಸೇರಿ ಇಡೀ ತನ್ನ ಕುಟುಂಬವನ್ನೇ ಬೀದಿಗೆ ತಂದಿದ್ದಾನೆ. ಹೇಗಿದೆ ನೋಡಿ ಮಣ್ಣಿನ ಮಹಿಮೆ.

**ನತದೃಷ್ಟ ಬಸಪ್ಪ ಕೌಜಲಗಿ...**

ಅಕ್ಷರಶಃ ಬಸಪ್ಪ ತುಂಬಾ ನತದೃಷ್ಟನೆಂದು ಹೇಳಬೇಕಾಗಿದೆ. ತನ್ನ ಕಣ್ಣೆದುರಿಗೆ ಇದ್ದೊಬ್ಬ 24 ವರ್ಷದ ಪುತ್ರ ರಾಮಪ್ಪನ ಕಗ್ಗೊಲೆಯಾಗಿದೆ. ಮಗನನ್ನು ರಕ್ಷಿಸಲು ಧಾವಿಸಿದ್ದ ಬಸಪ್ಪನ ಮೇಲೂ ಮಾರಣಾಂತಿಕ ಹಲ್ಲೆಯಾಗಿದೆ. ಅದೃಷ್ಟವಶಾತ್ ಆತ ಇಂದು ಬದುಕುಳಿದಿದ್ದಾನೆ. ಆದರೆ 'ಪುತ್ರಶೋಕಂ ನಿರಂತರಂ' ಎನ್ನುವಂತೆ ಆತ ಬದುಕಿರುವಷ್ಟು ದಿನ ಪುತ್ರ ರಾಮಪ್ಪನ ಕೊಲೆ ದುಃಸ್ವಪ್ನದಂತೆ ಕಾಡದೇ ಇರಲಾರದು.

ಮೂಡಲಗಿ ತಾಲ್ಲೂಕಿನ ಪುಲಗಡ್ಡಿ ಗ್ರಾಮ ತುಂಬಾ ಪ್ರಜ್ಞಾವಂತರ ಗ್ರಾಮವಾಗಿದೆ. ಇಲ್ಲಿನ ಜನರು ಸಾಧಾರಣವಾಗಿ ಶ್ರೀಮಂತರೆ ಇದ್ದಾರೆ. ಇದೇ ಊರಲ್ಲಿ ರಾಮಪ್ಪ, ಸತ್ತೆವ್ವ ದಂಪತಿಗಳಿಗೆ ಶಶಿಕಾಂತ, ಬಸಪ್ಪ ಎಂಬಿಬ್ಬರು ಗಂಡು ಮಕ್ಕಳು. ಹಿರಿಯವನಾದ ಶಶಿಕಾಂತ ವೆಟರನರಿ ವೈದ್ಯರಾಗಿ ಇದೀಗ ಗೋಕಾಕ ತಾಲ್ಲೂಕಾ ಪಶು ವೈದ್ಯಾಧಿಕಾರಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಇನ್ನೂ ಬಸಪ್ಪ ಪಿತ್ರಾರ್ಜಿತವಾಗಿ ಬಂದ ಆಸ್ತಿಯಲ್ಲಿ ಮೊದಲಿನಿಂದಲೂ ಒಕ್ಕಲುತನ ಮಾಡಿಕೊಂಡು ಬದುಕುತ್ತಿದ್ದಾನೆ. ತಂದೆ ರಾಮಪ್ಪ ತೀರಿಕೊಂಡಿದ್ದು, ತಾಯಿ ಸತ್ತೆವ್ವಳು ಬಸಪ್ಪನೊಂದಿಗೆ ಪುಲಗಡ್ಡಿಯಲ್ಲಿ ವಾಸವಿದ್ದಾಳೆ.


ಕೊಲೆಯಾದ ರಾಮಪ್ಪನ ತಾಯಿ ವಿಜಯಶ್ರೀ


ಜಮೀನು ವಿವಾದಕ್ಕೆ ಇನ್ನಿಲ್ಲದಂತೆ ಬಲಿಯಾದ ರಾಮಪ್ಪ ಕೌಜಲಗಿ


**ಮೂರು ಹೆಣ್ಣು, ಒಂದು ಗಂಡು ಮಗ...**

ಬಸಪ್ಪನು ಕೂಡಾ ತುಂಬಾ ಪ್ರಜ್ಞಾವಂತನಾಗಿ ಜೀವನ ನಡೆಸಿದ್ದಾನೆ. ಹೆಂಡತಿ ವಿಜಯಶ್ರೀ ಗಂಡನ ಕಷ್ಟ ಸುಖದಲ್ಲಿ ಭಾಗಿಯಾಗಿ ಸೀಮಾ, ಗೀತಾ, ರಾಮಪ್ಪ, ಶಿಲ್ಪಾ ಎಂಬ ನಾಲ್ಕು ಮಕ್ಕಳಿಗೆ ಜನ್ಮ ನೀಡಿದ್ದಾಳೆ. ಬಸಪ್ಪ ಎಲ್ಲ ಮಕ್ಕಳಿಗೆ ತಕ್ಕಮಟ್ಟಿಗೆ ವಿದ್ಯಾಭ್ಯಾಸ ಮಾಡಿಸಿದ್ದಾನೆ. ಸೀಮಾ ಮತ್ತು ಗೀತಾಳಿಗೆ ಮದುವೆ ಮಾಡಿಕೊಟ್ಟಿದ್ದಾರೆ. ಇನ್ನೂ ಒಬ್ಬನೇ ಮಗನಾದ ರಾಮಪ್ಪ ಮತ್ತು ಶಿಲ್ಪಾಳ ಮದುವೆ ಮಾತ್ರ ಬಾಕಿ ಇತ್ತು. ಮಗ ರಾಮಪ್ಪ ತುಂಬಾ ಕಷ್ಟಾಳು. ಎರಡು ವರ್ಷಗಳ ಹಿಂದೆ ಸಮೀಪದ ಹುಣಶ್ಯಾಳ ಪಿ.ಜಿ.ಯಲ್ಲಿರುವ ಸತೀಶ ಶುಗರ್ಸ್‌ನಲ್ಲಿ ಫೀಲ್ಡ್‌ಮನ್ ಆಗಿ ದುಡಿಯುತ್ತಿದ್ದನು. ಇನ್ನೇನೂ ಮಕ್ಕಳ ಮದುವೆ ಮಾಡಬೇಕು ಎನ್ನುವುದರೊಳಗಾಗಿ ಜಮೀನು ವಿವಾದಕ್ಕೆ ಇದ್ದೊಬ್ಬ ಮಗ ರಾಮಪ್ಪ ಸಹೋದರಿ ಸಂಬಂಧಿಯಾದ ಮಲ್ಲಪ್ಪ ಕೌಜಲಗಿಯ ಮಗ ಸಿದ್ದಪ್ಪನಿಂದ ಬರ್ಬರವಾಗಿ ಕೊಲೆಯಾಗಿ ಹೋಗಿರುವುದು ಕೌಜಲಗಿ ಕುಟುಂಬದಲ್ಲಿ ದುರಂತವೇ ಸರಿ.

**ಅಣ್ಣ-ತಮ್ಮ ಬೇರೆಯಾಗಿದ್ದರು...**

ಮೊದಲು ಅಣ್ಣನಾಗಿದ್ದ ಡಾ. ಶಶಿಕಾಂತ ಕೌಜಲಗಿ ಓದಿಗಾಗಿ ತಮ್ಮ ಬಸಪ್ಪ ಸಾಕಷ್ಟು ಶ್ರಮಪಟ್ಟು ಜಮೀನಿನಲ್ಲಿ ದುಡಿದಿದ್ದನು. ಡಾ. ಶಶಿಕಾಂತ ಕೂಡಾ ತಮ್ಮನೆಂದು ಅಕ್ಕರೆಯಿಂದ ಬಸಪ್ಪನನ್ನು ನೋಡಿಕೊಂಡಿದ್ದರು. ಡಾ. ಶಶಿಕಾಂತ ಕ್ಲಾಸ್-1 ಅಧಿಕಾರಿಯಾಗಿ ತಮ್ಮ ಕುಟುಂಬ ಸಮೇತ ಹೊರಗಡೆ ವಾಸವಿದ್ದರು. ಆಗ ಇಬ್ಬರ ಪಾಲಿನ ಮೂರು ಎಕರೆ ನೀರಾವರಿ ಭೂಮಿಯನ್ನು ಬಸಪ್ಪ ಕೌಜಲಗಿಯ ಕುಟುಂಬವೇ ಉಳುಮೆ ಮಾಡಿಕೊಂಡು ಬಂದಿತ್ತು. ಆದರೆ ಇತ್ತೀಚಿಗೆ ಎರಡು ವರ್ಷಗಳ ಹಿಂದೆ ಡಾ. ಶಶಿಕಾಂತ ಮತ್ತು ಬಸಪ್ಪ ಬೇರೆ ಬೇರೆಯಾದರು. ತಾಯಿ ಸತ್ತೆವ್ವಳು ಕಿರಿಯ ಮಗ ಬಸಪ್ಪನ ಜತೆಗೆ ಉಳಿದುಕೊಂಡಳು. ಇತ್ತೀಚಿಗೆ ಡಾ. ಶಶಿಕಾಂತ ತಮ್ಮನಾದ ಬಸಪ್ಪನೊಡನೆ ಅಷ್ಟಾಗಿ ಹೊಂದಾಣಿಕೆಯಿರಲಿಲ್ಲ. ಪಿತ್ರಾರ್ಜಿತ ಆಸ್ತಿಯಲ್ಲಿ ಅಣ್ಣ-ತಮ್ಮ ಇಬ್ಬರಿಗೆ ತಲಾ ಒಂದೂವರೆ ಎಕರೆ ಜಮೀನು ಪಾಲಿಗೆ ಬಂದಿತ್ತು. ಸುಮಾರು ವರ್ಷಗಳಿಂದ ಅಣ್ಣನ ಪಾಲಿನ ಜಮೀನನ್ನು ಕೂಡಾ ಬಸಪ್ಪನು ಉಳುಮೆ ಮಾಡುತ್ತಿದ್ದನು. ಆದರೆ ಈಗ ಅಣ್ಣ-ತಮ್ಮಂದಿರು ಬೇರೆಯಾದಾಗ ಡಾ. ಶಶಿಕಾಂತ ತನ್ನ ಪಾಲಿನ ಜಮೀನನ್ನು ಉಳುಮೆ ಮಾಡಲು ಪಾಲಿನಿಂದ

☞ 5


ಜೀವನ್ಮರಣದ ಹೋರಾಟದಲ್ಲಿ ಆಸ್ಪತ್ರೆಯಲ್ಲಿರುವ ಬಸಪ್ಪ ಕೌಜಲಗಿ

4 ☜

ತಮ್ಮ ಬಸಪ್ಪನಿಗೆ ನೀಡಬೇಕಾಗಿತ್ತು. ದೊಡ್ಡ ಮನಸ್ಸು ಮಾಡದ ಅವರು ತಮ್ಮ ಪಾಲಿನ ಜಮೀನನ್ನು ಸೋದರ ಸಂಬಂಧಿಗೆ ಪಾಲಿನಿಂದ ನೀಡಿದ್ದರು. ಈ ವಿಷಯವಾಗಿ ಅಣ್ಣ-ತಮ್ಮ ಇಬ್ಬರಲ್ಲೂ ಕಂದಕ ಏರ್ಪಟ್ಟಿತ್ತು.

**ಸಹೋದರ ಸಂಬಂಧಿಕ ಮಲ್ಲಪ್ಪ...**

ಪುಲಗಡ್ಡಿ ಗ್ರಾಮದಲ್ಲಿಯೇ ವಾಸವಾಗಿದ್ದ ಮಲ್ಲಪ್ಪ ಸಿದ್ದಪ್ಪಕೌಜಲಗಿ ಎಂಬ ದೂರದ ಸಹೋದರ ಸಂಬಂಧಿಕನಿಗೆ ಡಾ. ಶಶಿಕಾಂತ ತಮ್ಮ ಪಾಲಿನ ಒಂದೂವರೆ ಜಮೀನನ್ನು ಪಾಲಿನಿಂದ ಉಳುಮೆ ಮಾಡಲು ನೀಡಿದ್ದರು. ಇದು ಬಸಪ್ಪ ಮತ್ತು ಮಗ ರಾಮಪ್ಪನ ಕಣ್ಣು ಕೆಂಪಾಗಿರಿಸಿತ್ತು. 'ನಮ್ಮ ದೊಡ್ಡಪ್ಪ ಡಾ. ಶಶಿಕಾಂತ ತಾಲೂಕಾ ಪಶು ವೈದ್ಯಾಧಿಕಾರಿಯಂತಹ ದೊಡ್ಡ ಹುದ್ದೆಯಲ್ಲಿದ್ದಾರೆ. ಅವರ ಪಾಲಿನ ಜಮೀನನ್ನು ನಮಗೆ ನೀಡಿದ್ದರೆ ಆಗುತ್ತಿತ್ತು. ಅದು ಬಿಟ್ಟು ನಮ್ಮ ಸಹೋದರ ಸಂಬಂಧಿ ಮಲ್ಲಪ್ಪನಿಗೆ ನೀಡಿದ್ದಾರೆ' ಎಂದು ಅಸಮಾಧಾನವನ್ನು ಊರವರ ಮುಂದೆ ಹೊರ ಹಾಕುತ್ತಿದ್ದನು. ಇದಕ್ಕೆ ಬಸಪ್ಪನು ಆಗಾಗ ದನಿಗೂಡಿಸುತ್ತಲಿದ್ದನು.

ಡಾ. ಶಶಿಕಾಂತ ಅವರ ಜಮೀನು ತಮ್ಮನಾದ ಬಸಪ್ಪನ ಜಮೀನಿಗೆ ಹೊಂದಿಕೊಂಡಿತ್ತು. ಸಹೋದರ ಸಂಬಂಧಿಕನಾಗಿದ್ದ ಮಲ್ಲಪ್ಪ ಮತ್ತು ಆತನ ಮಗ ಸಿದ್ದಪ್ಪ ಜಮೀನಿನಲ್ಲಿ ಕೆಲಸ ಮಾಡುವಾಗ ಬಸಪ್ಪ ಮತ್ತು ಆತನ ಮಗ ರಾಮಪ್ಪನೊಡನೆ ಜಮೀನಿನ ವಿಷಯವಾಗಿ ಜಗಳವಾಗುತ್ತಿತ್ತು.

**ಇದು ನಮ್ಮ ಅಣ್ಣನ ಜಮೀನು...!**

ಕಳೆದ ಎರಡು ವರ್ಷಗಳಿಂದಲೂ ಬಸಪ್ಪ ಕೌಜಲಗಿ ಮತ್ತು ಆತನ ಮಗ ರಾಮಪ್ಪ ಸೇರಿಕೊಂಡು ಸಹೋದರ ಸಂಬಂಧಿಕ ಮಲ್ಲಪ್ಪ ಕೌಜಲಗಿ ಮತ್ತು ಮಗ ಸಿದ್ದಪ್ಪನಿಗೆ 'ಇದು ನಮ್ಮ ಅಣ್ಣ ಡಾ. ಶಶಿಕಾಂತ ಪಾಲಿನ ಜಮೀನು. ಮೊದಲಿನಿಂದಲೂ ನಾವು ಮಾಡುತ್ತ ಬಂದಿದ್ದೇವೆ. ನೀವು ಎಲ್ಲಿಯವರು ಬಂದಿರಿ... ನೀವು ನಮ್ಮ ಅಣ್ಣನ ಜಮೀನು ಯಾಕೆ ಮಾಡುತ್ತೀರಿ. ಅದನ್ನು ನಾವು ಮಾಡುತ್ತೇವೆ' ಎಂದು ಕಿರಿಕಿರಿ ಮಾಡತೊಡಗಿದ್ದರು. ಇದರ ಕುರಿತಾಗಿ ಡಾ. ಶಶಿಕಾಂತ ಅವರು ತಮ್ಮ ಬಸಪ್ಪ ಆತನ ಮಗ ರಾಮಪ್ಪನಿಗೆ ನೇರವಾಗಿ 'ನನ್ನ ಪಾಲಿನ ಜಮೀನಿದೆ. ನಾನು ಬೇಕಾದವರಿಗೆ ಕೊಡುತ್ತೇನೆ ನೀವೇನು ಕೇಳಬೇಡಿರಿ' ಎಂದು ಹೇಳಿದ್ದರು. ಇದರಿಂದ ಸಹೋದರ ಸಂಬಂಧಿಕ ಮಲ್ಲಪ್ಪ ಮತ್ತು ಆತನ ಮಗ ಸಿದ್ದಪ್ಪನಿಗೆ ಮತ್ತಷ್ಟು ಬಲ ಬಂದಾಗಿತ್ತು. ಇದರಿಂದಾಗಿ ಬಸಪ್ಪನ ಕುಟುಂಬ ಒಳಗೊಳಗೆ ಅಣ್ಣ ಮತ್ತು ಸಹೋದರ ಸಂಬಂಧಿಕನೊಡನೆ ಹಗೆ ಸಾಧಿಸತೊಡಗಿತ್ತು. ಮನೆಯಲ್ಲಿ ವಯಸ್ಸಾದ ತಾಯಿ ಸತ್ತೆವ್ವಳಿಗಂತೂ ಧರ್ಮ ಸಂಕಟ ಎಂಬಂತಾಗಿತ್ತು.

**ಜಮೀನು ಮತ್ತು ನೀರಿನ ವಿವಾದ...**

ಇತ್ತೀಚಿಗೆ ಸುಮಾರು ದಿನಗಳಿಂದಲೂ ಬಸಪ್ಪ ಕೌಜಲಗಿ ಮತ್ತು ಆತನ ಮಗ ರಾಮಪ್ಪ ಕೂಡಿಕೊಂಡು ಸಹೋದರ ಸಂಬಂಧಿ ಮಲ್ಲಪ್ಪ ಮತ್ತು ಮಗ ಸಿದ್ದಪ್ಪನೊಡನೆ ಹಗೆತನ ಮುಂದುವರೆಸಿದ್ದರು. ಒಳಗಿಂದೊಳಗೆ ತಮ್ಮ ಜಮೀನಿಗೆ ಹೊಂದಿಕೊಂಡ ಅಣ್ಣನ ಜಮೀನಿನಲ್ಲಿ ಬೇರೊಬ್ಬರು ಬಂದು ನಿಲ್ಲುವಂತಾಯಿತು ಎಂದು ಮರುಗುತೊಡಗಿದ್ದರು. ಬಸಪ್ಪ ಮತ್ತು ಮಗ ರಾಮಪ್ಪ ಸೇರಿಕೊಂಡು ತಮ್ಮ ಪಾಲಿನ ಜಮೀನಿಗೆ ನೀರು ಉಣಿಸುವಾಗ ಬೇಕು... ಬೇಕಂತಲೇ ಸಹೋದರ ಸಂಬಂಧಿಕ ಮಲ್ಲಪ್ಪ ಮತ್ತು ಆತನ ಮಗ ಸಿದ್ದಪ್ಪ ತಾವು ಪಾಲಿನಿಂದ ಮಾಡಿದ್ದ ಡಾ. ಶಶಿಕಾಂತ ಜಮೀನಿನಲ್ಲಿ ನೀರನ್ನು ಅಡ್ಡಗಟ್ಟುತ್ತಿದ್ದರು. ಇದರ ಕುರಿತು ಪರಸ್ಪರರು ಅನೇಕ ಸಲ ಜಗಳ ಮಾಡುತ್ತಿದ್ದರು.

**ಊರಿನಲ್ಲಿ ರಾಜಿ ಪಂಚಾಯತಿ...**

ಪುಲಗಡ್ಡಿ ಗ್ರಾಮದ ಪ್ರಜ್ಞಾವಂತ ಹಿರಿಯರು ಸೇರಿಕೊಂಡು ಬಸಪ್ಪ ಕೌಜಲಗಿ ಮತ್ತು ಮಗ ರಾಮಪ್ಪನಿಗೆ ಬುದ್ಧಿವಾದ ಹೇಳಿದ್ದರು. 'ನಿಮ್ಮ ಅಣ್ಣ ಡಾ. ಶಶಿಕಾಂತ ತನ್ನ ಪಾಲಿನ ಜಮೀನು ಯಾರಿಗಾದರೂ ಕೊಡಲಿ... ಈ ಕುರಿತು ನೀವು ಜಗಳಾಡುವುದು ಬೇಡಾ ಆದರೆ ನೀವು ನೀರು ಹಾಯಿಸುವಾಗ ನಿಮ್ಮ ಸಹೋದರ ಸಂಬಂಧಿಕ ಮಲ್ಲಪ್ಪ ಕೌಜಲಗಿ ಕಿರಿ... ಕಿರಿ ಮಾಡದಂತೆ ತಾಕೀತು ಮಾಡುತ್ತೇವೆ' ಎಂದು ಮಲ್ಲಪ್ಪನಿಗೆ ತಾಕೀತು ಮಾಡಿದ್ದರು. ಆದರೆ ಇವರಲ್ಲಿ ಪರಸ್ಪರ ವೈಮನಸ್ಸು ಮೂಡಿ ಒಳಗಿಂದೊಳಗೆ ಈರ್ಷೆ ಹೆಚ್ಚಾಗಿತ್ತು. ಒಬ್ಬರನ್ನೊಬ್ಬರು ನೋಡಿಕೊಳ್ಳುವ ಮಾತಾಡಿದ್ದರು. ಇಲ್ಲಿ ಊರವರು ಅನೇಕ ಸಲ ರಾಜಿ ಪಂಚಾಯತಿ ಮಾಡಿ ಬೇಸತ್ತಿದ್ದರು. 'ಹಗ್ಗ ಹರಿಯಲಿಲ್ಲ ಕೋಲು ಮುರಿಯಲಿಲ್ಲ' ಎನ್ನುವಂತಾಗಿತ್ತು.

**ದಿನನಿತ್ಯ ಇನ್ನಿಲ್ಲದ ಕಿರಿ... ಕಿರಿ....**

ತನ್ನ ಅಣ್ಣ ಡಾ. ಶಶಿಕಾಂತ ಪಾಲಿನ ಒಂದೂವರೆ ಎಕರೆ ಜಮೀನು ಅನಾಯಾಸವಾಗಿ ತಮ್ಮ ಕೈಬಿಟ್ಟು ಹೋಯಿತಲ್ಲಾ ಎಂಬ ಕೊರಗು ಬಸಪ್ಪ ಮತ್ತು ಮಗ ರಾಮಪ್ಪನದಾಗಿತ್ತು. ಹೀಗಾಗಿ ಪ್ರತಿದಿನ ಜಮೀನು ಪಾಲಿನಿಂದ ಮಾಡಿದ್ದ ಸೋದರ ಸಂಬಂಧಿಕ ಮಲ್ಲಪ್ಪ ಮತ್ತು ಆತನ ಮಗ ಸಿದ್ದಪ್ಪನೊಡನೆ ಕಾಲು ಕೆದರಿ ಜಗಳ ತೆಗೆಯುತ್ತ ದೀಡಿ ಮಾತನಾಡುತ್ತಿದ್ದರು. ಕೆಲವೊಮ್ಮೆ ಬೆದರಿಕೆಯ ಮಾತುಗಳನ್ನು ಆಡುತ್ತಿದ್ದರು. 'ಹೆಂಗಾ ಜಮೀನುಽ ಮಾಡ್ತಾರ ನಾವು ನೋಡಿ ಬಿಡ್ತೀವ' ಎನ್ನತೊಡಗಿದ್ದರು. ದಿನದಿಂದ ದಿನಕ್ಕೆ ಇವರ ಕಿರಿ ಕಿರಿಗೆ ಬೇಸತ್ತಿದ್ದ ಮಲ್ಲಪ್ಪ ಆತನ ಮಗ ಸಿದ್ದಪ್ಪ ಕೂಡಾ 'ಬಂದದ್ದು ಬರಲಿ ನಾವು ಒಂದ ಕೈ ನೋಡತೇವು' ಎನ್ನುವ ಪ್ರತ್ಯುತ್ತರ ಕೊಡುತ್ತಿದ್ದರು.


ಜಮೀನು ವಿವಾದದಲ್ಲಿ ಸಿದ್ದಪ್ಪನಿಂದ ಬರ್ಬರವಾಗಿ ಕೊಲೆಯಾದ ರಾಮಪ್ಪ

**ನೀರಿಗಾಗಿ ವಿಕೋಪಕ್ಕೆ ತಿರುಗಿದ ಜಗಳ...**

ಅಂದು ದಿನಾಂಕ 30-12-2024 ಸೋಮವಾರವಾಗಿತ್ತು. ಮಧ್ಯಾಹ್ನ 3 ಗಂಟೆ ಸುಮಾರಿಗೆ ತಮ್ಮ ಪಾಲಿಗೆ ಬಂದಿದ್ದ ಜಮೀನಿಗೆ ಕೆನಾಲ್‌ದಿಂದ ನೀರು ತಂದು ಬಸಪ್ಪ ಕೌಜಲಗಿ ಮತ್ತು ಮಗ ರಾಮಪ್ಪ ನೀರು ಉಣಿಸುತ್ತಲಿದ್ದರು. ಇದಾದ ನಂತರ 4 ಗಂಟೆ ಸುಮಾರಿಗೆ ಸಹೋದರ ಸಂಬಂಧಿಕ ಮಲ್ಲಪ್ಪ ಕೌಜಲಗಿಯ ಮಗ ಸಿದ್ದಪ್ಪ ಪಾಲಿನಿಂದ ಮಾಡಿದ್ದ ತಮ್ಮ ಅಣ್ಣ ಡಾ. ಶಶಿಕಾಂತರ ಜಮೀನಿಗೆ ನೀರು ಉಣಿಸುತ್ತಿದ್ದನು. ನಮ್ಮ ಜಮೀನಿಗೆ ಬರುವ ಎಲ್ಲಾ ನೀರನ್ನು ತಡೆದು ಮಡಿ ಕಟ್ಟಿ ಅದೇ ನೀರನ್ನು ತಿರುಗಿಸಿ ಅವರು ನೀರು ಹಾಯಿಸುತ್ತಿದ್ದರು. ಇನ್ನೇನು ಒಂದು ಗಂಟೆಯಾಗಿದ್ದರೆ ಸಾಕು. ನೀರು ಹಾಯಿಸುವುದು ಮುಗಿಯುತ್ತಿತ್ತು. ಆದರೆ ಇದೇ ಘಟನೆ ಮುಂದಿಟ್ಟುಕೊಂಡು ಬಸಪ್ಪ ಆತನ ಮಗ ರಾಮಪ್ಪ ಸಹೋದರ ಸಂಬಂಧಿಗಳೊಡನೆ ಜಗಳಕ್ಕಿಳಿದರು. ಇದರಿಂದ ಆಕ್ರೋಶಗೊಂಡ ಮಲ್ಲಪ್ಪ ಕೌಜಲಗಿಯ ಮಗನಾಗಿದ್ದ ಸಿದ್ದಪ್ಪ ಕೈಯಲ್ಲಿ ಹಿಡಿದಿದ್ದ ಕಬ್ಬು ಕತ್ತರಿಸುವ ಮಾರಕಾಸ್ತ್ರ ಕುಡುಗೋಲನ್ನು ಹಿಡಿದುಕೊಂಡು 'ಮಂಡ ಸೂಳಿ ಮಕ್ಕಳರ‍್ಯಾ ಬಾಳಽ ಆಗೇತಿ ನಿಮ್ಮದು' ಎಂದವನೇ ಜಿಗಿದು ಮುಂದೆ ಬಂದು ನಿಂತನು.


ತನ್ನ ಮಗ ರಾಮಪ್ಪ ಕೌಜಲಗಿ ಕೊಲೆಯಾದ ಸ್ಥಳ ತೋರಿಸುವ ವಿಜಯಶ್ರೀ

**ರಾಮಪ್ಪನನ್ನು ಕೊಚ್ಚಿ... ಕೊಚ್ಚಿ ಕೊಲೆಗೈದ...**

ತನ್ನ ಕೈಲಿದ್ದ ಕುಡುಗೋಲಿನಿಂದ ಸಿದ್ದಪ್ಪನು ಬಲವಾಗಿ ರಾಮಪ್ಪನ ಕುತ್ತಿಗೆಗೆ ಬೀಸಿದನು. ಆಗ ರಾಮಪ್ಪ 'ಅಯ್ಯೋಽ ಯಪ್ಪಾ ಸತ್ತೆನೋ' ಎಂದು ಚೀರುತ್ತಾ ಕೆಳಗೆ ಬಿದ್ದು ಒದ್ದಾಡಲು ಆಕ್ರೋಶದಿಂದ ಸಿದ್ದಪ್ಪ ರಾಮಪ್ಪನ ಬೆನ್ನು, ಮುಖ, ಮತ್ತಿತರ ಕಡೆಗೆ ಕೊಚ್ಚತೊಡಗಿದನು. ಕುಡುಗೋಲಿನ ಹೊಡೆತಕ್ಕೆ ರಕ್ತ ಚಿಮ್ಮುತ್ತ ರಾಮಪ್ಪ ವಿಲ... ವಿಲನೇ ಒದ್ದಾಡುತ್ತ ಗತಪ್ರಾಣನಾದನು.

**ಬಸಪ್ಪನ ಮೇಲೂ ಮಾರಣಾಂತಿಕ ಹಲ್ಲೆ...**

ತನ್ನ ಕಣ್ಣ ಮುಂದೆಯೇ ಎದೆಯುದ್ದ ಬೆಳೆದು ಕುಟುಂಬಕ್ಕೆ ಆಸರೆಯಾಗಿದ್ದ ಮಗನನ್ನು ಕೊಂದು ಹಾಕುತ್ತಿರುವ ದೃಶ್ಯ ಕಂಡು ಎದೆ... ಎದೆ ಬಡಿದುಕೊಂಡ ಬಸಪ್ಪ ಧಾವಿಸಿ ಬಂದು ಮಗನನ್ನು ರಕ್ಷಿಸಲು ಮುಂದಾದಾಗ 'ನಿನ್ನನ್ನು ಬಿಡುದುಲ್ಲ ಮಗನ' ಎಂದು ರೌದ್ರಾವತಾರ ತುಂಬಿದ್ದ ಸಿದ್ದಪ್ಪ ಬಸಪ್ಪನ ಮೇಲೂ ಮಾರಣಾಂತಿಕವಾಗಿ ಹಲ್ಲೆ ಮಾಡಿದನು. ತಲೆಯ ಮೇಲೆ... ಮೊಣಕೈ... ಬೆರಳುಗಳು ಗಂಭೀರವಾಗಿ ಗಾಯಗಳಾದವು. ಬಸಪ್ಪನ ಚೀರಾಟ... ಕೂಗಾಟ ಕೇಳಿ ಸುತ್ತ ಮುತ್ತಲಿನ ಜನ ಓಡೋಡಿ ಬಂದಾಗ ಅಲ್ಲಿಂದ ಕುಡುಗೋಲು ಸಮೇತ ಹಂತಕ ಸಿದ್ದಪ್ಪ ಕೌಜಲಗಿ ನಿಧಾನವಾಗಿ ಏನೂ ಆಗಿಲ್ಲವೆನ್ನುವಂತೆ ನಡೆದು ಹೋದನು.

**ಆಸ್ಪತ್ರೆಯಲ್ಲಿ ಬದುಕುಳಿದ ಬಸಪ್ಪ...**

ಮಾರಣಾಂತಿಕವಾಗಿ ಗಾಯಗೊಂಡಿದ್ದ ಬಸಪ್ಪನನ್ನು ಬದುಕಿಸಲು ತಕ್ಷಣ ಅಲ್ಲಿದ್ದ ಪ್ರಜ್ಞಾವಂತರು 108 ಆ್ಯಂಬುಲೆನ್ಸ್‌ಗೆ ಕರೆ ಮಾಡಿ ಗೋಕಾಕದ ಉಮರಾಣಿ ಆಸ್ಪತ್ರೆಗೆ ದಾಖಲಿಸಿದ್ದರು. ಅಲ್ಲಿ ವೈದ್ಯರ ಸಕಾಲಿಕ ಉಪಚಾರದಿಂದ ಬಸಪ್ಪ ಜೀವನ್ಮರಣದ ಹೋರಾಟದಿಂದ ಬದುಕುಳಿದಿದ್ದಾನೆ. ಆದರೆ ಇದ್ದೊಬ್ಬ ಮಗನನ್ನು ಕಳೆದುಕೊಂಡು ಕಂಗಾಲಾಗಿದ್ದಾನೆ.

**ಪೊಲೀಸರಿಗೆ ದೂರು...**

ಸೋಮವಾರ ದಿ. 30-12-2024ರಂದು ಸಾಯಂಕಾಲ 5 ಗಂಟೆ ಹೊತ್ತಿಗೆ ಜಮೀನು ಮತ್ತು ನೀರಿನ ವಿವಾದದಲ್ಲಿ ನಡೆದ ಮಾರಣಹೋಮದಲ್ಲಿ 24 ವರ್ಷದ ಯುವಕ ರಾಮಪ್ಪನ ಬರ್ಬರ ಕೊಲೆ ಮತ್ತು ಆತನ ತಂದೆ ಬಸಪ್ಪನ ಮೇಲೆ ಮಾರಣಾಂತಿಕ ಹಲ್ಲೆಯ ಸುದ್ದಿ ಕಾಳ್ಗಿಚ್ಚಿನಂತೆ ಹಬ್ಬಿತ್ತು. ಸುದ್ದಿ ಅರಿತ ಮೂಡಲಗಿ ಪಿಎಸ್‌ಐ ರಾಜು ಪೂಜೇರಿ ತಕ್ಷಣ ತಮ್ಮ ಸಿಬ್ಬಂದಿಗಳೊಂದಿಗೆ ಪುಲಗಡ್ಡಿಯ ಘಟನಾ ಸ್ಥಳಕ್ಕೆ ಧಾವಿಸಿದರು. ಅಲ್ಲಿ ಕೊಲೆಯಾಗಿ ಬಿದ್ದಿದ್ದ ರಾಮಪ್ಪನ ಶವ ಸೂಕ್ಷ್ಮವಾಗಿ ಪರಿಶೀಲಿಸಿದರು. ವಿಷಯವನ್ನು ಗಂಭೀರವಾಗಿ ಪರಿಗಣಿಸಿದ ಪಿಎಸ್‌ಐ ರಾಜು ಪೂಜೇರಿ ತಕ್ಷಣ ಮೂಡಲಗಿಯ ಸಿಪಿಐ ಶ್ರೀಶೈಲ ಬ್ಯಾಕೋಡ, ಗೋಕಾಕ ಡಿವೈಎಸ್ಪಿ ಡಿ.ಹೆಚ್. ಮುಲ್ಲಾ ಅವರಿಗೆ ತಿಳಿಸಿ ಅವರ ನಿರ್ದೇಶದನದಂತೆ ಪ್ರಕರಣ ದಾಖಲಿಸಿಕೊಂಡು ಮುಂದಿನ ಕಾರ್ಯಾಚರಣೆಗೆ ಅಣಿಯಾದರು. ಆಸ್ಪತ್ರೆಗೆ ದಾಖಲಾಗಿದ್ದ ಬಸಪ್ಪನಿಂದ ವಿವರವಾದ ದೂರನ್ನು ಮೊದಲೇ ಪಡೆಯಲಾಗಿತ್ತು.

**ಪಂಚನಾಮೆ... ಹಿರಿಯ ಅಧಿಕಾರಿಗಳ ಭೇಟಿ...**

ವಿಷಯವರಿತ ಚತುರ ಮತ್ತು ಧಾಡಸಿ ಸಿಪಿಐ ಶ್ರೀಶೈಲ ಬ್ಯಾಕೋಡ ತಮ್ಮ ಸಿಬ್ಬಂದಿಗಳೊಂದಿಗೆ ಶರವೇಗದಲ್ಲಿ ಘಟನಾ ಸ್ಥಳಕ್ಕೆ ಧಾವಿಸಿ ಬಂದು ಪಂಚನಾಮೆ ಕಾರ್ಯ ಕೈಗೊಂಡು ಸಂಬಂಧಿಸಿದವರ ಹೇಳಿಕೆ, ಪ್ರತ್ಯಕ್ಷ ದರ್ಶಿಗಳ ಸಾಕ್ಷಿ ಪಡೆದುಕೊಂಡರು. ಇದೇ ಸಂದರ್ಭದಲ್ಲಿ ಘಟನಾ ಸ್ಥಳಕ್ಕೆ ಗೋಕಾಕದ ಡಿವೈಎಸ್ಪಿ ಡಿ.ಹೆಚ್. ಮುಲ್ಲಾ ಧಾವಿಸಿ ಬಂದು ಸೂಕ್ಷ್ಮವಾಗಿ ಪರಿಶೀಲನೆ ನಡೆಸಿ ತನಿಖಾಧಿಕಾರಿ ಶ್ರೀಶೈಲ ಬ್ಯಾಕೋಡರಿಗೆ ಅಗತ್ಯ ನಿರ್ದೇಶನಗಳನ್ನು ನೀಡಿದರು. ರಾಮಪ್ಪನ ಶವದ ಮರಣೋತ್ತರ ಪರೀಕ್ಷೆ ಜರುಗಿಸಿ ಶವವನ್ನು ವಾರಸುದಾರರಿಗೆ ಒಪ್ಪಿಸಲಾಯಿತು. ಸಿಪಿಐ ಶ್ರೀಶೈಲ ಬ್ಯಾಕೋಡರು ಆಸ್ಪತ್ರೆಗೆ ದಾಖಲಾಗಿದ್ದ ಬಸಪ್ಪ ಕೌಜಲಗಿಯನ್ನು ಕಂಡು ಆತನ ಹೇಳಿಕೆ ಪಡೆದುಕೊಂಡರು. ಘಟನಾ ಸ್ಥಳಕ್ಕೆ ಹೆಚ್ಚುವರಿ ಎಸ್ಪಿ ಶ್ರುತಿ ಎನ್.ಎಸ್. ಭೇಟಿ ನೀಡಿ ನಿರ್ದೇಶನಗಳನ್ನು ನೀಡಿದರು. ಪ್ರಕರಣ ಕುರಿತು ಸಿಪಿಐ ಶ್ರೀಶೈಲ ಬ್ಯಾಕೋಡ ಅವರು ಡಿವೈಎಸ್ಪಿ ಡಿ.ಹೆಚ್. ಮುಲ್ಲಾ, ಹೆಚ್ಚುವರಿ ಎಸ್ಪಿಗಳಾದ ಶ್ರುತಿ ಎನ್.ಎಸ್., ರಾಮನಗೌಡ ಬಸರಗಿ, ಎಸ್ಪಿ ಡಾ. ಭೀಮಾಶಂಕರ ಗುಳೇದ ಅವರೊಂದಿಗೆ ನಿರಂತರ ಸಮಾಲೋಚನೆ ನಡೆಸಿದರು. ಹಂತಕನನ್ನು ಬಂಧಿಸಲು ಸಿದ್ಧತೆ ಕೈಗೊಂಡು ಸಿಪಿಐ ಶ್ರೀಶೈಲ ಬ್ಯಾಕೋಡ ವ್ಯೂಹ ರಚಿಸಿದರು.

**ಸರೆಂಡರ್ ಆದ ಹಂತಕ ಸಿದ್ದಪ್ಪ...**

ದಿ. 31-12-2024ರಂದು ಹಂತಕನಾದ ಸಿದ್ದಪ್ಪ ಮಲ್ಲಪ್ಪ ಕೌಜಲಗಿ ನೇರವಾಗಿ ಪೊಲೀಸ್ ಠಾಣೆಗೆ ಬಂದು ಪಿಎಸ್‌ಐ ರಾಜು ಪೂಜೇರಿ, ಸಿಪಿಐ ಶ್ರೀಶೈಲ ಬ್ಯಾಕೋಡ ಅವರ ಮುಂದೆ ಸರೆಂಡರ್ ಆಗಿ ತಾನೇ ರಾಮಪ್ಪನ ಕೊಲೆ ಮಾಡಿ ಆತನ ತಂದೆ ಬಸಪ್ಪನನ್ನು ಗಾಯಗೊಳಿಸಿದ್ದೇನೆ ಎಂದು ಒಪ್ಪಿಕೊಂಡು ಕೃತ್ಯಕ್ಕೆ ಬಳಸಿದ ಕುಡುಗೋಲನ್ನು ಹಾಜರುಪಡಿಸಿ ಕೊಲೆಗೆ ಕಾರಣವನ್ನು ವಿವರಿಸಿದ್ದಾನೆ. ತನಿಖಾಧಿಕಾರಿ ಸಿಪಿಐ ಶ್ರೀಶೈಲ ಬ್ಯಾಕೋಡ ಹಂತಕನನ್ನು ಬಂಧಿಸಿ ನ್ಯಾಯಾಂಗದ ವಶಕ್ಕೆ ಒಪ್ಪಿಸಲಾಗಿ ಆತನನ್ನು ಜೈಲಿಗಟ್ಟಲಾಗಿದೆ.

ಸದರಿ ಕೊಲೆ ಪ್ರಕರಣದಲ್ಲಿ ತನಿಖಾಧಿಕಾರಿ ಶ್ರೀಶೈಲ ಅವರಿಗೆ ಪಿಎಸ್‌ಐ ರಾಜು ಪೂಜೇರಿ, ಮುಖ್ಯ ಪೇದೆಗಳಾದ ಜಗದೀಶ ಮಿರ್ಜಿ, ರಂಗಪ್ಪ ಪೂಜೇರಿ, ಎನ್.ಎಸ್. ವಡೇಯರ, ಪೇದೆಗಳಾದ ಪಿ.ವ್ಹಿ. ಲೋಕುರಿ, ಬಿ.ವೈ. ಮಾರಾಪೂರ, ಸುರೇಶ ಮನ್ನಾಪೂರ, ಎಲ್.ಎಸ್. ಜೋಕಾನಟ್ಟಿ ತನಿಖಾ ಸಹಾಯಕರಾಗಿ ವಿಶೇಷ ಶ್ರಮ ವಹಿಸಿದ್ದಾರೆ.


ಮುಖ್ಯಪೇದೆಗಳಾದ ಜಗದೀಶ ಮಿರ್ಜಿ, ರಂಗಪ್ಪ ಪೂಜೇರಿ, ಎನ್.ಎಸ್. ವಡೇಯರ, ಪೇದೆಗಳಾದ ಪಿ.ವ್ಹಿ. ಲೋಕುರಿ, ಬಿ.ವೈ. ಮಾರಾಪೂರ, ಸುರೇಶ ಮನ್ನಾಪೂರ

# ಬಂಗಾರಪೇಟೆ : ಪುಷ್ಪ-2 ಸಿನಿಮಾ ನೋಡುತ್ತಿದ್ದ ನಾಲ್ವರ ಬಾಲಕರ ಕಿಡ್ನಾಪ್, ನಕಲಿ ಜ್ಯೋತಿಷಿ ಬಂಧನ!

**ಪುಷ್ಪ-2 ಚಿತ್ರವನ್ನು ನೋಡಬೇಕೆಂದು ರೈಲಿನಲ್ಲಿ ಬಂಗಾರಪೇಟೆಯಿಂದ ಬೆಂಗಳೂರಿಗೆ ಬಂದಿದ್ದ ನಾಲ್ವರು ಬಾಲಕರು ತ್ರಿವೇಣಿ ಚಿತ್ರಮಂದಿರದಲ್ಲಿ ಸಿನಿಮಾ ನೋಡುತ್ತಿದ್ದಾಗ ನಕಲಿ ಜ್ಯೋತಿಷಿಯೊಬ್ಬ ಪರಿಚಯವಾಗಿ ನಿಮ್ಮ ಗ್ರಹ ಗತಿಗಳು ಸರಿ ಇಲ್ಲ, ಅದಕ್ಕೆ ನಿಮ್ಮ ಮನೆಗಳನ್ನು ಬಿಟ್ಟು ಬಂದಿದ್ದೀರಿ, ನಿಮಗೆಲ್ಲಾ ಒಳ್ಳೆಯದಾಗಲೆಂದು ಪೂಜೆಯೊಂದನ್ನು ಮಾಡುವುದಾಗಿ ಲಾಡ್ಜ್‌ಗೆ ಕರೆದುಕೊಂಡು ಹೋಗಿ ರೂಂನಲ್ಲಿ ಕೂಡಿ ಹಾಕಿ ಬಾಲಕರ ಪೋಷಕರಿಗೆ ಫೋನ್ ಮಾಡಿ ಹಣಕ್ಕೆ ಡಿಮ್ಯಾಂಡ್ ಮಾಡಿ, ಕೊಲೆ ಬೆದರಿಕೆ ಹಾಕಿದ್ದು, ಪೋಷಕರ ದೂರಿನ ಮೇರೆಗೆ ಬಂಗಾರಪೇಟೆ ಠಾಣೆ ಪೊಲೀಸರು ಬಾಲಕರ ಮೊಬೈಲ್ ಟ್ರ್ಯಾಕ್ ಮಾಡಿ ಹಣ ಕೊಡುವುದಾಗಿ ಪೋಷಕರ ವೇಷದಲ್ಲಿ ಬಂದು ಆರೋಪಿ ನಕಲಿ ಜ್ಯೋತಿಷಿಯನ್ನು ಬಂಧಿಸಿ, ಬಾಲಕರನ್ನು ಸುರಕ್ಷಿತವಾಗಿ ಪೋಷಕರಿಗೆ ಒಪ್ಪಿಸುವಲ್ಲಿ ಯಶಸ್ವಿಯಾಗಿದ್ದಾರೆ.**



ಆರೋಪಿ ನಕಲಿ ಜ್ಯೋತಿಷಿ



ಕಿಡ್ನಾಪ್ ಆಗಿದ್ದ ಬಾಲಕರಾದ ಹೇಮಂತ್, ಮುಬಾರಕ್, ಶರತ್ ಹಾಗೂ ಲಿಖಿತ್

**ಕೋಲಾರ**

✍ ಕೋಲಾರ ಮಂಜು

**ಕೋ**ಲಾರ ಜಿಲ್ಲೆ, ಬಂಗಾರಪೇಟೆ ಪಟ್ಟಣದ ದೇಶಿಹಳ್ಳಿಯ ವಾಸಿಗಳಾದ ಲಿಖಿತ್ (16), ಶರತ್ (14), ಮುಬಾರಕ್ (14), ಹೇಮಂತ್ (14) ಈ ನಾಲ್ವರು ಬಾಲಕರು ಜೀಗಿರಿ ದೋಸ್ತುಗಳಾಗಿದ್ದು, ಪಟ್ಟಣದ ಸರ್ಕಾರಿ ಹೈಸ್ಕೂಲ್‌ವೊಂದರಲ್ಲಿ ಲಿಖಿತ್ ಎಸ್‌ಎಸ್‌ಎಲ್‌ಸಿ ಮತ್ತು ಇನ್ನುಳಿದ ಮೂವರು ಎಂಟನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದರು. ಈಗಿನ ಬಾಲಕರು ಮತ್ತು ಯುವಕರು ಮನೆಯ ತಿಂಡಿ, ಊಟಕ್ಕಿಂತ ಹೊರಗಡೆ ಫುಟ್‌ಪಾತ್ ಮೇಲಿನ ಅಂಗಡಿಗಳಲ್ಲಿನ ಜಂಗ್ ಫುಡ್ ಮತ್ತು ಫಾಸ್ಟ್‌ಫುಡ್‌ಗಳು ಎಂದರೆ ತುಂಬಾ ಇಷ್ಟ. ಇದರ ಜೊತೆಗೆ ಸಿನಿಮಾ ನೋಡುವ ಹಾಗೂ ಸೈಬರ್ ಸೆಂಟರ್‌ಗಳಲ್ಲಿ ಗೇಮ್ ಮಾಡುವ ಮತ್ತು ಸಿನಿಮಾ ನೋಡುವ ಹುಚ್ಚು ಬೆಳೆಸಿಕೊಂಡಿರುತ್ತಾರೆ. ಬಾಲಕರಿಗೆ ಮನೆಯವರು ಮತ್ತು ಪೋಷಕರು ದಿನವು ಕೊಡುವ ಪಾಕೇಟ್ ಮನಿ ಜೊತೆಗೆ ಶಾಲೆ ಹಾಗೂ ಬೇರೆ ಕಾರಣಗಳನ್ನು ಹೇಳಿ ಅವರಿಂದ ಹಣ ಪಡೆದುಕೊಂಡು ಬಂದು ಶಾಲೆಗೆ ಚಕ್ಕರ್ ಹೊಡೆದು ಸಿನಿಮಾ ನೋಡಿ, ಹೋಟೆಲ್‌ಗೆ ಹೋಗಿ ತಿಂಡಿ ತಿಂದು, ಬೆಳಗ್ಗಿನಿಂದ ಸಂಜೆವರೆಗೂ ಶಾಲೆಯಲ್ಲಿ ಓದಿ, ಬರೆದು ಸುಸ್ತಾದ ರೀತಿಯಲ್ಲಿ ಮನೆಗೆ ಬಂದು ಪೋಷಕರಿಂದ ಉಪಚಾರ ಮಾಡಿಸಿಕೊಳ್ಳುತ್ತಿರುತ್ತಾರೆ.

ಪೋಷಕರಿಗೇನು ಮಕ್ಕಳು ಶಾಲೆಗೆ ಹೋಗಿ ಕಷ್ಟಪಟ್ಟು ಓದಿ ಮನೆಗೆ ಬರುತ್ತಿದ್ದಾರೆಂದುಕೊಂಡಿರುತ್ತಾರೆ. ಆದರೆ ಕೆಲವು ಬಾಲಕರು ಮತ್ತು ಯುವಕರು ಚೆನ್ನಾಗಿ ಓದಿ ತಮ್ಮ ಜೀವನವನ್ನು ರೂಪಿಸಿಕೊಳ್ಳುವ ಬದಲಿಗೆ ಕೆಟ್ಟ ಚಾಳಿಗಳಿಗೆ ಬಿದ್ದು ಜೀವನವನ್ನು ಹಾಳು ಆಡಿಕೊಳ್ಳುತ್ತಿರುವುದಲ್ಲದೆ ಪೋಷಕರ ಆಸೆ, ಕನಸುಗಳನ್ನು ಭಗ್ನ ಮಾಡುತ್ತಿದ್ದಾರೆ. ಎಷ್ಟೋ ಜನ ಪೋಷಕರು ನಮ್ಮ ಮಕ್ಕಳ ಹಣೆಯಲ್ಲಿ ಬರೆದಿರುವುದು ಇಷ್ಟೆ ಎಂದು ಸುಮ್ಮನಾಗುತ್ತಾರೆ. ಸಹವಾಸದಿಂದ ಸನ್ಯಾಸಿ ಕೆಟ್ಟ ಎನ್ನುವಂತೆ ವಿದ್ಯಾರ್ಥಿಗಳು ಒಳ್ಳೆಸ್ನೇಹಿತರ ಸ್ನೇಹ ಮಾಡಿದರೆ ಒಳ್ಳೆಯವರಾಗಿಯೇ ಮುಂದುವರೆಯುತ್ತಾರೆ. ಆದರೆ ಕೆಟ್ಟ ಸ್ವಭಾವ ಇರುವ ಸ್ನೇಹಿತರ ಸಹವಾಸ ಮಾಡಿದರೆ ಕೆಟ್ಟ ದಾರಿಯಲ್ಲಿಯೇ ನಡೆಯುತ್ತಾರೆ. ಬಂಗಾರಪೇಟೆಯ ನಾಲ್ವರು ಬಾಲಕರಿಗೆ ಸಿನಿಮಾ ನೋಡುವ ಹುಚ್ಚಿದ್ದು, ಬಂಗಾರಪೇಟೆಯಲ್ಲಿರುವ ಎರಡು ಚಿತ್ರಮಂದಿರಗಳಲ್ಲಿನ ಚಿಕ್ಕ ಸ್ಕ್ರೀನ್ ಮತ್ತು ಮಾಮೂಲಿ ಸೌಂಡ್‌ನಲ್ಲಿ ಸಿನಿಮಾಗಳನ್ನು ನೋಡುತ್ತಾ ಬಂದಿರುವ ಇವರಿಗೆ ದೊಡ್ಡ ನಗರಗಳಲ್ಲಿನ ಪಿವಿಆರ್‌ಗಳಲ್ಲಿ ಸಿನಿಮಾ ನೋಡಬೇಕೆಂಬ ಆಸೆಯನ್ನು ಇಟ್ಟುಕೊಂಡಿದ್ದರು. ಡಿಸೆಂಬರ್‌ನಲ್ಲಿ ಬಿಡುಗಡೆಯಾದ ಅಲ್ಲು ಅರ್ಜುನ್ ನಟನೆಯ ಪುಷ್ಪ-2 ಚಿತ್ರವನ್ನು ಬಂಗಾರಪೇಟೆಯ ಚಿತ್ರಮಂದಿರದಲ್ಲಿ ನೋಡಿದರೂ ಇವರಿಗೆ ತೃಪ್ತಿ ಸಿಗಲಿಲ್ಲ. ಅದಕ್ಕೆ ಈ ನಾಲ್ವರು ಬೆಂಗಳೂರಿಗೆ ಹೋಗಿ ಪುಷ್ಪ-2 ಸಿನಿಮಾನವನ್ನು ನೋಡಿ ಬರುವ ಪ್ಲಾನ್ ಮಾಡಿಕೊಂಡರು. ಅದರಂತೆ ಬೆಂಗಳೂರಿನಲ್ಲಿ ತಿಂಡಿ, ಊಟ, ಸಿನಿಮಾ ಮತ್ತು ಖರ್ಚುಗಳಿಗಾಗಿ ಹಣಕಾಸಿನ ವ್ಯವಸ್ಥೆಯನ್ನು ಮಾಡಿಕೊಂಡ ಇವರು ಡಿಸೆಂಬರ್ 21ರಂದು ಶನಿವಾರ ಸಂಜೆ 4 ಗಂಟೆಗೆ ಬಂಗಾರಪೇಟೆ ರೈಲ್ವೆ ನಿಲ್ದಾಣದಿಂದ ರೈಲಿನಲ್ಲಿ ಹೊರಟು ರಾತ್ರಿ ಬೆಂಗಳೂರಿನ ಸಂಗೊಳ್ಳಿ ರಾಯಣ್ಣ ರೈಲ್ವೆ ನಿಲ್ದಾಣದಲ್ಲಿ ಇಳಿದುಕೊಂಡು ಇಷ್ಟು ಹೊತ್ತಿನಲ್ಲಿ ಎಲ್ಲಿಗೆ ಹೋಗುವುದೆಂದು ತಿಳಿಯದೆ ರಾತ್ರಿ ಸಿಟಿ ರೈಲ್ವೆ ನಿಲ್ದಾಣದಲ್ಲಿಯೇ ಮಲಗಿಕೊಂಡಿದ್ದು ಬೆಳಿಗ್ಗೆ ಎದ್ದು ಅಲ್ಲಿಯೇ ಕೈ, ಕಾಲು ಮುಖ ತೊಳೆದುಕೊಂಡು ರೈಲ್ವೆ ಕ್ಯಾಂಟಿನಲ್ಲಿ ತಿಂಡಿ ತಿಂದು ಪುಷ್ಪ-2 ಸಿನಿಮಾ ನೋಡಲು ಚಿತ್ರಮಂದಿರವನ್ನು ಹುಡುಕಿಕೊಂಡು ಮೆಜೆಸ್ಟಿಕ್ ಕಡೆಗೆ ಹೊರಟರು.




ಎಸ್ಪಿ ಕೆ.ಎಂ. ಶಾಂತರಾಜು



ಪಿಐ ದಯಾನಂದ್

**ನಾಲ್ವರು ಬಾಲಕರ ಕಿಡ್ನಾಪ್**

ಕೆಂಪೇಗೌಡ ರಸ್ತೆಯಲ್ಲಿನ ಚಿತ್ರಮಂದಿರಗಳ ಬಳಿ ಸುತ್ತಾಡಿದ ನಂತರ ತ್ರಿವೇಣಿ ಚಿತ್ರಮಂದಿರಕ್ಕೆ ಹೋಗಿ




ಸಿನಿಮಾ ಟಿಕೇಟ್

ಅಲ್ಲು ಅರ್ಜುನ್ ನಟನೆಯ ಪುಷ್ಪ-2 ಚಿತ್ರವನ್ನು ವೀಕ್ಷಿಸಲು ಎ ರೋಲ್‌ನ 24-25 ನಂಬರ್ ಸೀಟ್‌ನ ಟಿಕೇಟ್‌ನ್ನು ತೆಗೆದುಕೊಂಡು ಹೋಗಿ ಚಿತ್ರಮಂದಿರದಲ್ಲಿ ಸಿನಿಮಾವನ್ನು ನೋಡುತ್ತಿದ್ದಾಗ ಪಕ್ಕದ ಸೀಟಿನಲ್ಲಿ ಕುಳಿತಿದ್ದ

☞ 12




ಜ್ಯೋತಿಷಿ ಬಳಿ ಇದ್ದ ವಸ್ತುಗಳು




ಜ್ಯೋತಿಷಿ ಉಪಯೋಗಿಸುತ್ತಿದ್ದ ಮೂಳೆ, ಕುಂಕುಮ, ಇತರೆ ವಸ್ತುಗಳು




ಬಂಗಾರಪೇಟೆ ರೈಲ್ವೆ ನಿಲ್ದಾಣ

**ನಾವಿಂದು ಹೇಳೋದಕ್ಕೆ ಹೋಗ್ತಿರೋ ಸ್ಟೋರಿ ಯಾವುದೇ ಕ್ರೈಂ ಥ್ರಿಲ್ಲರ್ ಮೂವಿಗೂ ಕಡಿಮೆ ಇಲ್ಲ. ಆಲ್ ಟೈಂ ಬ್ಲಾಕ್‌ಬಸ್ಟರ್ ಕ್ರೈಂ ಥ್ರಿಲ್ಲರ್ ಮೂವಿ ಅಂತ ಕರೆಯಿಸಿಕೊಳ್ಳೋ ದೃಶ್ಯಂ ಸಿನಿಮಾವನ್ನೇ ಈ ಕ್ರೈಂ ಕಹಾನಿ ಮೀರಿಸುತ್ತೆ. ಹಣಕ್ಕಾಗಿ ಕೊಲೆ ಮಾಡಿದ ಮುಖದ ಮೇಲೆ ಮೀಸೆ ಮೂಡದ ಹುಡುಗರ ಗ್ಯಾಂಗ್ ಹೆಣವನ್ನ ಯಾರಿಗೂ ಗೊತ್ತಾಗದ ರೀತಿಯಲ್ಲಿ ಡಿಸ್ಪೋಜ್ ಮಾಡಿತ್ತು. ಕೊಲೆಯಾಗಿದೆ ಅನ್ನೋದಕ್ಕೆ ಒಂದೇ ಒಂದು ಸುಳಿವೂ ಸಹ ಇರದಂತೆ ಗ್ಯಾಂಗ್ ಪಕ್ಕಾ ಪ್ಲಾನ್ ಮಾಡಿತ್ತು. ಆದರೆ ಈ ಪ್ರಕರಣ ಬೆನ್ನಟ್ಟಿದ್ದ ಪೊಲೀಸರು ಖತರ್ನಾಕ್ ಕಿಲ್ಲರ್ ಗ್ಯಾಂಗನ್ನ ಪತ್ತೆ ಮಾಡಿದ್ದೆ ರಣರೋಚಕ... ಆ ಥ್ರಿಲ್ಲಿಂಗ್ ಕಹಾನಿಯನ್ನ ಹೇಳೋದಕ್ಕೂ ಮೊದಲು ಒಂದು ಮಿಸ್ಸಿಂಗ್ ಕಥೆಯನ್ನ ಹೇಳ್ತೀನಿ ಕೇಳಿ...**


ಬಂಧಿತ ಆರೋಪಿಗಳು

# ಮಿಸ್ಸಿಂಗ್ ಆಗಿದ್ದ ನಿವೃತ್ತ ರೈಲ್ವೆ ನೌಕರ ಭೀಕರ ಹತ್ಯೆ! ಹಣಕ್ಕಾಗಿ ಹೆಣವಿಟ್ಟಿದ್ರು ಮೀಸೆಯು ಚಿಗುರದ ಚಿಲ್ಟಾರಿಗಳು!!

**ವಿಜಯಪುರ**
✍ ರಾಜೀವ್ ಬೈರಿ


ಕೊಲೆಯಾದ ಶರಣಪ್ಪ ಕಲ್ಲೂರ್

ಹತ್ಯೆಯಾಗಿರುವ ವ್ಯಕ್ತಿಯ ಹೆಸರು ಶರಣಪ್ಪ ಕಲ್ಲೂರ್ ಅಂತಾ. ವಯಸ್ಸು ಸರಿಸುಮಾರು 68. ರೈಲ್ವೆ ನೌಕರನಾಗಿ ಕೆಲಸ ಮಾಡಿದ್ದ ಶರಣಪ್ಪ ಎಂಟು ವರ್ಷಗಳ ಹಿಂದೆಯೇ ನಿವೃತ್ತಿ ಪಡೆದುಕೊಂಡು ವಿಜಯಪುರ ಜಿಲ್ಲೆಯ ಇಂಡಿ ತಾಲೂಕಿನ ಗೋಳಸಾರ ಗ್ರಾಮದಲ್ಲಿ ವಾಸವಿದ್ದ. ಎರಡು ಮದುವೆಗಳಾಗಿದ್ರು, ಇಬ್ಬರು ಹೆಂಡ್ತಿಯರು ಜೊತೆಗಿಲ್ಲ. ಸಂಬಂಧಿಕರೆಲ್ಲ ವಿಜಯಪುರದಲ್ಲಿ ವಾಸವಿದ್ದಾರೆ. ಇನ್ನೂ ನಿವೃತ್ತಿ ವೇಳೆ ಲಕ್ಷಾಂತರ ರೂಪಾಯಿ ಹಣ ರೈಲ್ವೆ ಇಲಾಖೆಯಿಂದ ನಿವೃತ್ತಿ ಫಂಡ್ ಆಗಿ ಸಿಕ್ಕಿತ್ತು. ಜೊತೆಗೆ ಪ್ರತಿ ತಿಂಗಳು ಪೆನ್ಷನ್. ಮತ್ತೊಂದೆಡೆ ಗೊಳಸಾರ ಗ್ರಾಮದಲ್ಲಿ ಜೀವನಕ್ಕಾಗುವಷ್ಟು ಜಮೀನು ಇತ್ತು. ಆದ್ರೆ ಅದೇನಾಯ್ತೋ ಗೊತ್ತಿಲ್ಲ ಶರಣಪ್ಪ ಏಕಾಏಕಿ ನಾಪತ್ತೆಯಾಗಿದ್ದ.


ಮೃತನ ಮನೆ

ದಿನಾಂಕ 8-10-2024ರಂದು ಬೆಳಿಗ್ಗೆ 10.30 ನಿಮಿಷ. ಸರಿಯಾಗಿ ಇದೇ ಸಮಯಕ್ಕೆ ಶರಣಪ್ಪ ತನ್ನ ಸ್ವಿಫ್ಟ್ ಕಾರಲ್ಲಿ ಕೆಲಸ ಅಂತಾ ಸಿಂದಗಿ ಕಡೆಗೆ ಹೊರಟಿದ್ದ. ಹೀಗೆ ಹೋದವ ವಾಪಸ್ ಬಂದೇ ಇರಲಿಲ್ಲ. ಅದರಲ್ಲೂ ಶರಣಪ್ಪ ಕುಟುಂಬಸ್ಥರಿಂದ, ಸಂಬಂಧಿಕರಿಂದ, ಗ್ರಾಮಸ್ಥರಿಂದಲೂ ಕೊಂಚ ಅಂತರ ಕಾಯ್ದುಕೊಳ್ಳುತ್ತಿದ್ದ. ಹೀಗಾಗಿ ಬಹುತೇಕರಿಗೆ ಶರಣಪ್ಪ ಎಲ್ಲಿ ಅಡ್ಡಾಡ್ತಾನೆ, ಆತನ ನಿತ್ಯದ ಚಟುವಟಿಕೆಗಳು ಏನು ಅನ್ನೋದು ಗೊತ್ತಿರಲಿಲ್ಲ. ಹೀಗಾಗಿ ಶರಣಪ್ಪ ಅಕ್ಟೋಬರ್ 8 ರಂದೆ ನಾಪತ್ತೆಯಾಗಿದ್ದರೂ ವಿಜಯಪುರದಲ್ಲಿರೋ ಆತನ ಸಂಬಂಧಿಕರಿಗೆ ಗೊತ್ತಾಗಿದ್ದು ವಾರದ ಬಳಿಕ. ಊರಲ್ಲಿ ವಿಚಾರಿಸಿದ್ದ ಕುಟುಂಬಸ್ಥರು, ಆತ ಊರಿಂದ ಕಾಣೆಯಾಗಿ ಈಗಾಗಲೇ ಒಂದು ವಾರವೇ ಆಗಿದೆ ಎಂದಾಗ ಇಂಡಿ ಗ್ರಾಮೀಣ ಪೊಲೀಸ್ ಠಾಣೆಗೆ ಬಂದು ಮಿಸ್ಸಿಂಗ್ ದೂರು ನೀಡಿದ್ದರು.

ಶರಣಪ್ಪ ಕುಟುಂಬಸ್ಥರಿಂದ ಮಿಸ್ಸಿಂಗ್ ಕಂಪ್ಲೆಂಟ್ ಪಡೆದ ಗ್ರಾಮೀಣ ಠಾಣೆ ಪಿಎಸ್‌ಐ ಸೋಮೇಶ್ ಗೆಜ್ಜಿ ಸತತ 20 ದಿನಗಳ ಕಾಲ ಶರಣಪ್ಪನಿಗಾಗಿ ಹುಡುಕಾಡಿದರು. ಆದರೆ ಶರಣಪ್ಪಾ ಏನಾದ ಎನ್ನುವ ಸಣ್ಣ ಸುಳಿವು ಸಿಕ್ಕಿರಲಿಲ್ಲ. ಆದರೆ 20 ದಿನದ ಬಳಿಕ ಬಬಲೇಶ್ವರ ಪೊಲೀಸ್ ಠಾಣಾ ಸರಹದ್ದಿನಲ್ಲಿ ಅಪರಿಚಿತ ಶವಸಿಕ್ಕಿದೆ ಎನ್ನುವ ಮಾಹಿತಿ ದೊರೆತಿತ್ತು. ಶರಣಪ್ಪ ಅಕ್ಟೋಬರ್ 8 ರಂದು ಮಿಸ್ಸಿಂಗ್ ಆಗಿದ್ದರೇ ದಿನಾಂಕ 14 ರಂದು ಬಬಲೇಶ್ವರ ಠಾಣಾ ವ್ಯಾಪ್ತಿಯಲ್ಲಿ ಅಪರಿಚಿತ ಶವ ಸಿಕ್ಕಿದ್ದು, ಮುಖ ಗುರುತು ಸಿಗದ ಕಾರಣ ಠಾಣಾ ಅಧಿಕಾರಿಗಳು ಶವದ ಬಳಿ ಸಿಕ್ಕ ಬಟ್ಟೆ ತೆಗೆದಿಟ್ಟು, ಶವದ ಫೋಟೋಗಳನ್ನ ಪಡೆದು ಶವಸಂಸ್ಕಾರ ಮಾಡಿದ್ದರು. ಇಪ್ಪತ್ತು ದಿನದ ಹುಡುಕಾಟ ಬಳಿಕ ಈ ವಿಷಯ ತಿಳಿದು ಅನುಮಾನಗೊಂಡ ಇಂಡಿ ಪಿಎಸ್‌ಐ ಸೋಮೇಶ್ ಗೆಜ್ಜಿ ಅಲ್ಲಿ ಶರಣಪ್ಪ ಸಹೋದರ ವಿಠ್ಠಲ ಎಂಬುವರನ್ನ ಕರೆದುಕೊಂಡು ಪರಿಶೀಲಿಸಲಾಗಿ, ಅದು ತಮ್ಮ ಸಹೋದರ ಶರಣಪ್ಪನ ಬಟ್ಟೆ, ಶವ ಎಂದು ವಿಠ್ಠಲ್ ಗುರುತಿಸಿದ್ದ.


ಶವ ಹೂತಿಟ್ಟ ಸ್ಥಳದಲ್ಲಿ ಆರೋಪಿಗಳೊಂದಿಗೆ ಪೊಲೀಸರು

ಆಗ ಇಂಡಿ ಗ್ರಾಮೀಣ ಪೊಲೀಸರಿಗೆ ಒಂದಂತೂ ಕನ್ಫರ್ಮ್ ಆಗಿತ್ತು. ಶರಣಪ್ಪ ಬದುಕಿಲ್ಲ, ಬದಲಿಗೆ ಆತನ ಮರ್ಡರ್ ಆಗಿದೆ ಅನ್ನೋದು. ಆಗ ತನಿಖೆ ದಿಕ್ಕನ್ನೆ ಚೇಂಜ್ ಮಾಡಿದ ಪೊಲೀಸರಿಗೆ ಸಣ್ಣದೊಂದು ಕ್ಲೂ ಸಿಕ್ಕಿತ್ತು. ಅದೇನಂದ್ರೆ ಶರಣಪ್ಪ ಕಾಣೆಯಾದ ಬಳಿಕ ಒಂದು ಬಾರಿ ಶರಣಪ್ಪ ತನ್ನ ಎಟಿಎಂ ಯೂಸ್ ಮಾಡಿದ್ದಾನೆ ಅನ್ನೋ ವಿಚಾರ ಗೊತ್ತಾಗಿತ್ತು. ಇಂಡಿಯ ಆ ಎಟಿಎಂಗೆ ತೆರಳಿದ ಪೊಲೀಸರು ಅಲ್ಲಿನ ಸಿಸಿಟಿವಿ ದೃಶ್ಯಗಳನ್ನ ಪಡೆದುಕೊಂಡಿದ್ರು. ಆಗ ಆ ಸಿಸಿಟಿವಿ ದೃಶ್ಯದಲ್ಲಿ ಶರಣಪ್ಪನೆ ಇರಲಿಲ್ಲ, ಆದರೆ ಶರಣಪ್ಪನ ಎಟಿಎಂನಿಂದ ಹಣ ಮಾತ್ರ ಡ್ರಾ ಆಗಿತ್ತು. ಈ ವಿಚಾರ ಹಲವು ಅನುಮಾನಗಳಿಗೆ ಕಾರಣವಾಗಿತ್ತು. ಆಗ ದೃಶ್ಯದಲ್ಲಿ ಒಬ್ಬ ಹಾಕಿದ್ದ ಒಂದು ಹಳದಿ ಟೀ ಶರ್ಟ್ ಪೊಲೀಸರಿಗೆ ಹಂತಕರ ಕ್ಲೂ ನೀಡಿತ್ತು. ಇದನ್ನ ಬೆನ್ನಟ್ಟಿ ಹೊರಟಾಗ ಪೊಲೀಸರಿಗೆ ಸಿಕ್ಕಿದ್ದು ಇನ್ನೂ ಮೀಸೆ ಚಿಗುರದ ಹುಡುಗರು.



ಎಟಿಎಂನಿಂದ ಹಣ ಡ್ರಾ ಮಾಡುತ್ತಿರುವುದು

ಎಟಿಎಂ ಒಂದರ ಸಿಸಿಟಿವಿಯಲ್ಲಿ ಸೆರೆಯಾಗಿದ್ದ ಹಳದಿ ಟೀಶರ್ಟ್‌ನ ಮುಸುಕುಧಾರಿಯನ್ನ ಬೆನ್ನಟ್ಟಿದ್ದ ಪೊಲೀಸರು ಪ್ರವೀಣ ಬಾಗೇವಾಡಿ ಎನ್ನುವ 18 ವರ್ಷದ ಎಳೆ ಹುಡುಗನನ್ನ ಎಳೆದು ತಂದಿದ್ದರು. ಆರಂಭದಲ್ಲಿ ತನ್ನದೇನು ತಪ್ಪೇ ಇಲ್ಲ ಎಂದಿದ್ದ ಹುಡುಗ ಆಮೇಲೆ ಬಾಯ್ಬಿಟ್ಟಿದ್ದು, ಯಾರೂ ಊಹಿಸಲು ಸಾಧ್ಯವಿಲ್ಲದ ಭಯಾನಕ ಮರ್ಡರ್‌ನ ಕಹಾನಿಯನ್ನ..!


ಹೂತಿಟ್ಟಿದ್ದ ಶವವನ್ನು ಹೊರ ತೆಗೆದಿರುವುದು

ಇಂಡಿ ಪೊಲೀಸರಿಗೆ ಸಿಕ್ಕ ಪ್ರವೀಣ ಬಾಗೇವಾಡಿ ಎನ್ನುವ ಮೀಸೆ ಚಿಗುರದ ಹುಡುಗ ಶರಣಪ್ಪನ ಭೀಕರ ಹತ್ಯೆಯನ್ನ ಎಳೆಎಳೆಯಾಗಿ ಬಾಯ್ಬಿಟ್ಟಿದ್ದ, ಪೊಲೀಸ್ ಭಾಷೆಯಲ್ಲಿ ಮಾತನಾಡಿಸುತ್ತಿದ್ದಂತೆ ಪ್ರವೀಣ ಹತ್ಯಾಕಾಂಡ ನಡೆಸಿದ್ದ ಸಂಗಮೇಶ ಮುದೋಲಿ, ಹಣಮಂತರಾಯ ಹೆದರಿ, ಗಂಗಾಧರ ಕ್ಷತ್ರಿ ಹೆರು ಬಾಯ್ಬಿಟ್ಟಿದ್ದ. ಇವರನ್ನ ಬಂಧಿಸಿ ಕರೆತಂದಾಗಲೇ ಪೊಲೀಸರಿಗೆ ಗೊತ್ತಾಗಿದ್ದು, ಇವರೆಲ್ಲ 18 ರಿಂದ 20 ವರ್ಷದ ಒಳಗಿನ ಎಳೆ ಹುಡುಗರು ಅನ್ನೋದು. ಇನ್ನೊಂದು ಶಾಕಿಂಗ್ ವಿಚಾರ ಅಂದ್ರೆ 68 ವರ್ಷದ ವೃದ್ಧ ಶರಣಪ್ಪಗೆ ಈ ಎಳೆ ಹುಡುಗರು ಫ್ರೆಂಡ್ಸ್ ಅನ್ನೋದು.

ಹೌದು, ಎಳೆ ಹುಡುಗರೆಲ್ಲ ಸೇರಿ ವೃದ್ಧ ಶರಣಪ್ಪನ ದೋಸ್ತಿ ಮಾಡಿದ್ದರು. ಎರಡು ಮದುವೆಗಳಾದ್ರು ಒಂಟಿಯಾಗಿಯೇ ಜೀವನ ನಡೆಸ್ತಿದ್ದ ಶರಣಪ್ಪನು ಈ ಹುಡುಗರನ್ನ ಖಾಸಾ ಗೆಳೆಯರಂತೆ ನೋಡಿಕೊಂಡಿದ್ದ. ಆದರೆ ಶರಣಪ್ಪನ ಬಳಿ ರಿಟೈರ್ಮೆಂಟ್‌ನ 30 ಲಕ್ಷಕ್ಕೂ ಅಧಿಕ ಹಣ ಆತನ ಖಾತೆಯಲ್ಲಿದೆ. ಆತನ ಬಳಿ ಸಾಕಷ್ಟು ದುಡ್ಡಿದೆ ಎಂದು ಸಂಗಮೇಶ್, ಪ್ರವೀಣ, ಹಣಮಂತರಾಯ, ಗಂಗಾಧರ ಹತ್ಯೆಗೆ ಸ್ಕೇಚ್ ಹಾಕಿ ಅಂದುಕೊಂಡಂತೆ ಕೆಲಸ ಮುಗಿಸಿದ್ದರು. ಇಂಡಿ ತಾಲೂಕಿನ ಗೋಳಸಾರ ಗ್ರಾಮದಿಂದ ಸ್ವಿಫ್ಟ್ ಕಾರಲ್ಲಿ ಶರಣಪ್ಪನನ್ನ ಕರೆದೊಯ್ದಿದ್ದ ನಾಲ್ವರು ಹುಡುಗರು ಕುತ್ತಿಗೆ ಹಿಸುಕಿ ಕೊಲೆ ಮಾಡಿದ್ದರು.

ಇಬ್ಬರು ಹೆಂಡಿರು, ಮಕ್ಕಳು ಸಂಬಂಧಿಕರು ಇದ್ದರು. ರಿಟೈರ್ಮೆಂಟ್ ಬಳಿಕ ಶರಣಪ್ಪ ತನ್ನ ಜಮೀನಿದ್ದ ಇಂಡಿ ತಾಲೂಕಿನ ಗೋಳಸಾರದಲ್ಲೆ ಮನೆ ನಿರ್ಮಿಸಿಕೊಂಡು ಒಂಟಿಯಾಗಿ ವಾಸವಿದ್ದ. ಗೋಳಸಾರ ಊರಲ್ಲಿ ಒಂದಿಷ್ಟು ಜನರಿಗೆ ಬಡ್ಡಿಗೆ ಹಣ ಕೊಟ್ಟು ವ್ಯವಹಾರ ನಡೆಸ್ತಿದ್ದ. ಅಲ್ಲದೆ ಶರಣಪ್ಪನ ಬ್ಯಾಂಕ್ ಅಕೌಂಟ್‌ನಲ್ಲಿ 30 ಲಕ್ಷಕ್ಕೂ ಅಧಿಕ ಹಣವಿದೆ ಎಂದು ಸಂಗಮೇಶ, ಪ್ರವೀಣ, ಹಣಮಂತ್ರಾಯ, ಗಂಗಾಧರ ತಿಳಿದಿದ್ದರು. ಈ ಹಣ ಸಿಕ್ಕಿಬಿಟ್ರೆ ನಮ್ ಲೈಫೇ ಸೆಟ್ಲ್ ಆಗುತ್ತೆ ಎಂದು ಶರಣಪ್ಪನ

☞ 10

# ಹಣಕ್ಕಾಗಿ ಹೆಣವಿಟ್ಟದ್ರು ಮೀಸೆಯು ಚಿಗುರದ ಚಿಲ್ಟಾರಿಗಳು!!

7 ☞

ಮುಗಿಸೋದಕ್ಕೆ ಪ್ಲಾನ್ ಮಾಡಿದ್ರು. ಗೋಳಸಾರ ಗ್ರಾಮದ ಜಮೀನು, ಡಾಬಾಗಳಲ್ಲಿ ಕುಳಿತಾಗ ಹತ್ಯೆಯ ಬಗ್ಗೆಯೆ ಚರ್ಚೆ ನಡೆಸಿದ್ದರು.

ಇನ್ನೂ ಶರಣಪ್ಪನ್ನ ಊರ ಹೊರಗೆ ಕರೆದೊಯ್ಯಲು ಐಡಿಯಾ ಮಾಡಿದ ಈ ಚಿಲ್ಟಾರಿ ಕಿಲ್ಲರ್ ಗ್ಯಾಂಗ್ ಆತನ ಬಳಿ ಇದ್ದ ಪಲ್ಸರ್ ಬೈಕನ್ನ ಖರೀದಿ ಮಾಡ್ತೀವಿ ಎಂದಿತ್ತು. ಹುಡುಗರು ಕೇಳ್ತಾರೆ ಅಂತಾ ಶರಣಪ್ಪನು ಕೊಡಲು ಒಪ್ಪಿದ್ದ. ಹೀಗೆ ಕಳೆದ ಅಕ್ಟೋಬರ್ 8ರಂದು ಶರಣಪ್ಪನ ಭೇಟಿ ಮಾಡಿದ ಹುಡುಗರು ಇವತ್ತೆ ಬೈಕ್ ಬೇಕು ಎಂದಿದ್ದಾರೆ. ಆದರೆ ಸಿಂದಗಿಗೆ ಹೊರಟದ್ದೀನಿ ಎಂದಾಗ ನಾವು ನಿನ್ನ ಜೊತೆಗೆ ಬರ್ತೀವಿ, ಸಿಂದಗಿಯಲ್ಲಿ ನಮ್ದು ದುಡ್ಡು ಬರೋದಿದೆ, ಅಜೇ ದುಡ್ಡನ್ನ ನಿಮಗೆ ಕೊಟ್ಟು ಪಲ್ಸರ್ ಬೈಕ್ ತಗೋತಿವಿ ಎಂದಿದ್ದಾರೆ. ಇದನ್ನ ನಂಬಿದ ಶರಣಪ್ಪ ತನ್ನದೆ ಕಾರಲ್ಲಿ ಎಲ್ಲರನ್ನೂ ಕರೆದೊಯ್ದಿದ್ದ. ಆದರೆ ಮುಂದೆ ನಾದ ಗ್ರಾಮದ ಡಾಬಾದಲ್ಲಿ ಎಲ್ಲರೂ ಭರ್ಜರಿಯಾಗಿ ಪಾರ್ಟಿ ಮಾಡ್ತಾರೆ. ಅಲ್ಲಿ ಶರಣಪ್ಪಗೆ ಕಂಠಪೂರ್ತಿ ಕುಡಿಸಿ ನಶೆ ಏರುವಂತೆ ಮಾಡ್ತಾರೆ. ಆಗ ಆತನ ಬಳಿ ಇದ್ದ ಎಟಿಎಂ ಕಾರ್ಡ್ ಪಡೆದು ಅದರ ಪಿನ್ ನಂಬರ್ ಸಹ ಪಡೆಯುತ್ತಾರೆ. ಬಳಿಕ ಅಲ್ಲಿಂದ ಮುಂದೆ ಕೆಪಿ ಕೆನಾಲ್ ಬಳಿ ಕೊಂಡೊಯ್ದು ತಮ್ಮ ಜೊತೆಗೆ ತಂದಿದ್ದ ಹಗ್ಗದಿಂದ ಕುತ್ತಿಗೆಗೆ ಬಿಗಿದು ಕೊಲೆ ಮಾಡಿದ್ದಾರೆ.



**ಹೆಣದ ಇಟ್ಟುಕೊಂಡು ಮೂರು ಜಿಲ್ಲೆಗಳಲ್ಲಿ ಅಡ್ಡಾಟ!**

ಬಳಿಕ ಶರಣಪ್ಪನ ಶವವನ್ನ ಕಾರಿನ ಡಿಕ್ಕಿಯಲ್ಲಿ ಹಾಕಿಕೊಂಡಿದ್ದಾರೆ. ಅಲ್ಲಿಂದ ಡೆಡ್‌ಬಾಡಿಯನ್ನ ಡಿಸ್ಪೋಜ್ ಮಾಡಲು ಬರೋಬ್ಬರಿ ಮೂರು ಜಿಲ್ಲೆಗಳನ್ನ ಅಡ್ಡಾಡಿದ್ದಾರೆ. ಟೋಲ್‌ಗಳಲ್ಲಿ ಕಾರ್ ಪಾಸ್ ಆದ್ರೆ ಸಿಕ್ಕಿಹಾಕಿಕೊಳ್ತೀವಿ ಎಂದು ಟೋಲ್‌ಗಳನ್ನ ತಪ್ಪಿಸಿ, ಕ್ಯಾಮರಾಗಳಿದ್ದ ರಸ್ತೆಗಳನ್ನ ಅವೈಡ್ ಮಾಡಿ ಶವವನ್ನ ಕಾರಲ್ಲಿ ಇಟ್ಟುಕೊಂಡು ಅಡ್ಡಾಡಿದ್ದಾರೆ.

ಮೊದಲು ಕಲ್ಬುರ್ಗಿ ಜಿಲ್ಲೆಯ ಅಪ್ಜಲ್‌ಪೂರವರೆಗೆ ಹೋಗಿ ಅಲ್ಲಿ ಕ್ಯಾಮರಾಗಳಿದ್ದ ಕಾರಣ ಹೆಣವನ್ನ ವಾಪಸ್ ತೆಗೆದುಕೊಂಡು ಬಾಗಲಕೋಟೆ ಜಿಲ್ಲೆಯ ಬಾದಾಮಿಗೆ ಕೊಂಡೊಯ್ದಿದ್ದಾರೆ. ಆದರೆ ಅಲ್ಲಿಯೂ ಹೆಣ ಬಿಸಾಡದೆ ಬಳಿ ಕೊಲ್ಹಾರ ಬ್ರಿಡ್ಜ್ ಬಳಿ ಬಂದಿದ್ದಾರೆ. ಅಲ್ಲಿಯ ಕ್ಯಾಮರಾಗಳಿದ್ದ ಕಾರಣ ಅಲ್ಲಿಂದ ವಾಪಸ್ ಬೆಳಗಾವಿ ಜಿಲ್ಲೆಯ ಗಡಿ ತಲುಪಿ ಕೊನೆಗೆ ಅಲ್ಲಿಂದ ಬಬಲೇಶ್ವರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಬರುವ ಡೋಣಿ ನದಿ ಬಳಿಯಲ್ಲಿ ಶವವನ್ನ ಹೂತು ವಾಪಸ್ ಆಗಿದೆ. ವಾರದ ಬಳಿಕ ಶವ ಪತ್ತೆಯಾಗಿದೆ. ಆದರೆ ಇಂಡಿ ಗ್ರಾಮೀಣ ಠಾಣೆಯಲ್ಲಿ ಇನ್ನೂ ಮಿಸ್ಸಿಂಗ್ ಕೇಸ್ ದಾಖಲಾಗದ ಕಾರಣ ಬಬಲೇಶ್ವರದಲ್ಲಿ ಅನಾಮಧೇಯ ಶವ ಪತ್ತೆ ಪ್ರಕರಣ ಮಾತ್ರ ದಾಖಲಾಗಿದೆ..

**ಹಣದ ಆಸೆಗೆ ಶರಣಪ್ಪ ಕೊಲೆ ಮಾಡಿದವರಿಗೆ ಶಾಕ್!**

ಶರಣಪ್ಪನ ಎಟಿಎಂನಲ್ಲಿ 30 ಲಕ್ಷ ಹಣ ಇದೆ ಎಂದು ಕೊಲೆ ಮಾಡಿದ್ದ ಕಿಲ್ಲರ್ ಗ್ಯಾಂಗಿಗೆ ಶಾಕ್ ಎದುರುರಾಗಿತ್ತು. ಶರಣಪ್ಪ ಹತ್ಯೆ ಬಳಿಕ ಆತನ ಎಟಿಎಂ ಪಡೆದು ಚೆಕ್ ಮಾಡಿದ್ರೆ, ಅಲ್ಲಿ ಬರಿ 1 ಲಕ್ಷ 15 ಸಾವಿರ ಇದ್ದವು. ತಾವು ಪೊಲೀಸರಿಗೆ ತಗಲಾಕಿಕೊಳ್ಳುವ ಮೊದಲು ಡ್ರಾ ಮಾಡಿಕೊಂಡಿದ್ದು 90 ಸಾವಿರ ಮಾತ್ರ. ಲಕ್ಷ-ಲಕ್ಷ ಹಣದ ಆಸೆಗೆ ಹೆಣ ಕೆಡವಿದವರಿಗೆ ಸಿಕ್ಕಿದ್ದು ಕೇವಲ 90 ಸಾವಿರ ಮಾತ್ರ.

ಇಡೀ ಪ್ರಕರಣಕ್ಕೆ ಟ್ವಿಸ್ಟ್ ಕೊಟ್ಟಿದ್ದೆ ಆರೋಪಿ ನಂಬರ್ 2 ಪ್ರವೀಣ ಬಾಗೇವಾಡಿ ಧರಿಸಿದ್ದ ತನ್ನ ಫೆವರೆಟ್ ಯಲ್ಲೋ ಟೀ ಶರ್ಟ್. ಕೊಲೆಯ ಬಳಿಕ ಹಣ ಡ್ರಾ ಮಾಡಲು ಎಟಿಎಂಗೆ ತೆರಳಿದ್ದ ಪ್ರವೀಣ ಬಾಗೇವಾಡಿ ಅಂದು ತನ್ನ ಫೇವರೆಟ್ ಯೆಲ್ಲೋ ಟೀ ಶರ್ಟ್ ಧರಿಸಿದ್ದ. ಮುಖಕ್ಕೆ ಮಾಸ್ಕ್ ಹಾಕಿದ್ದರೂ ಯಲ್ಲೋ ಟೀ ಶರ್ಟ್ ಮಾತ್ರ ಎದ್ದು ಕಂಡಿತ್ತು. ಪೊಲೀಸರು ಶರಣಪ್ಪ ಸಂಪರ್ಕದಲ್ಲಿದ್ದವರ ಹೆಸರು ಪಡೆದು ಅವರ ಫೇಸ್‌ಬುಕ್ ಪ್ರೊಫೈಲ್ ಚೆಕ್ ಮಾಡುವಾಗ ಪ್ರವೀಣ ಧರಿಸಿದ್ದ ಹಳದಿ ಟೀ ಶರ್ಟ್ ಮಿರಮಿರ ಅಂತ ಮಿಂಚಿತ್ತು. ಈ ಮೂಲಕ ಇಡೀ ಮರ್ಡರ್ ಪ್ರಕರಣ ಹೊರಗೆ ಬಿದ್ದಿತ್ತು. ☯

# ಇದು ಆಕಸ್ಮಿಕ ಸಾವಾ...? ಕೊಲೆನಾ...?

3 ☞

ಪೊಲೀಸರ ದಿಕ್ಕು ತಪ್ಪಿಸುವ ಕೆಲಸ ಮಾಡಿದ್ದಾನೆ ಎನ್ನಲಾಗಿದೆ. ಪೊಲೀಸರಿಗೆ ಮಾಹಿತಿ ನೀಡಿದ ವೇಳೆ ಅಂದು ರಾತ್ರಿ ಕಾರಿನಲ್ಲಿ ಹೋದ ಸಮಯದಲ್ಲಿ ಆಟೋಗೆ ಗುದ್ದಿದೆ,



ಶವ ಸಾಗಿಸುತ್ತಿರುವುದು

ಬೈಕ್‌ಗೆ ಗುದ್ದಿದ ನೆನಪು. ಆನಂತರ ಏನಾಯಿತೋ ಗೊತ್ತಿಲ್ಲ ಎಂದು ಹೇಳಿಕೆ ನೀಡಿದ್ದಾನೆ ಎಂದು ತಿಳಿದು ಬಂದಿದೆ.

ಪಾರ್ಟಿಗೆ ಹೋಗಿದ್ದ ಸ್ಯಾಂಟ್ರೋ ಕಾರ್ ಅದು ಸಾಗರ್‌ನದ್ದೇ. ಪೊಲೀಸರು ಸಾಗರ್‌ನ ಕಾರ್ ವಶಕ್ಕೆ ಪಡೆದು ಪರಿಶೀಲಿಸಿದಾಗ ಆ ಕಾರಿನಲ್ಲಿ ರಕ್ತದ ಕಲೆಗಳು ಪತ್ತೆಯಾಗಿದೆ ಎಂಬುದು ಗ್ರಾಮಸ್ಥರಲ್ಲಿ ಗುಸುಗುಡುತ್ತಿದೆ.

ಮಧು ನಾಪತ್ತೆ ಪ್ರಕರಣದಲ್ಲಿ ದೂರು ದಾಖಲಿಸಿಕೊಂಡ ಗ್ರಾಮಾಂತರ ಪೊಲೀಸರು ಗ್ರಾಮದ ರಸ್ತೆಯಲ್ಲಿನ ಸಿ.ಸಿ. ಕ್ಯಾಮರಾದ ದೃಶ್ಯಗಳನ್ನು ವಶಕ್ಕೆ ಪಡೆದು ರಸ್ತೆಯಲ್ಲಿ ಸಂಚಾರ ಮಾಡಿದ ವಾಹನಗಳ ಬಗ್ಗೆ ಗಮನ ಪರಿಶೀಲಿಸಿದ್ದಾರೆ. ಅಲ್ಲದೆ ಗ್ರಾಮಸ್ಥರು ಹಾಗೂ ಮಧು ಸ್ನೇಹಿತರಿಗೆ ನೀವು ಹುಡುಕಾಟ ಮಾಡಿ ಎಂದು ತಿಳಿಸಿದ್ದರಿಂದ ಗ್ರಾಮಸ್ಥರುಗಳು ಕೆರೆಯಲ್ಲಿ ಮೀನು ಹಿಡಿಯುವ ತೆಪ್ಪದ ಮೂಲಕ ಕೆರೆಯ ಮೂಲೆ ಮೂಲೆಯಲ್ಲಿ ಹುಡುಕಾಡಿದ್ದು, ಪಾಳು ಗುಂಡಿಗಳನ್ನು ಸಹ ಮೂರ್‍ನಾಲ್ಕು ಬಾರಿ ಹುಡುಕಾಡಿದ್ದು ಪ್ರಯೋಜನವಾಗಲಿಲ್ಲ ಎಂದು ನಿಟ್ಟುಸಿರು ಬಿಡುತ್ತಿದ್ದರಂತೆ. ಆದರೆ ಎರಡು ದಿನವಾದರೂ ಮಧು ಪತ್ತೆ ಆಗಲಿಲ್ಲ. ನಂತರ ಮಧು ಮೊಬೈಲ್ ನೆಟ್‌ವರ್ಕ್ ಸಿಗ್ನಲ್ ಆಧರಿಸಿ ಮಧು ಪತ್ತೆಗೆ ಮುಂದಾದ ಪೊಲೀಸರಿಗೆ ಮೊದಲು ಇದೇ ಪಾಳುಬಾವಿಯಲ್ಲಿ ನೋಡಿದ ವೇಳೆ ಮಧು ಶವ ಕಾಣಲಿಲ್ಲವಂತೆ. ಆದರೆ ಮೂರನೇ ದಿನ ಯಾರೋ ಈ ಭಾಗದಲ್ಲಿ ಓಡಾಡಿದ ವೇಳೆ ಮಧು ಶವ ಪಾಳುಬಾವಿಯಲ್ಲಿ ಕಂಡಿದ್ದು ತಲೆ ಕೆಳಗಾಗಿದ್ದ ದೇಹ ನೋಡಿ ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ಈ ನಿಟ್ಟಿನಲ್ಲಿ ಅಗ್ನಿಶಾಮಕ ದಳದ ಸಹಕಾರದಲ್ಲಿ ಶವವನ್ನು ಜೆಸಿಬಿ ಯಂತ್ರದ ಮೂಲಕ ಮೇಲಕ್ಕೆ ತೆಗೆಯಲಾಗಿದೆ.ಟ



ಘಟನೆ ನಡೆದ ಸ್ಥಳದಲ್ಲಿ ಜನಸ್ತೋಮ

ಮೃತ ಮಧು ಶವದ ಮರಣೋತ್ತರ ಪರೀಕ್ಷೆಗಾಗಿ ಬೆಂಗಳೂರಿನ ರಾಜರಾಜೇಶ್ವರಿ ಆಸ್ಪತ್ರೆಗೆ ರವಾನಿಸಿದ ಪೊಲೀಸರು, ಮರಣೋತ್ತರ ಪರೀಕ್ಷೆಯ ನಂತರ ಮೃತ ಮಧು ಸಾವಿನ ಬಗ್ಗೆ ಸತ್ಯಾಂಶ ಹೊರಬೀಳಲಿದೆ ಎಂದು ತಿಳಿದು ಬಂದಿದೆ.

ಇತ್ತ ಮಳೂರು ಪಟ್ಟಣ ಗ್ರಾಮದಲ್ಲಿ ವಾಟರ್ ಮೆನ್ ಆಗಿ ಕೆಲಸ ಮಾಡುತ್ತಿದ್ದ ಮೃತ ಮಧು ಸಾವಿನ ಸುದ್ದಿ ತಿಳಿಯುತ್ತಿದ್ದಂತೆ ಇಡೀ ಗ್ರಾಮದ ಜನತೆ ಎಲ್ಲರಲ್ಲೂ ಒಳ್ಳೆಯ ವಿಶ್ವಾಸದಲ್ಲಿ, ಜೊತೆಗೆ ನಮ್ಮ ಮನೆಯ ಮಗನಂತೆಯಿದ್ದ ಮಧು ಈ ರೀತಿ ಸಾವನ್ನಪ್ಪಿರುವುದು ಘೋರವಾದ ಸಂಗತಿ ಎಂದು ಕಂಬನಿ ಮಿಡಿಯುತ್ತಾ ಶೋಕ ಸಾಗರದಲ್ಲಿ ಮುಳುಗಿದ್ದು ಕಂಡು ಬರುತ್ತಿತ್ತು. ಮತ್ತೊಂದೆಡೆ ಪತ್ನಿ, ಸ್ನೇಹಿತರ ಆಕ್ರಂದನ ಮುಗಿಲು ಮುಟ್ಟುವಂತೆ ಇತ್ತು.

ಏನೇ ಆದರೂ ಭಾವ-ಬಾಮೈದುನರ ಸಾಗರ್ ಮತ್ತು ಮಧು ಇಬ್ಬರು ಹೊಸ ವರ್ಷ ಬರುವ ಮುಂಚೆಯೇ ಪಾರ್ಟಿ ಮಾಡಲು ಹೋಗಿ ಕೊಡ್ಲೂರು ರಸ್ತೆ ಮಧ್ಯೆ ಕುಡಿದ ಅಮಲಿನಲ್ಲಿ ಜಗಳವಾಡಿದ ನಂತರ ಮುಂದೆ ಏನಾಯಿತು ಎಂಬುದು ಪೊಲೀಸರ ತನಿಖೆಯಿಂದ ಸತ್ಯಾಸತ್ಯತೆ ಹೊರ ಬೀಳಬೇಕಿದೆ. ಇತ್ತ ಇವರಿಬ್ಬರಿಗೂ ಗಲಾಟೆ ನಡೆದ ಸ್ಥಳದಿಂದ ಸುಮಾರು 10 ಮೀಟರ್ ದೂರದ ಪಾಳುಬಾವಿಯಲ್ಲಿ ಮೃತ ಮಧು ಶವ ಪತ್ತೆಯಾಗಿರುವ ಕಾರಣ, ಅನುಮಾನದಲ್ಲಿ ಸಾಗರ್‌ನನ್ನು ಪೊಲೀಸರು ವಶಕ್ಕೆ ಪಡೆದು ವಿಚಾರಣೆ ನಡೆಸುತ್ತಿರುವುದು ಗ್ರಾಮಸ್ಥರಲ್ಲಿ ಸಾಗರ್‌ನ ಮೇಲೆ ಅನುಮಾನ ಎದ್ದು ಕಾಣುತ್ತಿದೆ. ಸಧ್ಯದಲ್ಲೇ ಪೊಲೀಸರು ತನಿಖೆ ಮಾಡಿ ಮೃತ ಮಧು ಕೊಲೆಗೆ ಕಾರಣರಾದ ಆರೋಪಿಗಳನ್ನು ಬಂಧಿಸಲಿದ್ದಾರೆ. ☯




ಈ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಘಟನೆ ನಡೆದಿರುವುದು



ಮೃತನ ಸ್ನೇಹಿತರು ಮಾಧ್ಯಮ ಜೊತೆ ಮಾತನಾಡುತ್ತಿರುವುದು


## ವರದಿಗಾರರು ಬೇಕಾಗಿದ್ದಾರೆ

''ಪೊಲೀಸ್ ನ್ಯೂಸ್'' ಪತ್ರಿಕೆಯ ಕೇಂದ್ರ ಕಛೇರಿ ಬೆಂಗಳೂರಿನಲ್ಲಿ ವರದಿಗಾರರಾಗಿ ಕೆಲಸ ಮಾಡಲು ಇಚ್ಛಿಸುವವರು ತಮ್ಮ ಭಾವಚಿತ್ರ ಸಮೇತ ತಮ್ಮ ಬಗ್ಗೆ ವಿವರಿಸಿ ಮತ್ತು ಒಂದು ಸುದ್ದಿಯನ್ನು ಬರೆದು ಕಳುಹಿಸಿ ಕೊಡಿ.

**ವಿವರ ಕಳುಹಿಸುವ ವಿಧಾನ :**

8884452699

policenewsreporter@gmail.com

ನಂ. 165, 8ನೇ ಮುಖ್ಯರಸ್ತೆ, ಬಿಇಎಂಎಲ್ ಬಡಾವಣೆ,
ಬಸವೇಶ್ವರನಗರ, ಬೆಂಗಳೂರು-560 079

080-23588510

# ಸರ್ಕಾರಿ ಭೂಮಿ ಖರೀದಿಯಲ್ಲಿ 30 ಲಕ್ಷ ದುರ್ಬಳಕೆಯಿಲ್ಲ
# ಸುಖದೇವ್ ಅಮಾನತ್ ನಿಯಮಬಾಹಿರ!


ವಸೂಲಿಗಾರ ಸುರೇಶ್ ನಾಯಕ

**ರಾಯಚೂರು**
ವೀರನಗೌಡ


ದೇವದುರ್ಗ ತಾಲುಕ ಜಾಲಹಳ್ಳಿ ಸಮೀಪದ ಊಟಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಸಂಬಂಧಿಸಿದಂತೆ ಭ್ರಷ್ಟಾಚಾರ ಆರೋಪದ ಮೇಲೆ ಬಿಇಓ ಸುಖದೇವ್ ಅವರನ್ನು ಅಮಾನತು ಮಾಡಲಾಗಿದ್ದು, ಅಲ್ಲಿ ನಡೆದಿದೆ ಎನ್ನಲಾದ 30 ಲಕ್ಷ ರೂಪಾಯಿ ಹಣದ ಚೆಕ್ ಜಮೀನು ಮಾಲೀಕರಿಗೆ ಮುಟ್ಟಿದರೂ ಸಹ ದುರುದ್ದೇಶದಿಂದ ಆರೋಪ ಮಾಡಿದ್ದು ಅದಕ್ಕೆ ಸಂಬಂಧಪಟ್ಟಂತೆ ಬಿಇಓ ಸುಖದೇವ್ ಪ್ರಾಮಾಣಿಕವಾಗಿ ರೈತರಿಗೆ ಹಣ ನೀಡಿದ್ದಾರೆ. ಜಮೀನು ಮಾಲಿಕ ಸಿದ್ದಪ್ಪಗೆ ಆರ್‌ಟಿಜಿಎಸ್ ಮೂಲಕ ರಾಜ್ಯಪಾಲರ ಹೆಸರಿಗೆ ನೋಂದಣಿ ಮಾಡಿದ್ದಾರೆ. ಹೀಗಿದ್ದರೂ ಅವರ ಮೇಲೆ ಆರೋಪ ಮಾಡಲಾಗಿದೆ. ಶೈಕ್ಷಣಿಕ ಹಿತದೃಷ್ಟಿಯಿಂದ ಕೈಗಾರಿಕಾ ಪ್ರದೇಶ ಇದ್ದರೂ ಸಹ ಅತ್ಯಂತ ಕಡಿಮೆ ಬೆಲೆಗೆ ಭೂಮಿಯನ್ನು ಮಾರಾಟ ಮಾಡಿಸಿದ್ದೇನೆ. ಯಾವುದೇ ಹಣ ದುರುಪಯೋಗ ಆಗಿಲ್ಲ, ನಿಯಮಗಳ ಅನುಸಾರವಾಗಿ ಕ್ರಮಕೈಗೊಂಡರೂ ಉದ್ದೇಶಪೂರ್ವಕವಾಗಿ, ಯಾವುದೋ ಒತ್ತಡಕ್ಕೆ ಮಣಿದು ಸರಿಯಾದ ಕಾರಣವಿಲ್ಲದೆ ಸುಖಸುಮ್ಮನೆ ಇದನ್ನೇ ಅಸ್ತ್ರವನ್ನಾಗಿ ಮಾಡಿಕೊಂಡು ದೂರು ನೀಡಿ ರಾಜಕೀಯ ಪ್ರಭಾವದಿಂದ ಬಿಇಓ ಅಮಾನತ್ತುಗೆ ಅವಕಾಶ ಮಾಡಿದ್ದಾರೆ. ದೂರು ನೀಡಿರುವ ವ್ಯಕ್ತಿ ದೂರಿನಲ್ಲಿ ದಿನಾಂಕವನ್ನು ಕೂಡ ನಮೋದಿಸಿಲ್ಲದಿರುವುದು ಕಂಡು ಬಂದಿದೆ. ಬಿಇಓ ಸುಖದೇವ್ ಹಣ ನೀಡಿಲ್ಲ ಎಂದು ರೈತ ಸಿದ್ದಪ್ಪ ಅಥವಾ ಗ್ರಾಮಸ್ಥರು ಯಾರಾದರೂ ಮೇಲಾಧಿಕಾರಿಗಳಿಗೆ ದೂರು ನೀಡಿಲ್ಲ, ಆದರೂ ಶಿಕ್ಷಣ ಇಲಾಖೆಯಲ್ಲಿ ವೈಯಕ್ತಿಕ ರಾಜಕೀಯ ಮಾಡುವುದು ಎಷ್ಟರ ಮಟ್ಟಿಗೆ ಸರಿ ಎನುವುದು ಸಾರ್ವಜನಿಕರ ಪ್ರಶ್ನೆಯಾಗಿದೆ. ಈ ವಿಷಯ ಬಿಟ್ಟು ತಾಲೂಕಿನಲ್ಲಿ ಶಿಕ್ಷಕರು ಇಲ್ಲ, ಕಟ್ಟಡ ಇಲ್ಲ ಇದು ಕೇಳಬಹುದು. ಆದರೆ ವೈಯಕ್ತಿಕ ಯಾವೋದೋ ದ್ವೇಷದಿಂದ ಈ ರೀತಿ ಮಾಡಿದ್ದಾರೆ ಎನ್ನುವ ಮಾತುಗಳು ಕೇಳಿಬರುತ್ತಿದೆ.


ಜಮೀನು ಮಾಲೀಕ ರೈತ ಸಿದ್ದಪ್ಪ

ಯಾರೋ ಎಲ್ಲೋ ಕುಳಿತುಕೊಂಡು ದೂರು ನೀಡಿದ ತಕ್ಷಣ ತನಿಖಾ ಅಧಿಕಾರಿಗಳು ಜಮೀನು ಮಾರಿದ ರೈತರ ಬಳಿ ಬಂದು ಶಾಲೆಯ ಮುಖ್ಯ ಗುರುಗಳ ಗ್ರಾಮಸ್ಥರನ್ನು ವಿಚಾರಣೆ ಮಾಡದೆ ಏಕಏಕಿ ರಾಜಕೀಯ ಒತ್ತಡದಿಂದ ತರಾತುರಿಯಲ್ಲಿ ತನಿಖೆ ಮಾಡಿ ಅಮಾನತು ಮಾಡಿದ್ದಾರೆ. ಜಮೀನು ಮಾಲೀಕರಿಗೆ ಹಣ ನೀಡಬೇಕು, ಸರ್ಕಾರ ಶಾಲೆ ಮಕ್ಕಳ ಉದ್ದೇಶಕ್ಕಾಗಿ ಮೌನವಾಗಿದ್ದರು.ಗ್ರಾಮಕ್ಕೆ ನ್ಯಾಯ ಕೊಡಿಸಲು ಹೋಗಿ ಅಧಿಕಾರಿಗೆ ಅನ್ಯಾಯವಾಗಿದೆ. ಸರ್ಕಾರ ಭೂಸ್ವಾಧೀನ ಮಾಡುವಾಗ ಗ್ರಾಮಿಣ ಮತ್ತು ನಗರ ಪ್ರದೇಶಗಳಲ್ಲಿ ಭೂ ಸ್ವಾಧಿನಕ್ಕೆ ಪ್ರತ್ಯೇಕ ದರ ನಿಗದಿ ಮಾಡಿ ಸರಕಾರ ಅದೇಶ ಮಾಡಿದೆ.


ಕಿಂಗ್‌ಪಿನ್ ಶಿವರಾಜ್ ಪೂಜಾರಿ

ಹಿಂದುಳಿದ ತಾಲ್ಲೂಕೆಂದು ಹೆಸರಾಗಿರುವ ದೇವದುರ್ಗ ತಾಲೂಕಿನಲ್ಲಿ ಸರಿಯಾಗಿ ಶಾಲೆಗಳ ದುರಸ್ತಿ ಇಲ್ಲ, ಶಾಲೆಗಳಲ್ಲಿ ಪಾಠ ಮಾಡಲು ಇರಬೇಕಾದ ಅನೇಕ ಶಿಕ್ಷಕರಿಲ್ಲ, ಹೀಗಿದ್ದರೂ ಕೂಡ ಸರಿಯಾಗಿ ತಾಲೂಕಿನಲ್ಲಿ ಶಿಕ್ಷಣ ವ್ಯವಸ್ಥೆ ನೋಡಿಕೊಂಡು ಹೋಗುತ್ತಿದ್ದ ಬಿಇಓ ಮೇಲೆ ಸುಖಾಸುಮ್ಮನೆ ಯಾವುದೋ ರಾಜಕೀಯ ದುರುದ್ದೇಶದಿಂದ ಅಮಾನತು ಮಾಡಿದ್ದು ಖಂಡನೀಯ. ಸೂಕ್ತ ತನಿಖೆ ಮಾಡದೇ ಏಕಏಕಿ ಸುಖದೇವ್ ಅವರನ್ನ ಅಮಾನತು ಮಾಡಿರುವುದನ್ನ ವಾಪಸ್ಸು ತೆಗೆದು ಮತ್ತೆ ಅದೇ ಜಾಗದಲ್ಲಿ ಕಾರ್ಯ ಮಾಡಲು ಅನುಕೂಲ ಮಾಡಿ ಕೊಡಬೇಕು. ನಮ್ಮ ದೇವದುರ್ಗ ತಾಲೂಕಿನಲ್ಲಿ ಹಲವು ಮೂಲಭೂತ ಸಮಸ್ಯೆಗಳಿವೆ. ಅದರ ಬಗ್ಗೆ ರಾಜಕೀಯ ಪ್ರತಿನಿಧಿಗಳು ಗಮನಹರಿಸಲಿ. ಅದನ್ನು ಬಿಟ್ಟು ಸರ್ಕಾರಿ ನೌಕರರ ಮೇಲೆ ದರ್ಪ ತೋರಿಸಿ ಸುಖಸುಮ್ಮನೆ ಈ ರೀತಿ ಅಮಾನತು ಮಾಡಿಸಿದರೆ ಮುಂದೆ ಏನಾದ್ರು ಆಗಬಾರದು ಆದರೆ ಅದಕ್ಕೆ ಹೊಣೆ ಯಾರು ಎಂದು ಸಾಮಾಜಿಕ ಕಾರ್ಯಕರ್ತರಾದ ಅಮರೇಶ ಪಾಟೀಲ್ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದರು.


ಡಿಡಿಪಿಐ ಕೆ.ಡಿ. ಬಡಿಗೇರ್


ವಿಚಾರಣಾಧಿಕಾರಿ ಸಹ ನಿರ್ದೇಶಕ ಮೋಹನ್


ಕರ್ನಾಟಕ ಪ್ರಾಂತ ರೈತ ಸಂಘಟನೆ ಜಿಲ್ಲಾ ಕಾರ್ಯದರ್ಶಿ ನರಸಣ್ಣ ನಾಯಕ್


ಜಿಲ್ಲಾಧಿಕಾರಿ ಚಂದ್ರಶೇಖರ್ ನಾಯಕ್


ಕಲ್ಬುರ್ಗಿ ಅಪರಾಯುಕ್ತರು ಡಾ. ಆಕಾಶ್

ಜಿಲ್ಲಾಧಿಕಾರಿಗಳು ದೇವದುರ್ಗ ತಾಲೂಕಿನ ಊಟಿ ಚಿನ್ನದ ಗಣಿ ಕೈಗಾರಿಕಾ ಪ್ರದೇಶವಿದ್ದರೂ ಸಹ ಪ್ರತಿ ಎಕೆರೆಗೆ ಕೇವಲ 12 ಲಕ್ಷ ಬೆಲೆ ನಿಗದಿ ಮಾಡಿದ್ದಾರೆ.ಹಟ್ಟಿ ಚಿನ್ನದ ಗಣಿ ಕಂಪನಿಯ ವ್ಯವಸ್ಥಾಪಕರು ಊಟಿ ಗ್ರಾಮದ ಶಾಲೆಗೆ ಎರಡು ಎಕರೆ ಭೂಮಿ ಖರಿದಿಗಾಗಿ 30 ಲಕ್ಷ ಹಣ ಜಿಲ್ಲಾಧಿಕಾರಿಗಳ ಖಾತೆಗೆ ಚಕ್ ಮೂಲಕ ಜಮೆ ಮಾಡಿದ್ದಾರೆ. ದರ ನಿಗದಿಗಾಗಿ ಜಿಲ್ಲಾಧಿಕಾರಿಗಳು ದಿನಾಂಕ 04/09/2023 ರಂದು ಸಭೆ ಕರೆದು ಸಭೆಯಲ್ಲಿ ಊಟಿ ಕೈಗಾರಿಕಾ ಪ್ರದೇಶವಿದ್ದರೂ ಸಹ ಪ್ರತಿ ಎಕೆರೆಗೆ 12 ಲಕ್ಷದಂತೆ ದರ ನಿಗದಿ ಮಾಡಿದ್ದರಿಂದ ಸಭೆಯಲ್ಲಿ ಅಧಿಕಾರಿಗಳು ಮತ್ತು ರೈತರ ಮಧ್ಯೆ ವಿವಾದ ಸೃಷ್ಠಿಯಾಗಿದೆ. ಭೂ ಸ್ವಾಧೀನ ಪ್ರಕ್ರಿಯೆಯಂತೆ ಭೂಮಿ ಖರೀದಿಸಬೇಕಾದ ಜಿಲ್ಲಾಧಿಕಾರಿಗಳು ಹಟ್ಟಿ ಕಂಪನಿ ನೀಡಿದ 30 ಲಕ್ಷ ಹಣ ವಾಪಸ್ಸು ಕಂಪನಿ ಖಾತೆಗೆ ಜಮೆ ಮಾಡಿದ್ದರು. ಹೀಗಿದ್ದರೂ ಸಹ ಅವರನ್ನು ಅಮಾನತು ಮಾಡಿದ್ದೂ ಅನೇಕರು ಇದನ್ನು ಖಂಡಿಸುತ್ತಿದ್ದಾರೆ. ಈ ರೀತಿ ಯಾವುದೋ ದ್ವೇಷದಿಂದ ಅಮಾನತು ಮಾಡಿದ್ರೆ ಯಾರು ನೆಮ್ಮದಿಯಾಗಿ ಕೆಲಸ ಮಾಡುತ್ತಾರೆ ಎಂದು ಸಾರ್ವಜನಿಕರು ಶಿಕ್ಷಣ ಇಲಾಖೆಯ ಮೇಲೆ ಹಿಡಿಶಾಪ ಹಾಕುತ್ತಿದ್ದಾರೆ.



ಸರ್ಕಾರಿ ಪ್ರಾಥಮಿಕ ಶಾಲೆ ಊಟಿ


ಸುರೇಶ್ ನಾಯಕ್ ಹಾಗೂ ದೇವದುರ್ಗ ಬಿಆರ್‌ಸಿ ಅಧಿಕಾರಿ ಶಿವರಾಜ್ ಪೂಜಾರಿ ಶಾಮೀಲಾಗಿ ಬಿಇಓ ಸುಖದೇವ್‌ರವರ ವಿರುದ್ಧ ಷಡ್ಯಂತ್ರ ರೂಪಿಸಿರುವುದು



ರೈತ ಸಿದ್ದಪ್ಪ, ಬಿಇಓ ಸುಖದೇವ್, ಮುಖ್ಯ ಗುರು ದೇವರೆಡ್ಡಿ ದೇವದರ್ಗ ನೊಂದಣಿ ಕಚೇರಿಯಲ್ಲಿ ರಾಜ್ಯಪಾಲರ ಹೆಸರಿಗೆ ಜಮೀನು ನೋಂದಣಿ ಮಾಡಿಸಿರುವುದು


## ನಿಮ್ಮ ಸುತ್ತಮುತ್ತಲಿನ ಸುದ್ದಿ ಹಾಗೂ ಅನ್ಯಾಯ-ಭ್ರಷ್ಟಾಚಾರಗಳನ್ನು ತಿಳಿಸಿ!

ಕರ್ನಾಟಕ ರಾಜ್ಯದ ಮಹಾಜನತೆಗೆ ಇದೋ ಒಂದು ಸುವರ್ಣಾವಕಾಶ. ನಿಮ್ಮ ಸುತ್ತಮುತ್ತ ನಡೆಯುವ ಅನ್ಯಾಯ, ಅಕ್ರಮ, ಅನಾಚಾರ, ಭ್ರಷ್ಟಾಚಾರಗಳನ್ನು ಸಂಕಟ ಪಡುತ್ತಿದ್ದೀರಾ? ಹಾಗಾದರೆ; ಈ ಕೂಡಲೇ ಸವಿವರ ಸಮೇತ ಅವುಗಳನ್ನು ನಮ್ಮ ಕಛೇರಿಗೆ ಕಳುಹಿಸಿ! ನಿಮ್ಮ ಹೆಸರು, ವಿಳಾಸ, ಮೊಬೈಲ್ ನಂಬರ್ ಇತ್ಯಾದಿ ವಿವರಗಳನ್ನು ನಾವು ಅತ್ಯಂತ ಗೌಪ್ಯವಾಗಿಡುತ್ತೇವೆ. ಯಾವುದೇ ಕಾರಣಕ್ಕೂ ಅದನ್ನು ಬಹಿರಂಗಪಡಿಸುವುದಿಲ್ಲ. 'ಪೊಲೀಸ್ ನ್ಯೂಸ್' ವಾರಪತ್ರಿಕೆಯಲ್ಲಿ ಸುದ್ದಿ ಪ್ರಕಟಿಸುವ ಮೂಲಕ ಸಂಬಂಧಪಟ್ಟ ಇಲಾಖೆಗೆ ತಿಳಿಸಿ ಸೂಕ್ತ ಕಾನೂನು ಕ್ರಮ ಜರುಗಿಸಲು ಸೂಚಿಸುವ ಕೆಲಸ ಮಾಡುವ ಹೊಣೆ ನಮ್ಮದು.

ವಿಳಾಸ : ಪೊಲೀಸ್ ನ್ಯೂಸ್, ವಾರಪತ್ರಿಕೆ, ನಂ. 165, 8ನೇ ಮುಖ್ಯರಸ್ತೆ, ಬಿಇಎಂಎಲ್ ಬಡಾವಣೆ, ಬಸವೇಶ್ವರನಗರ, ಬೆಂಗಳೂರು-560 079. ಮೊ : 9513892666

# ನಾಲ್ವರ ಬಾಲಕರ ಕಿಡ್ನಾಪ್, ನಕಲಿ ಜ್ಯೋತಿಷಿ ಬಂಧನ!

6 ☞

ವ್ಯಕ್ತಿಯೊಬ್ಬ ಮಕ್ಕಳನ್ನು ನೋಡುತ್ತಾ ನಗು, ನಗುತ್ತಾ ಮಾತನಾಡುತ್ತಾ ಪರಿಚಯ ಮಾಡಿಕೊಳ್ಳುತ್ತಾನೆ. ನಂತರ ಚಿತ್ರದ ಮಧ್ಯಂತರದಲ್ಲಿ ಚಿತ್ರಮಂದಿರದ ಕ್ಯಾಂಟಿನ್



ಬಂಗಾರಪೇಟೆ ಪೊಲೀಸ್ ಠಾಣೆ

ಬಳಿ ಬಾಲಕರ ಪೂರ್ವಪರವನ್ನು ವಿಚಾರಿಸುತ್ತಾ ಅವರಿಗೆ ತಿಂಡಿಯನ್ನು ಕೊಡಿಸಿದ ವ್ಯಕ್ತಿ ನಾನೊಬ್ಬ ಜ್ಯೋತಿಷಿ ಇಲ್ಲಿಯೇ ಪಕ್ಕದಲ್ಲಿನ ಲಾಡ್ಜ್‌ವೊಂದರಲ್ಲಿ ರೂಂ ಮಾಡಿಕೊಂಡು ನಮ್ಮ ಬಳಿ ಬರುವವರಿಗೆ ಭವಿಷ್ಯ ಹೇಳಿಕೊಂಡು ಇದ್ದೇನೆ. ನಿಮ್ಮಗಳನ್ನು ನೋಡಿದರೆ, ನೀವುಗಳು ಮನೆ ಬಿಟ್ಟು ಬಂದಿರುವಂತೆ ಕಾಣುತ್ತಿದೆ. ಇದಕ್ಕೆ ಮುಖ್ಯ ಕಾರಣ ನಿಮ್ಮ ಗ್ರಹಗತಿ, ಶನಿ ಮೂರನೇ ಮನೆಯಲ್ಲಿರುವುದರಿಂದ ಈ ರೀತಿ ನಡೆಯುತ್ತಿದೆ. ಗುರು ನಿಮ್ಮ ಮನೆಗೆ ಬರಬೇಕಾದರೆ ಪೂಜೆ ಮಾಡಬೇಕು. ಈಗ ಸಿನಿಮಾ ನೋಡೋಣ. ನಂತರ ಈ ಬಗ್ಗೆ ಮಾತನಾಡೋಣವೆಂದು ಹೇಳಿ ಸಿನಿಮಾ ನೋಡಿಕೊಂಡು ಹೊರ ಬಂದ ನಂತರ ಬಾಲಕರನ್ನು ಹೋಟೆಲ್‌ಗೆ ಕರೆದುಕೊಂಡು ಹೋಗಿ ತಿಂಡಿ ಕೊಡಿಸಿ ನನ್ನ ಹೆಸರು ವಿಷ್ಣುರಾವ್ ನಾನು ಉತ್ತರ ಕರ್ನಾಟಕದ ರಾಯಚೂರಿನವನು. ಮಾಟ ಮಂತ್ರವನ್ನು ಕಲಿತಿದ್ದು, ಕಷ್ಟವೆಂದು ಬಂದವರಿಗೆ ಒಳ್ಳೆಯದು ಮಾಡುತ್ತಾ ಇದ್ದು, ಒಂದು ವಾರದಿಂದ ಬೆಂಗಳೂರಿನಲ್ಲಿ ಕ್ಯಾಂಪ್ ಹಾಕಿದ್ದೇನೆ. ಈಗ ನನ್ನ ಮಾತನ್ನು ಕೇಳಿದರೆ ನಿಮ್ಮ ಹಾಗೂ ನಿಮ್ಮ ಕುಟುಂಬದವರಿಗೆ ಒಳ್ಳೆಯದು ಮಾಡುತ್ತೇನೆ. ಅದಕ್ಕೆ ಸ್ವಲ್ಪ ಹಣ ಖರ್ಚಾಗುತ್ತದೆಂದು ಮಕ್ಕಳಿಗೆ ಮೋಡಿ ಮಾಡಿ ಲಾಡ್ಜ್‌ಗೆ ಕರೆದುಕೊಂಡು ಹೋಗಿ ನಾಲ್ವರನ್ನು ಕುರಿಸಿ ಅವರ ಕೈಗೆ ನಿಂಬೆಹಣ್ಣು ಕೊಟ್ಟು, ಹಣೆಗೆ ಕುಂಕುಮವನ್ನು ಇಟ್ಟು ಬಾಕ್ಸ್‌ನಲ್ಲಿದ್ದ ಮೂಳೆ ಮತ್ತು ವಿವಿಧ ರೀತಿಯ ಕೊಂಬೆಗಳನ್ನು ತೋರಿಸುತ್ತಾ ನಿಮ್ಮ ಬಳಿ ಇರುವ ಹಣವನ್ನೆಲ್ಲ ನನ್ನ ಮುಂದೆ ಇಟ್ಟು ಕಣ್ಣು ಮುಚ್ಚಿ, ಕೈ ಮುಗಿದು ದೇವರನ್ನು ಪ್ರಾರ್ಥಿಸುವಂತೆ ಹೇಳಿ ಬಾಲಕರ ಬಳಿ ಇದ್ದ ಹಣವನ್ನು ಲಪಟಾಯಿಸಿದ ನಕಲಿ ಜ್ಯೋತಿ ಈಗ ನಾನು ನಿಮ್ಮನ್ನು ಕಿಡ್ನಾಪ್ ಮಾಡಿ ರೂಂನಲ್ಲಿ ಕೂಡಿ ಹಾಕಿದ್ದೇನೆ. ನೀವುಗಳು ನಿಮ್ಮ ಮನೆಗೆ ಹೋಗಿ ಪೋಷಕರನ್ನು ಸೇರಬೇಕಾದರೆ ಹೆಚ್ಚಿನ ಹಣವನ್ನು ತಂದುಕೊಟ್ಟರೆ ನಿಮ್ಮಗಳನ್ನು ಬಿಟ್ಟು ಬಿಡುವುದಾಗಿ ಹೇಳಿದನು. ಜ್ಯೋತಿಷಿ ಮಾತನ್ನು ಕೇಳಿದ ಬಾಲಕರಿಗೆ ಭಯವಾಗಿ ಕೂಡಲೇ ಮನೆಯವರಿಗೆ ಫೋನ್ ಮಾಡಿ ವಿಷಯ ತಿಳಿಸಿದರು.

**ಆರೋಪಿ ನಕಲಿ ಜ್ಯೋತಿಷಿ ಬಂಧನ**

ಶಾಲೆಗೆ ಹೋಗಿ ಬರುವುದಾಗಿ ಹೇಳಿ ಹೋದ ಬಾಲಕರು ಸಂಜೆಯಾದರೂ ಮನೆಗೆ ಬರದೇ ಇದ್ದಾಗ



ನಾಲ್ಕು ಮಕ್ಕಳ ತಾಯಂದಿರು

ಎರಡು ಬೀದಿಯಲ್ಲಿರುವ ಪೋಷಕರು, ಮಕ್ಕಳು ಕಾಣೆಯಾಗಿರುವ ಬಗ್ಗೆ ಬಂಗಾರಪೇಟೆ ಪೊಲೀಸ್ ಠಾಣೆಗೆ ದೂರು ನೀಡುತ್ತಾರೆ. ಮಕ್ಕಳ ಹುಡುಕಾಟ ನಡೆಸುತ್ತಿರುವಾಗ ರಾತ್ರಿ ಪೊಲೀಸ್ ಠಾಣೆಗೆ ಹಾಜರಾದ ಪೋಷಕರು ನಮ್ಮ ಮಕ್ಕಳನ್ನು ಯಾರೋ ವ್ಯಕ್ತಿಯೊಬ್ಬ ಕಿಡ್ನಾಪ್ ಮಾಡಿ ಹಣಕ್ಕಾಗಿ ಬೇಡಿಕೆ ಇಟ್ಟಿದ್ದಾನಂತೆ. ಈ ವಿಚಾರವನ್ನು ಮಕ್ಕಳು ಫೋನ್ ಮಾಡಿ



ಮುಬಾರಕ್, ಹೇಮಂತ್‌ಗಾಗಿ ಕಾದಿರುವ ಪೋಷಕರು



ಲಿಖಿತ್, ಶರತ್‌ಗಾಗಿ ಕಾದಿರುವ ಪೋಷಕರು

ತಿಳಿಸಿದ್ದಾರೆಂದು ತಿಳಿಸಿದರು.

ಅದರಂತೆ ಅವರಿಗೆ ದೂರನ್ನು ಪಡೆದ ಪಿಐ ದಯಾನಂದ್‌ರವರು ಪ್ರಕರಣದ ವಿಚಾರವನ್ನು ಎಸ್ಪಿ ಕೆ.ಎಂ. ಶಾಂತರಾಜು ಮತ್ತು ಡಿವೈಎಸ್ಪಿ ಪಾಂಡುರಂಗರವರಿಗೆ ತಿಳಿಸಿದ್ದು, ಅವರು ಮುಂದಿನ ಕ್ರಮಕ್ಕೆ ಆದೇಶವನ್ನು ನೀಡಿದರು. ಪಿಐ ದಯಾನಂದ್ ರವರ ನೇತೃತ್ವದಲ್ಲಿ ಕ್ರೈಂ ತಂಡವನ್ನು ರಚಿಸಿದ್ದು ಮೊದಲಿಗೆ ಮಕ್ಕಳ ಬಳಿ ಇದ್ದ ಮೊಬೈಲ್ ಫೋನ್ ಮತ್ತು ಕಿಡ್ನಾಪರ್ ಜ್ಯೋತಿಷಿಯ ಮೊಬೈಲ್‌ನ ಟವರ್ ಲೊಕೇಷನ್ ಆಧಾರದ ಮೇಲೆ ಫೋನ್ ಟ್ರ್ಯಾಕ್ ಮಾಡಿ ಜ್ಯೋತಿಷಿಗೆ ನಾವು ಪೋಷಕರು ಹಣದೊಂದಿಗೆ ಬರುತ್ತಿದ್ದೇವೆ. ಮಕ್ಕಳಿಗೆ ಏನು ಮಾಡಬೇಡಿ ಎಂದು ಹೇಳಿದರು. ಅದಕ್ಕೆ ಜ್ಯೋತಿಷಿ ನನ್ನ ವಿಚಾರವನ್ನು ಪೊಲೀಸರು ಸೇರಿದಂತೆ ಯಾರಿಗೂ ತಿಳಿಸಬಾರದು. ಏನಾದರೂ ವ್ಯತ್ಯಾಸವಾದರೆ ಮಕ್ಕಳನ್ನು ಕೊಲೆ ಮಾಡುವುದಾಗಿ ಬೆದರಿಕೆ ಹಾಕಿದನು. ಆಗ ಹುಷಾರಾದರೆ ಪೊಲೀಸರು ಮಾರುವೇಷದಲ್ಲಿ ಪೋಷಕರಂತೆ ಲಾಡ್ಜ್‌ಗೆ ಹೋಗಿ ನಾವು ನಿನ್ನ ಬಳಿಗೆ ಬರುವುದು ಬೇಡವೆಂದರೆ ಹಣವನ್ನು ಫೋನ್‌ಪೇ ಮಾಡುವುದಾಗಿ ಹೇಳಿ ಸಮಾಧಾನ ಪಡಿಸಿದರು. ಜ್ಯೋತಿಷಿಯು ಇರುವ ಲಾಡ್ಜನ್ನು ಪತ್ತೆ ಮಾಡಿದ ಪೊಲೀಸರು ಬೆಂಗಳೂರಿನ ಉಪ್ಪಾರಪೇಟೆ ಪೊಲೀಸ್ ಠಾಣೆಗೆ ಹೋಗಿ ಅವರ ಸಹಾಯದೊಂದಿಗೆ ಲಾಡ್ಜ್‌ಗೆ ಹೋಗಿ ಜ್ಯೋತಿಷಿ ವಿಷ್ಣುರಾವ್‌ನನ್ನು ವಶಕ್ಕೆ ಪಡೆದ ನಂತರ ನಾಲ್ವರು ಬಾಲಕರನ್ನು ಸುರಕ್ಷಿತವಾಗಿ ಕರೆದುಕೊಂಡು ಬಂದು ಕೆಜಿಎಫ್‌ನ ಬಾಲಮಂದಿರಕ್ಕೆ ಸೇರಿಸಿದ್ದು, ನಂತರ ಕಾನೂನು ಪ್ರಕಾರ ವಿಚಾರಣೆ ನಡೆದ ಮೇಲೆ ಬಾಲಕರನ್ನು ಪೋಷಕರಿಗೆ ಒಪ್ಪಿಸಿದರು. ಆರೋಪಿ ವಿಷ್ಣುರಾವ್‌ನನ್ನು ಉಪ್ಪಾರಪೇಟೆ ಪೊಲೀಸ್ ಠಾಣೆಯಿಂದ ಬಂಗಾರಪೇಟೆ ಪೊಲೀಸ್ ಠಾಣೆಗೆ ಕರೆದುಕೊಂಡು ಬಂದು ವಿಚಾರಣೆ ನಂತರ ನಕಲಿ ಜ್ಯೋತಿಷಿಯನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ. ☯

2 ☞

ಬೇಕು- ಹೀಗೆ ಕಾನೂನಿನ ಹತ್ತಾರು ಕಿರಿಕಿರಿಗಳು. ಅಲ್ಲದೆ ವೇಶ್ಯಾಗೃಹಕ್ಕೆ ಅನುಮತಿ ಪಡೆಯಬೇಕೆಂದರೆ ಅದಕ್ಕೆ ಬೃಹತ್ ಮೊತ್ತ ತೆರಬೇಕು. ಇದೆಲ್ಲದರ ಹೊರೆ ಬೀಳುವುದು ಗ್ರಾಹಕನ ಮೇಲೆಯೇ. ಈ ಕಾರಣಕ್ಕೆ ಕಾನೂನುಬದ್ಧ ವೇಶ್ಯಾವಾಟಿಕೆಯು ಯಾವತ್ತೂ ತುಟ್ಟಿ ಮತ್ತು ರಗಳೆಯ ಬಾಬತ್ತು. ಇಂಥ ವೇಶ್ಯಾಗೃಹಗಳು ಇವೆಲ್ಲವನ್ನೂ ನೋಡಿಕೊಳ್ಳುವುದರಿಂದ, ವೇಶ್ಯೆಯು ತನ್ನ ಆದಾಯದ ಅರ್ಧದಷ್ಟು ಮೊತ್ತವನ್ನು ಅವಕ್ಕೆ ಕೊಡಬೇಕು. ಇದು ಆಕೆಗೆ ಸಮ್ಮತವಾಗುವ ಮಾತಲ್ಲ, ಹೀಗಾಗಿ, ಕಾನೂನುಬದ್ಧವಾಗಿಸಿದರೂ, ಅದರ ಪಕ್ಕದಲ್ಲೇ, ಅದಕ್ಕಿಂತ ಜೋರಾಗಿಯೇ ಕಾನೂನುಬಾಹಿರ ವೇಶ್ಯಾವಾಟಿಕೆ ನಡೆಯುತ್ತದೆ. ಕಾನೂನಾತ್ಮಕಗೊಳಿಸಿದ ಎಲ್ಲ ದೇಶಗಳ ಕಥೆಯೂ ಹೆಚ್ಚು-ಕಡಿಮೆ ಇದೇ ಆಗಿದೆ!

ಈ ಕಾರಣಕ್ಕೆ ಸಾಮಾನ್ಯವಾಗಿ ಮೊದಲು ಕಾನೂನು ಬದ್ಧ ವೇಶ್ಯಾವಾಟಿಕೆಯಲ್ಲಿ ಕೆಲಸ ಶುರು ಮಾಡುವಾಕೆ ಕ್ರಮೇಣ ಅದರಿಂದ ಹೊರಬಂದು, ತನ್ನ ಗ್ರಾಹಕರನ್ನು ನೇರವಾಗಿ ಸಂಧಿಸಲು ಶುರು ಮಾಡುತ್ತಾಳೆ. ಇಲ್ಲೊಂದು ಅಂಶವನ್ನು ಗಮನಿಸಬೇಕು- ಕಾನೂನುಬದ್ಧ ವೇಶ್ಯಾವಾಟಿಕೆಯೇ ಬೇರೆ, 'ವೇಶ್ಯಾವಾಟಿಕೆ ಕಾನೂನುಬಾಹಿರವಲ್ಲ' ಎನ್ನುವ ಕಾನೂನು ವ್ಯವಸ್ಥೆಯೇ ಬೇರೆ. ಎರಡನೆಯ ಕಾನೂನು ವ್ಯವಸ್ಥೆಯಲ್ಲಿ ವೇಶ್ಯಾವಾಟಿಕೆ ನಡೆಸುವುದು ಕಾನೂನುಬಾಹಿರವಲ್ಲ, ಆದರೆ ಸರಕಾರ ಈ ವ್ಯವಸ್ಥೆಯ ತಂಟೆಗೆ ಹೋಗುವುದಿಲ್ಲ- ಅದರಷ್ಟಕ್ಕೆ ಅದನ್ನು ಬಿಟ್ಟು ಬಿಡುವ ಸ್ಥಿತಿ. ಇದು ಇನ್ನೊಂದು ಕಾರಣಕ್ಕೆ ಡೇಂಜರ್. ಇದರಿಂದಾಗಿ ವೇಶ್ಯಾವಾಟಿಕೆಯ ಸುತ್ತ ಹತ್ತಾರು ಕಾನೂನು ಬಾಹಿರ ಚಟುವಟಿಕೆಗಳಿಗೆ ಅವಕಾಶ ಮಾಡಿಕೊಟ್ಟಂತಾಗುತ್ತದೆ. ಈ 'ನೋಡಿಯೂ ಸುಮ್ಮನಿರುವ' ಪದ್ಧತಿ ಇರುವಲ್ಲಿ ಅಲ್ಲಿನ ಸರಕಾರವು ಕೆಲವೊಂದು ಪ್ರದೇಶದಲ್ಲಿ ವೇಶ್ಯಾವಾಟಿಕೆಗೆ ಅನುವು ಮಾಡಿಕೊಟ್ಟು, ಆ ಗಡಿದಾಟಿ ವ್ಯವಹಾರವಾದರೆ ಮಾತ್ರವೇ ಶಿಕ್ಷಿಸಲು ಮುಂದಾಗುತ್ತದೆ. ಮುಂಬೈನ ಕಾಮಾಟಿಪುರ ಪ್ರದೇಶದ ಬಗ್ಗೆ ನೀವು ಕೇಳಿರಬಹುದು. ಹಿಂದೊಮ್ಮೆ ಮುಂಬೈನ ವೇಶ್ಯಾವಾಟಿಕೆ ಇಲ್ಲಿಯೇ ಕೇಂದ್ರಿತವಾಗಿತ್ತು. ಈಗಿನ ಅಸ್ಪಷ್ಟ ಕಾನೂನಿನಿಂದಾಗಿ ಅದೀಗ ಉಳಿದ ಪ್ರದೇಶಗಳಿಗೂ ಹಬ್ಬಿದೆ. ಕೊಲ್ಕತ್ತಾದ ಸೋನಾಗಾಚಿ, ಪುಣೆಯ ಬುಧವಾರಪೇಟೆ, ಅಲಹಾಬಾದಿನ ಮೀರಗಂಜ್, ದೆಹಲಿಯ ಜಿಬಿ ರಸ್ತೆ, ನಾಗಪುರದ ಇತ್ವಾರಿ, ಕಾಶಿಯ ಶಿವದಾಸಪುರ ಹೀಗೆ ಉತ್ತರದ ಬಹುತೇಕ ನಗರಗಳಲ್ಲಿ ವೇಶ್ಯಾವಾಟಿಕೆ ಖುಲ್ಲಂಖುಲ್ಲಾ! ಅಲ್ಲೆಲ್ಲಾ ಸರಕಾರಗಳದ್ದು ಒತ್ತಾಯದ, ಆದರೆ ಅನಿವಾರ್ಯದ ಕುರುಡು. ಇಲ್ಲಿಯವರೆಗೆ ಆಳಿದ ಎಲ್ಲ ಸರಕಾರಗಳಿಗೂ ಈ ವೇಶ್ಯಾವಾಟಿಕೆ ಬಗ್ಗೆ 'ಇದಮಿತ್ಥಮ್' ಎಂಬ ಗಟ್ಟಿ ನಿಲುವನ್ನು ತೆಗೆದುಕೊಳ್ಳಲಾಗಿಲ್ಲ. ಅದು ಅಂದುಕೊಂಡಷ್ಟು ಸುಲಭದ್ದಲ್ಲ. ಈ ಕಾರಣಕ್ಕೇ, ಕಾಲಕಾಲಕ್ಕೆ ಗದ್ದುಗೆಯೇರುವ ಸರಕಾರಗಳು/ಪಾರ್ಟಿಗಳು ಇದರ ತಂಟೆಗೇ ಹೋಗುವುದಿಲ್ಲ. ಏಕೆಂದರೆ, ಇದೊಂದು ಸಮಸ್ಯೆಯೇ ಅಥವಾ ಅಲ್ಲವೇ? ಇದು ಸಮಾಜಕ್ಕೆ ಬೇಕೇ, ಬೇಡವೇ? ಎಂಬಿತ್ಯಾದಿ ಪ್ರಶ್ನೆಗಳು ಅಥವಾ ಗೊಂದಲಗಳೇ ಜಾಸ್ತಿ. ನಮ್ಮ ಸಮಾಜಕ್ಕಾಗಲೀ, ವೋಟು ಮಾಡುವವರಿಗಾಗಲೀ ಇದೊಂದು ಚರ್ಚೆ ಮಾಡುವ ವಿಷಯವೇ ಹೊರತು, ಅದಕ್ಕಿಂತ ಮಿಗಿಲಾದ ಸ್ಪಷ್ಟತೆಯಿಲ್ಲ. ಆ ಕಾರಣಕ್ಕೆ ಬಹುತೇಕ ಸರಕಾರಗಳಿಗೆ ವೇಶ್ಯಾವಾಟಿಕೆಯು ಒಂದು 'ಅಸ್ಪೃಶ್ಯ ವಿಭಾಗ'. ''ಅದು ಹೇಗಿದೆಯೋ ಹಾಗೆಯೇ ಇದ್ದುಬಿಡಲಿ ಬಿಡಿ'' ಎಂಬ ನಿಲುವು!

ವೇಶ್ಯಾವಾಟಿಕೆಗೆ ಕಾನೂನಿನಲ್ಲಿ ಅವಕಾಶ ಮಾಡಿಕೊಡುವುದು ಎಷ್ಟು ಕಷ್ಟವೋ, ಅದನ್ನು ತಡೆದು ನಿಲ್ಲಿಸುವುದೂ ಅಷ್ಟೇ ಕಷ್ಟ. ವೇಶ್ಯಾವಾಟಿಕೆಯನ್ನು ನಿಲ್ಲಿಸಲು ಹೊರಟ ದೇಶಗಳೂ ಸೋತಿವೆ, ಮುಕ್ತಗೊಳಿಸಿ ಒಪ್ಪಿಕೊಂಡ ದೇಶಗಳೂ ನಂತರದಲ್ಲಿ ಇದಕ್ಕೊಂದು ರೂಪುರೇಷೆ ಕೊಡುವಲ್ಲಿಯೂ ಎಡವಿವೆ. ವೇಶ್ಯಾವಾಟಿಕೆಯನ್ನು ನಿಲ್ಲಿಸಲು ಸ್ವೀಡನ್ ಹೊಸಮಾದರಿ ಕಾನೂನೊಂದನ್ನು 1999ರಲ್ಲಿ ಜಾರಿಮಾಡಿತು. ಇದರ ಪ್ರಕಾರ ವೇಶ್ಯೆಯರಿಗೆ ಶಿಕ್ಷೆಯಿಲ್ಲ, ಅಲ್ಲಿ ಗ್ರಾಹಕ ಮಾತ್ರ ಅಪರಾಧಿ. ಮುಂದೆ ಹಲವು ದೇಶಗಳು ಇಂಥದೇ ಕಾನೂನನ್ನು ಜಾರಿಮಾಡಿ ನಿಯಂತ್ರಿಸುವಲ್ಲಿ ಕೊಂಚ ಯಶಸ್ಸನ್ನು ಕಂಡಿವೆ. ಡೆನ್ಮಾರ್ಕ್‌ನಲ್ಲಿ ವೇಶ್ಯಾವಾಟಿಕೆ, ಸೆಕ್ಸ್-ದೇಹವನ್ನು ಮಾರುವುದು ಮತ್ತು ಖರೀದಿಸುವುದು- ಎರಡೂ ಅಪರಾಧವಲ್ಲ; ಆದರೆ ವ್ಯವಸ್ಥಿತ ಸಂಸ್ಥೆಯಂತೆ ಇದರ ದಂಧೆ ನಡೆಸುವುದು ಅಪರಾಧ. ಅಲ್ಲಿ ವೇಶ್ಯೆಯರಿಗೆ ಅವಕಾಶವಿದೆಯೇ ವಿನಾ, ವೇಶ್ಯಾಗೃಹಗಳಿಗಲ್ಲ. ಹೀಗೆ ಜಗದ ವಿವಿಧ ದೇಶಗಳಲ್ಲಿ ಹತ್ತಾರು ರೀತಿಯ ಕಾನೂನುಗಳಿವೆ. ದಕ್ಷಿಣ ಅಮೆರಿಕದ ದೇಶಗಳಲ್ಲಿ ಈ ವೇಶ್ಯಾವಾಟಿಕೆ ಒಂದು ನಿರಂಕುಶ ಸಾಮ್ರಾಜ್ಯ; ಯಾವುದೇ ಕಾನೂನುಗಳು ಅದನ್ನು ಸಂಪೂರ್ಣ ನಿಲ್ಲಿಸುವಲ್ಲಿ ಅಥವಾ ಅದರ ಸುತ್ತ ನಡೆವ ಅನ್ಯ ಅಪರಾಧಗಳನ್ನು ನಿಗ್ರಹಿಸುವಲ್ಲಿ ಯಶಸ್ವಿಯಾಗಿಲ್ಲ. ಹಾಗಾದರೆ, ಕೊನೆಯಲ್ಲಿ ಮೂಡುವುದು ಮತ್ತದೇ ಪ್ರಶ್ನೆಗಳು- ಅತ್ಯಾಚಾರದ ಸಮಸ್ಯೆಗೆ ವೇಶ್ಯಾವಾಟಿಕೆಯು ಪರಿಹಾರವೇ? ವೇಶ್ಯಾವಾಟಿಕೆಯನ್ನು ಕಾನೂನುಬದ್ಧಗೊಳಿಸಿದರೆ, ಸಮಾಜ ಒಪ್ಪಿಕೊಂಡರೆ ಇಂಥ ಅತ್ಯಾಚಾರಗಳು ಕಮ್ಮಿಯಾಗುತ್ತವೆಯೇ? ಇವಕ್ಕೆ ಅಂಕಿ-ಸಂಖ್ಯೆಗಳು ಕೂಡ ಅಷ್ಟೇ ಗೊಂದಲದ ಉತ್ತರ ನೀಡುತ್ತವೆ. ಹಾಗಾಗಿ 'ಸಮಸ್ಯೆಗೆ ಇದೇ ಪರಿಹಾರ' ಅಂತ ಒಪ್ಪಿಕೊಳ್ಳಲು ಸಾಧ್ಯವಾಗದು. ಒಂದೊಮ್ಮೆ ಅದು ಸಾಬೀತಾದರೂ, ಅದನ್ನು 'ಲಾಗು' ಮಾಡುವ ಮೊದಲು, ಅದರ ಸುತ್ತ ನಡೆವ ಅಪರಾಧಗಳನ್ನೂ ಪರಿಗಣಿಸಬೇಕಾಗುತ್ತದೆ. ಈ ಎಲ್ಲ ಕಾರಣ ಮತ್ತು ಕ್ಲಿಷ್ಟತೆಗಳಿಂದಾಗಿಯೇ ನಮ್ಮ ಆಡಳಿತ ವ್ಯವಸ್ಥೆ ಇದರ ತಂಟೆಗೇ ಹೋಗುವುದಿಲ್ಲ, ಮೋದಿಯವರಿಂದ ರಾಹುಲ್‌ವರೆಗೆ, 'ದೀದಿ'ಯಿಂದ 'ದಾದಿ'ಯವರೆಗೆ ಯಾರೂ ಇದರ ಬಗ್ಗೆ ಮಾತನಾಡುವುದಿಲ್ಲ.

ಅತ್ಯಾಚಾರ ಎನ್ನುವುದು ನೇರವಾಗಿ ಸಾಮಾಜಿಕ ಮೌಲ್ಯದ ಮಟ್ಟಕ್ಕೆ, ಶಿಕ್ಷಣಕ್ಕೆ ಮತ್ತು ಕಾನೂನಿನ ಗಟ್ಟಿತನಕ್ಕೆ ಹಿಡಿದ ಕನ್ನಡಿ ಎಂಬುದರಲ್ಲಿ ಎರಡನೇ ಮಾತಿಲ್ಲ. ಎಲ್ಲೆಲ್ಲಿ ಈ ಮೂರು ಗಟ್ಟಿಯಾಗಿವೆಯೋ, ಅಲ್ಲೆಲ್ಲ ಅತ್ಯಾಚಾರ ಕಮ್ಮಿಯಿರುವುದು ಕಾಣುತ್ತದೆ. ಈ ಕಾರಣದಿಂದಲೇ ಭಾರತದ ದಕ್ಷಿಣ ಭಾಗದಲ್ಲಿ ಅತ್ಯಾಚಾರದ ಸಂಖ್ಯೆ ಕಮ್ಮಿ. ಉಳಿದದ್ದು ನಿಮ್ಮ ವಿವೇಚನೆಗೆ.... ☯

# ಮೆಣಸಿನಕಾಯಿ ತೋಟದಲ್ಲಿ ಕೊಲೆಯಾದ ಶೋಭ!
## ಬಿಡದಿಯಿಂದ ಗಂಡನನ್ನು ಬಿಟ್ಟು ಬಿದರಹಳ್ಳಿಗೆ ಬಂದಿದ್ದಳು

**ಆಕೆಗೆ ಅದಾಗಲೇ ಬೇರೊಬ್ಬನ ಜೊತೆ ಮದುವೆಯಾಗಿತ್ತು. ಜೀವನದಲ್ಲಿ ಸಾಕಷ್ಟು ಏರಿಳಿತಗಳನ್ನು ಕಂಡಿದ್ದ, ಸಂಕಷ್ಟಗಳನ್ನು ಎದುರಿಸಿದ್ದಳು.ಎಲ್ಲವನ್ನು ನಿಭಾಯಿಸಿಕೊಂಡು ಗಂಡನೊಟ್ಟಿಗೆ ಜೀವನ ನಡೆಸುತ್ತಿದ್ದಳು. ಈ ಹಂತಕ ಜೀವನೋಪಾಯಕ್ಕೆ ವಲಸೆ ಹೋಗಿದ್ದ ವೇಳೆ ಇಬ್ಬರಲ್ಲಿಯೂ ಆಕರ್ಷಣೆಯಾಗಿ ಪರಸ್ಪರ ಇಷ್ಟಪಟ್ಟು ನನಗೆ ನೀನು, ನಿನಗೆ ನಾನು ಎಂದು ಬದುಕಲ್ಲಿ ಭರವಸೆ ಮೂಡಿಸಿದ್ದ. ಕೊನೆಗೆ ತನ್ನ ಸ್ವಗ್ರಾಮಕ್ಕೆ ಕರೆತಂದು ಮದುವೆಯಾಗಿದ್ದನು. ಆಕೆಯೂ ಅಷ್ಟೆ ಈತನನ್ನು ನಂಬಿ ಗಂಡನನ್ನು ತೊರೆದು ದೂರದ ಊರಿಂದ ಬಂದು ಈತನೊಟ್ಟಿಗೆ ಸಂಸಾರ ಹೂಡಿದ್ದಳು. ಮಕ್ಕಳಿಲ್ಲದ ಈ ದಂಪತಿಗಳಿಬ್ಬರು ತಮ್ಮ ಜಮೀನಿನಲ್ಲಿ ಕೃಷಿ ಚಟುವಟಿಕೆ ಮಾಡಿಕೊಂಡು ತೋಟದ ಮನೆಯಲ್ಲಿ ವಾಸವಿದ್ದರು. ಆಗಾಗ ಕುಡಿದು ಜಗಳವಾಡುತ್ತಾ ಕಾಲ ಕಳೆಯುತ್ತಿದ್ದರು.**



ಕೊಲೆಯಾದ ಶೋಭಾ



ಅಂದು ಡಿ. 23 ಸೋಮವಾರ ರಾತ್ರಿ ಮಾರನೆ ದಿನ ಕಳೆದು ಬೆಳಗಾದರೆ ಕ್ರೈಸ್ತ ಜನಾಂಗದವರಾದ ಈ ದಂಪತಿಗಳಿಬ್ಬರು ಕ್ರಿಸ್ಮಸ್ ಹಬ್ಬದ ಸಂಭ್ರಮದಲ್ಲಿ ತೊಡಗಿಸಿಕೊಂಡು ಖುಷಿ ಪಡಬೇಕಾಗಿತ್ತು. ಜಗತ್ತಿನಾದ್ಯಾಂತ ಕ್ರಿಶ್ಚಿಯನ್ನರು ಕ್ರಿಸ್‌ಮಸ್ ಹಬ್ಬ ಆಚರಿಸುವವರಿದ್ದರು. ಆದರೆ ಇಲ್ಲೊಬ್ಬ ಅವಿವೇಕಿ ಪತಿ ಕುಡಿದು ಜಗಳವಾಡುತ್ತಿದ್ದ ಭರದಲ್ಲಿ ಎಣ್ಣೆಯ ಮತ್ತಿನಲ್ಲಿ ಹೆಂಡತಿಯ ಹೆಣ ಕೆಡವಿದ್ದಾನೆ. ಬದುಕಿದ್ದರೆ ದಂಪತಿಗಳಿಬ್ಬರೂ ಸೇರಿ ನಾಳೆ ಕ್ರಿಸ್ಮಸ್ ಆಚರಿಸಬೇಕಾಗಿತ್ತು. ಆದರೆ ತಾವು ವಾಸ ಮಾಡುತ್ತಿದ್ದ ತೋಟದ ಮನೆಯ ಮೆಣಸಿನಕಾಯಿ ಬೆಳೆದಿದ್ದ ಜಮೀನಿನಲ್ಲಿ ಆಕೆ ಕೊಲೆಯಾಗಿ ಹೋಗಿದ್ದಾಳೆ. ಎಲ್ಲಿಂದಲೋ ತನ್ನವರನ್ನೆಲ್ಲಾ ತೊರೆದು ಹಂತಕನ ಹಿಂದೆ ಬಂದಿದ್ದ ನಿಷ್ಪಾಪಿ ಹೆಣ್ಣು ಮಗಳು ತಾನು ನಂಬಿ ಬಂದವನಿಂದಲೇ ಹೆಣವಾಗಿ ಹೋಗಿದ್ದಾಳೆ. ಘಟನೆಯ ನಂತರ ಹಂತಕ ಪತಿಯನ್ನು ಪೊಲೀಸರು ಬಂಧಿಸಿ ಜೈಲಿಗೆ ಬಿಟ್ಟು ಬಂದಿದ್ದಾರೆ.

**ಕೊಳ್ಳೇಗಾಲ**

**ಎಸ್. ಸ್ವಾಮಿ**

ಈ ದುರ್ಘಟನೆ ನಡೆದಿರುವುದು ಚಾಮರಾಜನಗರ ಜಿಲ್ಲೆ ಹನೂರು ತಾಲ್ಲೂಕಿನ ರಾಮಾಪುರ ಪೊಲೀಸ್ ಠಾಣಾ ವ್ಯಾಪ್ತಿಯ ಬಿದರಹಳ್ಳಿ ಗ್ರಾಮದಲ್ಲಿ, ಗ್ರಾಮದ ಅಮಲ್ ರಾಜ್ ಎಂಬಾತನ ಪತ್ನಿ ಶೋಭಾ (43) ಎಂಬಾಕೆಯೇ ಕುಡುಕ ಪತ್ನಿಯ ಬಲಿಯಾದ ನತದೃಷ್ಟ ಗೃಹಿಣಿ. ಪತ್ನಿ ಹೆಣ ಕೆಡವಿದ ಪಾಪಿ ಪತ್ನಿ ಹಂತಕ ಅಮಲ್ ರಾಜ್ ಎಂಬಾತನನ್ನು ರಾಮಾಪುರ ಠಾಣೆ ಪೊಲೀಸರು ಬಂಧಿಸಿ ಜೈಲಿಗಟ್ಟಿದ್ದಾರೆ.

ಹನೂರು ತಾಲ್ಲೂಕಿನ ಮಾರ್ಟಳ್ಳಿ ಗ್ರಾಮ



ಪಂಚಾಯಿತಿ ವ್ಯಾಪ್ತಿಯ ಬಿದರಹಳ್ಳಿ ಗ್ರಾಮದ ಥಾಮಸ್ ಹಾಗೂ ಉತ್ತರಿಯಮ್ಮ ದಂಪತಿಗಳಿಗೆ ಎರಡು ಹೆಣ್ಣು, ಒಂದು ಗಂಡು ಒಟ್ಟು ಮೂವರು ಮಕ್ಕಳ ಪೈಕಿ ಕಿರಿಯ ಮಗ ಈ ಹಂತಕ ಅಮಲ್ ರಾಜ್. ಗ್ರಾಮದಲ್ಲಿ ಈತನ ಬಗ್ಗೆ ಒಳ್ಳೆಯ ಅಭಿಪ್ರಾಯವಿಲ್ಲ. ಈತ ಈ ಹಿಂದೆ ತನ್ನ ದಾಯಾದಿ ಫಿಲಿಪ್ ಎಂಬಾತನ ಮೇಲೆ ಹಲ್ಲೆ ನಡೆಸಿ ಹನೂರು ಠಾಣೆಯಲ್ಲಿ ದೂರು ದಾಖಲಾಗಿದೆ, ಈತ ಅಕ್ರಮವಾಗಿ ಶಸ್ತ್ರಾಸ್ತ್ರ ಹೊಂದಿದ್ದ ಆರೋಪಡಿ ಈತನ ಮೇಲೆ ರಾಮಾಪುರ ಠಾಣೆಯಲ್ಲಿ ಪ್ರಕರಣ ದಾಖಲಾಗಿ ಬಂಧಿಯಾಗಿದ್ದ. ಹಾಗೆಯೇ ದಿಲೀಪ್ ಎಂಬಾತನಿಗೆ ಮಚ್ಚಿನಲ್ಲಿ ಹಲ್ಲೆ ನಡೆಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ ರಾಮಾಪುರ ಠಾಣೆಯಲ್ಲಿ ಪ್ರಕರಣ ದಾಖಲಾಗಿವೆ.

ರಾಜ್ಯದ ಗಡಿಯಲ್ಲಿರುವ ಹನೂರು ತಾಲ್ಲೂಕು ಬಹುಕೇಕ ಗುಡ್ಡಗಾಡಿನಿಂದ ಕೂಡಿದ್ದು ಕೃಷಿಗೆ ಮಳೆಯನ್ನೆ ಆಶ್ರಯಿಸಿರುವ ಇಲ್ಲಿನ ಬಹುಪಾಲು ಮಂದಿ ಜೀವನೋಪಾಯಕ್ಕೆಂದು ಕೆಲಸ ಹರಸಿ ಬೆಂಗಳೂರು, ಮೈಸೂರು ಹಾಗೂ ಪಕ್ಕದ ತಮಿಳುನಾಡಿಗೆ ವಲಸೆ ಹೋಗುತ್ತಾರೆ. ಅದೇ ರೀತಿ ಅಮಲ್ ರಾಜ್ ಕಳೆದ 4 ವರ್ಷಗಳ ಹಿಂದೆ ರಾಮನಗರ ಸಮೀಪದ ಬಿಡದಿಗೆ ವಲಸೆ ಹೋಗಿದ್ದ. ಇಲ್ಲಿ ಕಲ್ಲು ಒಡೆಯುವ ಕೆಲಸ ಮಾಡುತ್ತಿದ್ದ ವೇಳೆ ಶೋಭಳ ಪರಿಚಯವಾಗಿದೆ.



ಎಸ್ಪಿ ಡಾ. ಬಿ.ಟಿ. ಕವಿತಾ

ಮೃತೆ ಶೋಭಾಳಿಗೆ ಅದಾಗಲೇ ಬೇರೊಬ್ಬನ ಜೊತೆ ಮದುವೆಯಾಗಿತ್ತು. ಜೀವನದಲ್ಲಿ ಸಾಕಷ್ಟು ಏರಿಳಿತಗಳನ್ನು ಕಂಡಿದ್ದ, ಸಂಕಷ್ಟಗಳನ್ನು ಎದುರಿಸಿದ್ದಳು.ಎಲ್ಲವನ್ನು ನಿಭಾಯಿಸಿಕೊಂಡು ಗಂಡನೊಟ್ಟಿಗೆ ಜೀವನ ನಡೆಸುತ್ತಿದ್ದಳು. ಅಮಲ್ ರಾಜ್ ಜೀವನೋಪಾಯಕ್ಕೆ ಬಿಡದಿಗೆ ವಲಸೆ ಹೋಗಿದ್ದ ವೇಳೆ ಅಲ್ಲೆ ಇದ್ದ ಶೋಭಳ ಪರಿಚಯವಾಗಿದೆ. ತನ್ನ ಗಂಡನಲ್ಲಿ ಇಲ್ಲದ್ದನ್ನು ಅಮಲ್ ರಾಜ್‌ನಲ್ಲಿ ಅದೇನು ಕಂಡಳೊ...! ಅಥವಾ ಈತನಿಗೆ ಆಕೆಯಲ್ಲಿ ಅದೇನು ಇಷ್ಟ ಆಯಿತೋ...? ಇಬ್ಬರಲ್ಲಿಯೂ ಪರಸ್ಪರ ಆಕರ್ಷಣೆಯಾಗಿ ನನಗೆ ನೀನು, ನಿನಗೆ ನಾನು ಎಂದು ಬದುಕಲ್ಲಿ ಭರವಸೆ ಮೂಡಿಸಿದ್ದನು. ಕೊನೆಗೆ ತನ್ನ ಸ್ವಗ್ರಾಮ ಬಿದರಹಳ್ಳಿಗೆ ಕರೆತಂದು ಇಲ್ಲಿನ ಚರ್ಚ್ ವೊಂದರಲ್ಲಿ ಮದುವೆಯಾಗಿದ್ದನು. ಆಕೆಯೂ ಅಷ್ಟೆ ಈತನನ್ನು ನಂಬಿ ಗಂಡನನ್ನು ತೊರೆದು ದೂರದ ಊರಿಂದ ಬಂದು ಈತನೊಟ್ಟಿಗೆ ಸಂಸಾರ ಹೂಡಿದ್ದಳು. ಮಕ್ಕಳಿಲ್ಲದ ಈ ದಂಪತಿಗಳಿಬ್ಬರು ತಮ್ಮ ಜಮೀನಿನಲ್ಲಿ ಕೃಷಿ ಚಟುವಟಿಕೆ ಮಾಡಿಕೊಂಡು ತೋಟದ ಮನೆಯಲ್ಲಿ ವಾಸವಿದ್ದರು. ಈ ಬಾರಿ ಜೀವನೋಪಾಯಕ್ಕೆ ಜಮೀನಿನಲ್ಲಿ ಮೆಣಸಿನಕಾಯಿ ಬೆಳೆ ಬೆಳೆದಿದ್ದರು.

ಮೊದಲಿನಿಂದಲೂ ಕುಡಿತಕ್ಕೆ ದಾಸನಾಗಿದ್ದ ಅಮಲ್ ರಾಜ್ ತನ್ನ ಚಟವನ್ನು ಬಿಟ್ಟಿರಲಿಲ್ಲ. ಪ್ರತಿದಿನ ಕುಡಿದು ಬಂದು ಮೃತೆ ಶೋಭಾಳಿಗೆ ಕಿರುಕುಳ ನೀಡುತ್ತಿದ್ದ. ಒಮ್ಮೆ ತಲೆಗೆ ಹೊಡೆದು ಗಾಯಗೊಳಿಸಿದ್ದ. ಇನ್ನೊಮ್ಮೆ ಕಾಲು ಕತ್ತರಿಸಲೂ ಸಹ ಮುಂದಾಗಿದ್ದ. ಈ ವೇಳೆ ಪಕ್ಕದ ಜಮೀನಿನ ಶಿವು ಎಂಬಾತ 112 ಸಂಖ್ಯೆ ವಾಹನಕ್ಕೆ ಕರೆ ಮಾಡಿ ದೂರು ನೀಡಿದ್ದ ಹಿನ್ನೆಲೆಯಲ್ಲಿ ಆ ಅನಾಹುತ ತಪ್ಪಿತ್ತು. ಈತನಿಗೆ ರಾಮಾಪುರ ಠಾಣೆ ಪೊಲೀಸರು ಹಲವಾರು ಬಾರಿ ಬುದ್ಧಿವಾದ ಹೇಳಿದ್ದರು. ಆದರೂ ಅಮಲ್ ರಾಜ್ ತನ್ನ ವರ್ತನೆ ಬದಲಾಯಿಸಿಕೊಂಡಿರಲಿಲ್ಲ. ದಂಪತಿಗಳಿಬ್ಬರು ಊರಿಂದ ಹೊರಗಿದ್ದ ತಮ್ಮ ಜಮೀನಿನ ತೋಟದ ಮನೆಯಲ್ಲಿ ವಾಸವಿದ್ದರಿಂದ ಗ್ರಾಮಸ್ಥರ ಸಂಪರ್ಕವಿರಲಿಲ್ಲ. ಇಲ್ಲಿ ಏನೇ ನಡೆದರೂ, ಹೇಗೆ ಗಲಾಟೆ ಮಾಡಿದರೂ ಯಾರೂ ಕೇಳುವವರಿರಲಿಲ್ಲ ಹಾಗೂ ಯಾರಿಗೂ ತಿಳಿಯುತ್ತಿರಲಿಲ್ಲ. ಇದು ಅಮಲ್ ರಾಜ್‌ಗೆ ಶೋಭಳ ಮೇಲೆ ನಿರಂತರವಾಗಿ ಗಲಾಟೆ ಮಾಡಲು ಯಾವುದೆ ಅಡೆತಡೆ ಇಲ್ಲದಂತಾಗಿತು.

ಅಂದು ಡಿ. 23 ಸೋಮವಾರ ರಾತ್ರಿ ಮಾರನೆ ದಿನ ಕಳೆದು ಬೆಳಗಾದರೆ ಕ್ರೈಸ್ತ ಜನಾಂಗದವರಾದ ಈ ದಂಪತಿಗಳಿಬ್ಬರು ಕ್ರಿಸ್ಮಸ್ ಹಬ್ಬದ ಸಂಭ್ರಮದಲ್ಲಿ ತೊಡಗಿಸಿಕೊಂಡು ಖುಷಿ ಪಡಬೇಕಾಗಿತ್ತು. ಜಗತ್ತಿನಾದ್ಯಾಂತ ಕ್ರಿಶ್ಚಿಯನ್ನರು ಕ್ರಿಸ್‌ಮಸ್ ಹಬ್ಬ ಆಚರಿಸುವವರಿದ್ದರು. ಅಂದು ಅಮಲ್ ರಾಜ್ ಬೆಳಿಗ್ಗೆಯಿಂದಲೆ ಕುಡಿದು ಪತ್ನಿ ಶೋಭಳ ಜೊತೆ ಜಗಳವಾಡುತ್ತಿದ್ದ. ಎಣ್ಣೆಯ ಮತ್ತಿನಲ್ಲಿ ತೇಲುತ್ತಿದ್ದ ಪಾಪಿ ಹಂತಕ ಶೋಭಳ ಮೇಲೆ ಹಲ್ಲೆ ಮಾಡಿದ್ದಾನೆ. ಈ ವೇಳೆ ಆಕೆಯ ಕೆನ್ನೆಗೆ ಬಲವಾಗಿ ಥಾರಿಸಿದ್ದಾನೆ. ಈ ವೇಳೆ ಕುಸಿದು ಪ್ರಾಣ ಬಿಟ್ಟಿದ್ದಾಳೆ. ಡಿ. 24 ರ ಮಂಗಳವಾರ 9.30ರ ಸಮಯದಲ್ಲಿ ಎಂದಿನಂತೆ ಪಕ್ಕದ ಜಮೀನು ಮಾಲಿಕ ಬಿದರಹಳ್ಳಿ ಗ್ರಾಮದ ಶಿವು ಎಂಬಾತ ತನ್ನ ಜಮೀನಿನ ಕಡೆ ಬಂದ ವೇಳೆಯಲ್ಲಿ ಶೋಭಾ ಎಂಬ ನತದೃಷ್ಟೆ ಕೊಲೆಯಾಗಿ ಪತ್ತೆಯಾಗಿದ್ದಾಳೆ. ಈಕೆಯ ಕೆನ್ನೆಯ ಭಾಗದಲ್ಲಿ ರಕ್ತ ಹೆಪ್ಪುಗಟ್ಟಿತ್ತು. ಇದರಿಂದ ಅನುಮಾನಗೊಂಡ ಶಿವುರವರು ಕೂಡಲೆ ರಾಮಾಪುರ ಪೊಲೀಸ್ ಠಾಣೆಗೆ ಬಂದು ಅಮಲ್ ರಾಜ್ ಪ್ರತಿದಿನ ಕುಡಿದು ಬಂದು ಮೃತ ಶೋಭಾರಿಗೆ ಕಿರುಕುಳ ನೀಡುತ್ತಿದ್ದ. ಒಮ್ಮೆ ತಲೆಗೆ ಹೊಡೆದು ಗಾಯಗೊಳಿಸಿದ್ದ. ಇನ್ನೊಮ್ಮೆ ಕಾಲು ಕತ್ತರಿಸಲು ಸಹ ಮುಂದಾಗಿದ್ದ. ಈ ವೇಳೆ ನಾನೇ 112 ಸಂಖ್ಯೆ ವಾಹನಕ್ಕೆ ಕರೆ ಮಾಡಿ ದೂರು ನೀಡಿದ್ದೆ. ಪೊಲೀಸರು ಹಲವಾರು ಬಾರಿ ಬುದ್ಧಿವಾದ ಹೇಳಿದ್ದರು ಆದರೂ ವರ್ತನೆ ಬದಲಾಯಿಸಿಕೊಳ್ಳದೆ ಕುಡಿದ ಅಮಲಿನಲ್ಲಿ ಶೋಭಾರನ್ನು ಅಮಲ್ ರಾಜ್ ಕೊಲೆ ಮಾಡಿದ್ದಾನೆ. ಈತನ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕೆಂದು ರಾಮಾಪುರ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದಾರೆ. ಈ ಸಂಬಂಧ ರಾಮಾಪುರ ಠಾಣೆ ಪೊಲೀಸರು ಠಾಣಾ ಮೊಕೋದ್ದಮೆ ಸಂಖ್ಯೆ 214 /2024 ಕಲಂ 103 (1) ಬಿ.ಎನ್.ಎಸ್ ರಿತ್ಯಾ ಪ್ರಕರಣ ದಾಖಸಿಕೊಂಡಿದ್ದಾರೆ.



ರಾಮಾಪುರ ಠಾಣೆ ಪ್ರಭಾರ ವೃತ್ತನಿರೀಕ್ಷಕ ಶೇಷಾದ್ರಿ ಹಾಗೂ ಪಿಎಸ್‌ಐ ಈಶ್ವರ್ ಕೂಡಲೆ ತಮ್ಮ ಸಿಬ್ಬಂದಿಗಳೊಡನೆ ಸ್ಥಳಕ್ಕಾಗಮಿಸಿ ಪರಿಶೀಲನೆ ನಡೆಸಿದ್ದಾರೆ. ಈ ವೇಳೆ ಮೃತದೇಹದ ಕೆನ್ನೆಯ ಭಾಗದಲ್ಲಿ ರಕ್ತ ಹೆಪ್ಪುಗಟ್ಟಿದ್ದರಿಂದ ಇದೊಂದು ಕೊಲೆಯಾಗಿರಬೇಕೆಂದು ಪೊಲೀಸರು ಅನುಮಾನಿಸಿ ಮೃತದೇಹವನ್ನು ಮರಣೋತ್ತರ ಪರೀಕ್ಷೆಗಾಗಿ ಚಾಮರಾಜನಗರ ಜಿಲ್ಲಾಸ್ಪತ್ರೆಗೆ ರವಾನಿಸಿದ್ದಾರೆ. ಕೂಡಲೆ ಪತ್ನಿ ಹೆಣ ಕೆಡವಿದ ಪಾಪಿ ಪತಿ ಅಮಲ್ ರಾಜ್‌ನನ್ನು ಬಂಧಿಸಿ ಜೈಲಿಗಟ್ಟಿದ್ದಾರೆ.

**ಸ್ಥಳಕ್ಕೆ ಎಸ್.ಪಿ ಭೇಟಿ**

ರಾಮಾಪುರ ಪೊಲೀಸ್ ಠಾಣಾ ವ್ಯಾಪ್ತಿಯ ಬಿದರಹಳ್ಳಿ ಗ್ರಾಮದಲ್ಲಿ ಮಹಿಳೆ ಅನುಮಾನಸ್ಪದವಾಗಿ ಮೃತಪಟ್ಟಿರುವ ಮಾಹಿತಿ ತಿಳಿಯುತ್ತಿದ್ದಂತೆ ಚಾಮರಾಜನಗರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಬಿ.ಟಿ. ಕವಿತಾ ಭೇಟಿ ನೀಡಿ ಪರಿಶೀಲನೆ ನಡೆಸಿ ಪ್ರಭಾರ ವೃತ್ತನಿರೀಕ್ಷಕ



ಶೇಷಾದ್ರಿ ಹಾಗೂ ಪಿಎಸಐ ಈಶ್ವರ್ ಅವರಿಂದ ಮಾಹಿತಿ ಪಡೆದುಕೊಂಡಿದ್ದಾರೆ.ಅನುಮಾನಾಸ್ಪದವಾಗಿ ಮೃತಪಟ್ಟಿರುವ ಶೋಭಾರವರ ಮೃತದೇಹವನ್ನು ಮರಣೋತ್ತರ ಪರೀಕ್ಷೆಗಾಗಿ ಚಾಮರಾಜನಗರ ಜಿಲ್ಲಾಸ್ಪತ್ರೆಗೆ ರವಾನಿಸಲಾಗಿದೆ. ಬಿದರಹಳ್ಳಿ ಗ್ರಾಮದಲ್ಲಿ ಶೋಭಾ ಎಂಬುವರ ಕೊಲೆಯಾಗಿದ್ದು ಅಮಲ್ ರಾಜ್ ಎಂಬುವರನ್ನು ವಶಕ್ಕೆ ಪಡೆಯಲಾಗಿದೆ. ಈಗಾಗಲೇ ಪ್ರಕರಣ ದಾಖಲಿಸಿಕೊಂಡಿದ್ದು ತನಿಖೆ ನಡೆಸಲಾಗುವುದು ಎಂದು ಎಸ್ಪಿ ಡಾ. ಬಿ.ಟಿ. ಕವಿತಾ ತಿಳಿಸಿದ್ದಾರೆ.

ಆದರೆ ಇಲ್ಲೊಬ್ಬ ಅವಿವೇಕಿ ಪತಿ ಕುಡಿದು ಜಗಳವಾಡುತ್ತಿದ್ದ ಭರದಲ್ಲಿ ಎಣ್ಣೆಯ ಮತ್ತಿನಲ್ಲಿ ಹೆಂಡತಿಯ ಹೆಣ ಕೆಡವಿದ್ದಾನೆ. ಬದುಕಿದ್ದರೆ ದಂಪತಿಗಳಿಬ್ಬರೂ ಸೇರಿ ನಾಳೆ ಕ್ರಿಸ್ಮಸ್ ಆಚರಿಸಬೇಕಾಗಿತ್ತು. ಆದರೆ ಆಕೆ ತಾವು ವಾಸ ಮಾಡುತ್ತಿದ್ದ ತೋಟದ ಮನೆಯ ಮೆಣಸಿನಕಾಯಿ ಬೆಳೆದಿದ್ದ ಜಮೀನಿನಲ್ಲಿ ಕೊಲೆಯಾಗಿ ಹೋಗಿದ್ದಾಳೆ. ಎಲ್ಲಿಂದಲೋ ತನ್ನವರನ್ನೆಲ್ಲಾ ತೊರೆದು ಹಂತಕನ ಹಿಂದೆ ಬಂದಿದ್ದ ಆಕೆ ನಂಬಿ ಬಂದವನಿಂದಲೇ ಹೆಣವಾಗಿ ಹೋಗಿದ್ದಾಳೆ. ಇಲ್ಲಿನ ಪೊಲೀಸರ ಪ್ರಕಾರ ಈ ದುರ್ಘಟನೆ ಸೋಮವಾರ ರಾತ್ರಿ ಸುಮಾರು 9:30 ರ ನಂತರದ ವೇಳೆಯಲ್ಲಿ ನಡೆದಿದ್ದು, ತೋಟದ ಮನೆಯಲ್ಲಿ ಗಂಡ ಹೆಂಡತಿಯರು ವಾಸ ಮಾಡುತ್ತಿದ್ದರು ಎಂದು ಹೇಳಲಾಗಿದೆ.

☞ 14

# ಲವ್ ಡ್ರಾಮ

ಅವಳು ಶ್ವೇತ ಪೊನ್ನಪ್ಪ! ಕೊಡಗಿನ ಬೆಡಗಿ ಮೈಸೂರಿನ ಮಹಾರಾಣಿ ಕಾಲೇಜಿನಲ್ಲಿ ಫೈನಲ್ ಡಿಗ್ರಿ ಓದುತ್ತಿದ್ದಾಳೆ.

ಬ್ಯುಟಿಡಾಲ್. ಕ್ವೀನ್ ಆಫ್ ಕಾಲೇಜ್. ಓದಿನಲ್ಲಿ ಬುದ್ಧಿವಂತೆ. ಮುಖ್ಯವಾಗಿ ಆಕೆ ಶ್ರೀಮಂತ ಕುಟುಂಬದವಳು. ಅವಳಿರೋದು ಡಿಲಕ್ಸ್ ಲೆವೆಲ್ ಹಾಸ್ಟೆಲ್‌ನಲ್ಲಿ. ಅವಳು ಕಾಲೇಜಿಗೆ ಕಾರಲ್ಲಿ ಬರುತ್ತಾಳೆ. ತನ್ನ ಸೌಂದರ್ಯಕ್ಕೆ ಮೆರಗು ಬರುವ ರೀತಿಯಲ್ಲಿ ಮೇಕಪ್ ಮತ್ತು ಡ್ರೆಸ್ ಮಾಡುತ್ತಾಳೆ. ಅವಳ ಚೆಲುವು ಚಿತ್ತಾಕರ್ಷಕ.

ಶೃಂಗಾರ ಶೈಲಿಯಲ್ಲಿ, ಪಡ್ಡೆಗಳು ಚಂಚಲಗೊಳ್ಳುವಂತೆ ಪಾರದರ್ಶಕ ಉಡುಪುಗಳನ್ನು ಧರಿಸುತ್ತಾಳೆ.

ಅವಳು ಚೆಲ್ಲಾಟದ ಚೆಲುವೆ! ತನ್ನ ವಿಶಿಷ್ಟ ಸೌಂದರ್ಯಕ್ಕೆ ಬೆರಗಾಗಿ ಕಾಲೇಜಿನ ಬಹುತೇಕ ಯುವಕರು ಹಂಬಲಿಸುತ್ತಿದ್ದಾರೆ ಮತ್ತು ಇವಳ ನಗುವಿಗಾಗಿ ಮತ್ತು ಗೆಳೆತನಕ್ಕಾಗಿ ಏನೇನೋ ಆಟ ಆಡಿ ಆಕರ್ಷಿಸಲು ಪ್ರಯತ್ನಿಸುತ್ತಿದ್ದಾರೆ.

ಇವಳು ಗೇಮ್ ಪ್ಲೇ ಮಾಡುತ್ತಾಳೆ. ಪಡ್ಡೆಗಳ ಜೊತೆ ಆಟ ಆಡಿ ಅವರಲ್ಲಿ ಆಸೆ ಕೆರಳಿಸಿ ನಂತರ ಕೋತಿಯಂತೆ ಕುಣಿಸುತ್ತಾಳೆ. ನಂತರ ಬಹಿರಂಗವಾಗಿ ಅವಮಾನ ಮಾಡಿ ನಗುತ್ತಾಳೆ. ಇದೆಲ್ಲಾ ಗೊತ್ತಿದ್ದರೂ ಪಡ್ಡೆಗಳು ಅವಳನ್ನು ಬಯಸಲು ಕಾರಣ ಅವಳ ಸೊಬಗಿನ, ಬೆಳದಿಂಗಳಂತ ಚೆಲುವು.

ಶ್ವೇತ ಸೌಂದರ್ಯ ದೇವತೆ! ಅವಳು ಸೌಂದರ್ಯ ಸರ್ಪ. ಅವಳಿಗೇನು ಬೇಕು? ಪಡ್ಡೆಯುವಕರ ಮೇಲೆ ಪ್ರಾಕ್ಟಿಕಲ್ ಜೋಕ್ ಮಾಡಿ ಅವರನ್ನು ಫೂಲ್ ಮಾಡಿ ನಗಬೇಕು... ಥ್ರಿಲ್ ಎಂಜಾಯ್ ಮಾಡಬೇಕು. ಹಾಗಾಗಿ ಅವಳು ಆಗಾಗ ಹೊಸ ಹೊಸ ಶೈಲಿಯಲ್ಲಿ ಆಟ ಆಡುತ್ತಾಳೆ. ಆದರೆ ಅವಳು ನಿರೀಕ್ಷೆ ಮಾಡಿರಲಿಲ್ಲ. ಸಮಸ್ಯೆಯೊಂದು ಸಂಕೋಲೆ ರೀತಿಯಲ್ಲಿ ಸುತ್ತಿಕೊಂಡಿದೆ. ಅವಳ ಭವಿಷ್ಯ . ಮತ್ತು ಗೌರವಕ್ಕೆ ಅವಳ ಕ್ಯಾರೆಕ್ಟರ್‌ಗೆ ಕಳಂಕ ಬರುವಂತ ಸನ್ನಿವೇಶ ಎದುರಾಗಿದೆ. ಮುಂದೇನು ಗತಿ? ಆ ಸಮಸ್ಯೆಗೆ ಕಾರಣ ಏನು?

ಇವಳು ಎಲ್ಲರನ್ನೂ ಫೂಲ್ ಮಾಡಿದಂತೆ ಆ ಯುವಕನ ಜೊತೆ ಅತಿರೇಕ ಎನಿಸುವ ರೀತಿ ಲವ್ ಡ್ರಾಮ ಆಡಿದ್ದಳು. ಈಗ ಅದು ಸಮಸ್ಯೆಯಾಗಿದೆ.

ಅವನು ಶ್ರೀವತ್ಸ...!

●●●

ಅವಳು ಬಂಗಲೆಯ ಬೆಡ್‌ರೂಮಿನಲ್ಲಿ ಚಡಪಡಿಸುತ್ತಿರುವಾಗ ಫೋನ್ ಕಾಲ್ ಬಂದಿತು.

ಶ್ರೀವತ್ಸ ಮಾಡಿದ್ದಾನೆ. ಅವಳಿಗೆ ಕೋಪ ಬರುತ್ತಿದೆ. ಫೋನ್ ಅಟೆಂಡ್ ಮಾಡುವತನಕ ಈ ಲವ್ ಮ್ಯಾಡ್ ಬಿಡಲಾರ ಎಂದು ಫೋನ್ ಅಟೆಂಡ್ ಮಾಡಿ 'ಏ... ಹುಚ್ಚ... ನನಗ್ಯಾಕೆ ಫೋನ್ ಮಾಡಿ ಡಿಸ್ಟರ್ಬ್ ಮಾಡ್ತೀಯ'' ಎಂದು ರೇಗಿದಳು.

''ನಾನು ಹುಚ್ಚನಾಗಿರೋದು ನಿನ್ನಿಂದ. ನೀನು ನನ್ನನ್ನು ಲವ್ ಮಾಡಿದ್ದರಿಂದ.''

ಅವಳು ನಗಲಾರಂಭಿಸಿದಳು.

''ಲವ್ ಮಾಡಿಲ್ಲ. ಲವ್ ಗೇಮ್ ಆಡಿದ್ದೀನಿ ಅಷ್ಟೇ. ಉಳಿದವರಿಗಿಂತ ನಿನ್ನ ಜೊತೆ ಜಾಸ್ತಿ ಸಲಿಗೆ ಆಟ ಆಡಿದ್ದೀನಿ. ಏ... ಫೂಲ್... ನಿನ್ನಂತ ಬಿಕಾಂನ ಲವ್ ಮಾಡೋವಷ್ಟು ಪೆದ್ದಿ ಅಲ್ಲ. ಲವ್ ಡ್ರೀಮ್ ಕಾಣ್ಬೇಡ. ಆಮೇಲೆ ನಿನಗೆ ತಲೆ ಕೆಟ್ಟು ಹುಚ್ಚ ಆಗ್ತೀಯ.''

''ಈಗ ಆಗಿದ್ದೀನಿ.''

''ಹಾಗಾದರೆ ನಿಮ್ಹಾನ್ಸ್‌ಗೆ ಫೋನ್ ಮಾಡ್ತೀನಿ. ಅವರೇ ವೆಹಿಕಲ್ ತಗೊಂಡು ಬಂದು ನಿನ್ನ ಕರ್ಕೊಂಡು ಹೋಗಿ ಟ್ರೀಟ್‌ಎಂಟ್ ಕೊಡ್ತಾರೆ'' ಎಂದು ಹೇಳಿ ಫೋನ್ ಲಿಂಕ್ ಕಟ್ ಮಾಡಿದಳು.

ಆ ರೂಮಿನಲ್ಲಿ ಅವನೊಬ್ಬನೇ ಇದ್ದಾನೆ. ಆಲ್ಬಂ ಓಪನ್ ಮಾಡಿದನು. ಅವಳ ಚಿತ್ತಾಕರ್ಷಕ ಸೌಂದರ್ಯದ ಫೋಟೋಗಳಿವೆ. ಅವನು ಮೈಮರೆತು ನೋಡುತ್ತಾ ಅವಳ ಜೊತೆ ಲವ್ ಅಂಡ್ ರೋಮಾನ್ಸ್ ಮಾಡಿದಂತೆ ಕಲ್ಪನೆ ಮಾಡಿಕೊಳ್ಳುತ್ತಿದ್ದಾನೆ.

ಮೊಬೈಲ್ ಆನ್ ಮಾಡಿ ಫೋಟೋಗಳ ಗ್ಯಾಲರಿ ಓಪನ್ ಮಾಡಿದನು.

ಅಶ್ವಿನಿ ಪೊನ್ನಪ್ಪ ಈ ಬಡ ವಿದ್ಯಾರ್ಥಿ ಶ್ರೀವತ್ಸನ ಜೊತೆ, ತುಂಬಾ ಇನ್‌ಟಿಮೇಟ್ ಆಗಿ ಮೈ ಟಚ್ ಮಾಡಿಕೊಂಡು ಫೋಟೋ ತೆಗಿಸಿಕೊಂಡಿದ್ದಾಳೆ.

ಟೇಬಲ್ ಮೇಲೆ ಏನಿದೆ? ಲವ್ ಬರ್ಡ್ಸ್ ಆರ್ಟಿಕಲ್!

ಅವಳು ''ಇದು ನಮ್ಮಿಬ್ಬರ ಪ್ರಣಯ ಸಂಗಮದ ನೆನಪಿಗಾಗಿ'' ಎಂದು ಹೇಳಿ ಪ್ರಸೆಂಟ್ ಮಾಡಿದ್ದಳು. ರಾತ್ರಿ ವೇಳೆ ಆಗಾಗ ಫೋನ್ ಮಾಡಿ ಲವ್ ಎಮೋಷನಲ್ ರೀತಿ ಮಾತಾಡುತ್ತಿದ್ದಳು. ಇಷ್ಟೆಲ್ಲಾ ಆಗಿರುವಾಗ ಅವನು ಲವ್ ಭ್ರಮೆಗೆ ಒಳಗಾಗುವುದು ಸಹಜ. ಆದರೆ ಈಗವಳು ಉಲ್ಟಾ ಹೊಡೆಯುತ್ತಿದ್ದಾಳೆ. ಇಲ್ಲ... ಇಲ್ಲ... ಅವನಿಂದ ಆಗುತ್ತಿಲ್ಲ. ಪುನಹ ಫೋನ್ ಮಾಡಿದನು. ನೋ ರೆಸ್ಪಾನ್ಸ್! ಫೈನಲ್ ಆಗಿ ಮೆಸೇಜ್ ಮಾಡಿದನು.

ಅಶ್ವಿನಿ... ನೀನು ನನ್ನ ಪ್ರೇಮದೇವತೆ. ನಿನ್ನ ಪ್ರೀತಿಯ ಸನಿಹ, ಸಾಂಗತ್ಯ ಇಲ್ಲದೆ ನಾನು ಖಂಡಿತಾ ಜೀವಂತವಾಗಿರಲಾರೆ.

ನಾನೊಂದು ತೀರ್ಮಾನಕ್ಕೆ ಬಂದಿದ್ದೇನೆ. ನಮ್ಮಿಬ್ಬರ ಲವ್ ಬಗ್ಗೆ ಪತ್ರ ಬರೆಯುತ್ತೇನೆ. ನಾವು ಜೊತೆಯಾಗಿ ತೆಗೆಸಿಕೊಂಡಿರುವ ಫೋಟೋಗಳನ್ನ ಮತ್ತು ನೀನು ಮಾಡಿರುವ ಲವ್ ಮೆಸೇಜ್‌ಗಳನ್ನು ಮತ್ತು ಆರು ಸಲ ನೀನು ಫೋನ್ ಮಾಡಿ ಆಡಿರುವ ಪ್ರೇಮ ಸಂಭಾಷಣೆಯನ್ನು ರೆಕಾರ್ಡ್ ಮಾಡಿದ್ದೇನೆ. ಸಾವಿನೊಂದಿಗೆ ಇದನ್ನೆಲ್ಲಾ ಆತ್ಮಹತ್ಯೆ ಪತ್ರದೊಂದಿಗೆ ಬಹಿರಂಗ ಮಾಡ್ತೀನಿ. ನನ್ನ ಸಾವಿಗೆ ಕಾರಣ ನೀನು. ನಿನ್ನ ಲವ್‌ಗೇಮ್!

●●●

ಫೈನಲ್ ಮೆಸೇಜ್ ಕಳಿಸಿ ಎರಡು ಗಂಟೆಗಳಾದರೂ ಫೋನ್ ಕಾಲ್ ಬರಲಿಲ್ಲ. ಅವಳು ಪ್ರತಿಕ್ರಿಯೆ ನೀಡಿಲ್ಲ.

ಅವನು ಆತ್ಮಹತ್ಯೆ ಮಾಡಿಕೊಳ್ಳಲು ಸಿದ್ದನಾಗಿದ್ದಾನೆ. ಟೇಬಲ್ ಮೇಲೆ ಸಣ್ಣ ಸ್ಟೂಲ್ ಇಟ್ಟು, ಫ್ಯಾನಿನ ಕೊಂಡಿಗೆ ಹಗ್ಗ ಬಿಗಿದು ನೇಣು ಹಾಕಿಕೊಳ್ಳಲು ಸಿದ್ದನಾಗುತ್ತಿದ್ದಾನೆ.

ಅವಳಿಗೆ ಈ ದೃಶ್ಯದ ಫೋಟೋ ತೆಗೆದು ಕಳಿಸಿದನು.

ಅಂತಿಮ ಸಂದೇಶ ಏನು?

ಅಶ್ವಿನಿ... ನಿನ್ನಂತ ಚೆಲುವೆನಾ ಪ್ರೀತಿಸಿ ಮದುವೆ ಆಗುವ ಅವಕಾಶ ಈ ಜನ್ಮದಲ್ಲಿ ಸಿಗಲಿಲ್ಲ. ಅದು ಮುಂದಿನ ಜನ್ಮದಲ್ಲಾದರೂ ಸಿಗಲಿ. ಗುಡ್‌ಬೈ ಫಾರ್ ಎವರ್!

●●●

ಬೇವಿನ ಗುಡ್ಡ...! ಸಂಜೆ ಆರು ಗಂಟೆ. ಪ್ರಕೃತಿ ಸೌಂದರ್ಯ ರಾರಾಜಿಸುತ್ತಿದೆ. ಕಲ್ಲಿನ ಮಂಟಪ ಇದೆ! ನೆಲದ ಹಾಸಿನ ಮೇಲೆ ಜಮಖಾನ ಹಾಕಲಾಗಿದೆ. ದಿಂಬುಗಳು, ಹೊದಿಕೆಗಳಿವೆ.

ಎರಡು ಪವರ್ ಫುಲ್ ಬ್ಯಾಟರಿ ಲೈಟ್‌ಗಳಿವೆ. ಬಿಯರ್ ಮತ್ತು ಹಾಟ್ ಡ್ರಿಂಕ್ಸ್ ಸೀಸೆಗಳು ಮತ್ತು ನೀಲಿನ ಬಾಟಲ್‌ಗಳಿವೆ. ನಾಟಿ ಕೋಳಿ ಐಟಂಗಳಿವೆ. ಎರಡು ರೀತಿಯ ಸಿಹಿ ತಿಂಡಿಗಳಿವೆ. ಫ್ರೂಟ್ ಸಾಲಡ್ ವಿತ್ ಐಸ್‌ಕ್ರೀಂ. ಎಲ್ಲಾ ರೆಡಿಯಾಗಿದೆ. ಅವಳು ಮೊದಲೇ ಬೇವಿನಗುಡ್ಡಕ್ಕೆ ಕಾರಲ್ಲಿ ಬಂದಿದ್ದಾಳೆ. ಜೀಪು, ಕಾರು ಓಡಾಡುವಷ್ಟು ಬೆಟ್ಟಕ್ಕೆ ರಸ್ತೆ ಮಾಡಲಾಗಿದೆ. ಅವಳು ಕಾರಲ್ಲಿ ಅಲ್ಲಿಗೆ ಬಂದು, ಕಲ್ಲಿನ ಮಂಟಪದಲ್ಲಿ ಎಲ್ಲಾ ಜೋಡಿಸಿ ಕಾಯುತ್ತಿದ್ದಾಳೆ.

ಅವಳ ಹತ್ತಿರ ವ್ಯಾನಿಟಿ ಬ್ಯಾಗಿದೆ. ಅದರಲ್ಲಿ ಬೇರೊಂದು ಸೀಸೆ ಇದೆ. ಅವಳಲ್ಲಿ ಆತಂಕವಾಗಿದೆ. ಕಲ್ಲಿನ ಮಂಟಪದಿಂದ ದೂರಕ್ಕೆ ಕತ್ತು ತೂರಿಸಿ ಅವನು ಬರುತ್ತಿದ್ದಾನೇನೋ ಎಂದು ನೋಡುತ್ತಿದ್ದಾಳೆ.

ಅವನಿನ್ನೂ ಬಂದಿಲ್ಲ! ಅವಳ ಕಾರಲ್ಲಿ ಅಗತ್ಯವಾಗಿರುವ ಎಲ್ಲವನ್ನೂ ಹಾಕಿಕೊಂಡು ಬಂದಿದ್ದಳು. ಸಂಜೆ ಆರೂವರೆ. ಮಬ್ಬುಗತ್ತಲಾವರಿಸುತ್ತಿದೆ. ಅವಳಿಗೆ ಒಬ್ಬಳೇ ಇರಲು ಭಯವಾಗುತ್ತಿದೆ. ಅವಳು ಈಗ ಮೊಬೈಲ್ ಎತ್ತಿಕೊಂಡು ಅವನಿಗೆ ಫೋನ್ ಮಾಡಿದಳು. ನಾಟ್ ರೀಚಬಲ್ ಆಗಿದೆ. ಮುಂದೇನು ಗತಿ? ಒಂದು ವೇಳೆ ಶ್ರೀವತ್ಸ ನನ್ನ ಮಾತಿನ ಮೇಲೆ ನಂಬಿಕೆ ಇಲ್ಲದೆ ಸತ್ತಿದ್ದಾನ? ಅವಳಿಗೆ ಭಯದ ಜೊತೆಗೆ ಒಂದು ರೀತಿಯ ಉದ್ವಿಗ್ನತೆ ಉಂಟಾಗಿದೆ.

ಆ ದೃಶ್ಯ ಕಂಡಿತು. ಗಾಳಿಯಲ್ಲಿ ತೂರಿಕೊಂಡು ಬಂದ ಗುಲಾಬಿ ಹೂವು ಇವಳ ಮೈಮೇಲೆ ಬಿದ್ದಿತು. ಆ ಕಡೆ ನೋಡಿದಳು. ಶ್ರೀವತ್ಸ ಬರುತ್ತಿದ್ದಾನೆ. ಹೂವಿನ ಬೊಕೆ ಹಿಡಿದಿದ್ದಾನೆ.

ಬಾಹ್ಯರೂಪವಾಗಿ ಅವನಲ್ಲಿ ಯಾವ ರೀತಿಯ ಆಕರ್ಷಣೆ ಇರಲಿಲ್ಲ. ಅಯ್ಯೋ... ಇವನ ಅಂದ-ಚೆಂದ ಕಟ್ಟಿಕೊಂಡು ನನಗೇನಾಗಬೇಕಾಗಿದೆ ಎಂದುಕೊಂಡು ಎದ್ದು ಅವನ ಕಡೆ ಬೇಗ ಬೇಗ ಹೆಜ್ಜೆ ಹಾಕಿದಳು.

ಅವನು ಭಾವುಕನಾಗಿದ್ದಾನೆ. ಅವಳು ಓಡಿ ಹೋಗಿ ಅವನನ್ನು ತಬ್ಬಿಕೊಂಡು ಮುಖದ ತುಂಬಾ ಚುಂಬಿಸಿದಳು. ಅವನ ತುಟಿಗಳಿಗೆ ತುಟಿ ಕೊಟ್ಟಳು. ಅವನು ಕೆರಳಿದ್ದಾನೆ. ತಾನು ಇಷ್ಟಪಟ್ಟಿರುವ ಹೆಣ್ಣಿನ ಸುಂದರವಾದ ಜೇನು ತುಟಿಗಳನ್ನು ದೀರ್ಘಕಾಲ ಚುಂಬಿಸಿದನು. ಅವನಿಂದ ದೂರ ಸರಿದಳು.

''ಏ ಶ್ರೀವತ್ಸ... ಸಾರಿ... ಸಾರಿ ಕಣೋ. ನಿನ್ನ ಪ್ರೀತಿ ಇಷ್ಟೊಂದು ನಿಜವಾಗಿದೆ. ನನಗಾಗಿ ಪ್ರಾಣತ್ಯಾಗ ಮಾಡಲು ಸಿದ್ದನಾಗಿದ್ದೀಯ. ನಾನು ಬದಲಾಗಿದ್ದು ಈ ಕಾರಣದಿಂದ. ನನ್ನ ಹೃದಯದಲ್ಲಿ ನಿನಗಾಗಿ ಪ್ರೀತಿ ಅರಳಿತು. ಈ ಕ್ಷಣದಿಂದ ನಾನು ಎಂದೂ ನಿನ್ನವಳು ಮೈ ಡಿಯರ್ ಶ್ರೀವತ್ಸ'' ಎಂದು ಹೇಳಿ ಅವನನ್ನು ಪುನಹ ತಬ್ಬಿಕೊಂಡು ಮುಖ, ಕತ್ತು ಮತ್ತು ಎದೆಭಾಗ ಸವರಿದಳು.

ಅವರಿಬ್ಬರು ಈಗ ಕಲ್ಲಿನ ಮಂಟಪದ ಹತ್ತಿರ ಬಂದರು. ಹಾಸಿಗೆ ಮೇಲೆ ಕುಳಿತಿದ್ದಾರೆ. ಅವಳು ಅವನ ಕೈ ಹಿಡಿದು ಎಳೆದು ತನ್ನ ಮುಖದ ತುಂಬಾ ಸವರಿಕೊಳ್ಳುತ್ತಾ ''ಇವತ್ತು ಹುಣ್ಣಿಮೆ ಬೆಳದಿಂಗಳು, ತಂಗಾಳಿ ಸೊಗಸಾಗಿದೆ. ನಾವು ಈ ರಾತ್ರಿ ಪೂರ್ತಿ ಪ್ರೇಮ ಮಿಲನೋತ್ಸವದ ಅನುಭವ ಮಾಡಿಕೊಳ್ಳೋಣ.''

ಅವನು ಆಶ್ಚರ್ಯದಿಂದ 'ಏನು... ಏನು ಮದುವೆಗೆ ಮೊದಲೆನಾ...''

''ಪ್ರೀತಿಸುತ್ತಿರುವ ನಾವಿಬ್ಬರು ಮದುವೆ ಆಗೋದು ಗ್ಯಾರಂಟಿ. ಜೀವನ ಪೂರ್ತಿ ನೆನಪಿರುವ ರೀತಿಯಲ್ಲಿ ಪ್ರಣಯ-ಶೃಂಗಾರದಾಟ ಆಡೋಣ'' ಎಂದು ತಬ್ಬಿಕೊಂಡಳು. ಪುನಹ ಚುಂಬಿಸಿದಳು. ಎರಡು ಗ್ಲಾಸುಗಳಿಗೆ ವಿಸ್ಕಿ ಮತ್ತು ಬಿಯರ್ ಸುರಿದು ಕಾಕ್‌ಟೈಲ್ ಮಾಡಿದಳು.

''ಏ... ಶ್ರೀವತ್ಸ... ಆ ಗಿಡದಲ್ಲಿರೋ ಗುಲಾಬಿ ಹೂವನ್ನು ತಂದು ನನಗೆ ಮುಡಿಸು. ನಿನ್ನ ಪ್ರೀತಿ ಮತ್ತು ಮೊದಲ ಮಿಲನಕ್ಕೆ ಈ ಗುಲಾಬಿ ಸಾಕ್ಷಿಯಾಗಲಿ.''

ಅವನು ಉತ್ಸಾಹದಿಂದ ಹೊರಟನು. ಹೊರಡುವ ಮೊದಲು ಅವಳ ಕೆನ್ನೆಗೆ ತುಂಬಾ ಗಾಢವಾಗಿ ಮುತ್ತಿಟ್ಟನು. ಅತ್ತ ಕಡೆ ಹೋಗುತ್ತಿದ್ದಾನೆ. ಅವಳು ಸರ್ರನೆ ವ್ಯಾನಿಟಿ ಬ್ಯಾಗ್‌ನಲ್ಲಿ ಕೈ ತೂರಿಸಿದಳು ಅದು ಕೈಗೆ ತಗುಲಿತು. ಅವಳು ಚುರುಕಾದಳು. ಶ್ರೀವತ್ಸ ಗುಲಾಬಿ ತಂದು ಅವಳಿಗೆ ಮುಡಿಸಿ ಬಿಗಿಯಾಗಿ ತಬ್ಬಿಕೊಂಡು, ಅವಳ ಮುದ್ದಾದ ಮುಖದ ತುಂಬಾ ಗ್ಯಾಪ್ ಕೊಡದ ರೀತಿಯಲ್ಲಿ ಮುದ್ದಾಡಿದನು. ಅವಳು ದೂರ ಸರಿದಳು.

ಬಿಯರ್ ತುಂಬಿರುವ ಗ್ಲಾಸನ್ನು ಎಡಗೈನಲ್ಲಿ ಹಿಡಿದು, ಬಲಗೈನಿಂದ ಫ್ರೈ ಮಾಡಿರುವ ಚಿಕನ್ ಹಿಡಿದು ಬಾಗಿದಳು.

''ನನಗೆ ಇದೆಲ್ಲಾ ಅಭ್ಯಾಸ ಇಲ್ಲ.''

''ನನಗಾಗಿ ಅಭ್ಯಾಸ ಮಾಡಿಕೊಳ್ಳಬೇಕು.''

ಅವಳು ಅವನ ಕತ್ತು , ಎದೆ ಸವರುತ್ತಾ , ಆಗಾಗ ಕೆನ್ನೆ ಮುತ್ತಿಡುತ್ತಾ ಕುಡಿಸಿದಳು. ವಗರು... ಅಬ್ಬ ವಗರು. ಅವನು ಮುಖ ಹಿಂಡಿದನು. ಪೂರ್ತಿ ಕುಡಿಸಿದಳು. ಚಿಕನ್ ತಿನ್ನಿಸಿದಳು. ಅವನ ಜೊತೆ ರೋಮ್ಯಾನ್ಸ್ ಮಾಡುತ್ತಾ ಪುನಹ ಕುಡಿಸಿದಳು. ಅವಳ ಮುಖದಲ್ಲಿ ನಗುವಿದೆ. ನಗುವಿನಲ್ಲಿ ಸೌಂದರ್ಯ ಇರಲಿಲ್ಲ. ಶೀತಲ ಕ್ರೌರ್ಯ ತುಂಬಿದೆ. ಅವನಿಂದ ದೂರ ಸರಿದು ಎದೆಗೆ ಬಲವಾಗಿ ಜಾಡಿಸಿದಳು.

ತೂರಾಡುತ್ತಿದ್ದ ಅವನು ದಬಾಲನೆ ನೆಲದ ಮೇಲೆ ಬಿದ್ದಳು. ಅವನ ಮುಖಧ ಮೇಲೆ ಹೈಹಿಲ್ಡ್ ಚಪ್ಪಲಿ ಹಾಕಿರುವ ಕಾಲಿನಿಂದ ತಿವಿಯುತ್ತಾ ''ಏನೋ... ಏನೋ ಲೋಫರ್... ಆತ್ಮಹತ್ಯೆ ಮಾಡಿಕೊಳ್ತೀನಿ ಅಂತ ನಾಟಕ ಆಡ್ತೀಯ. ಏ ಇದು ಬಹಿರಂಗ ಆಗಬಾರದು ಅಂತ ನಿನ್ನನ್ನು ಪ್ರೀತಿಸುತ್ತಿರುವ ರೀತಿಯಲ್ಲಿ ನಾಟಕ ಆಡಿ ಇಲ್ಲಿಗೆ ಕರೆಸಿಕೊಂಡೆ. ನಿನ್ನಂತ ತಿರುಬೋಕಿನ ಲವ್ ಮಾಡ್ಬೇಕ. ಏನೋ ಫೂಲ್ ನನ್ನನ್ನ ಮದುವೆ ಆಗ್ಬೇಕಾ ಎಂದು ಎದೆಗೆ ಜಾಡಿಸಿದಳು.

ವಿಸ್ಕಿ , ಬಿಯರ್‌ನಲ್ಲಿ ಬೆರೆಸಿದ್ದ ವಿಷ ಪರಿಣಾಮ ಬೀರುತ್ತಿದೆ. ಅವನು ಸಂಕಟದಿಂದ ನರಳುತ್ತಿದ್ದಾನೆ. ನೆಲದ ಮೇಲೆ ಬಿದ್ದು ಉರುಳಾಡುತ್ತಿದ್ದಾನೆ.

ಅವಳು ಕರ್ಕಶ ಸ್ವರದಲ್ಲಿ ನಗುತ್ತಾ ''ಇನ್ನು ಕೆಲವೇ ನಿಮಿಷಗಳನ್ನು ನೀನು ಸಾಯುತ್ತೀಯ ಓಕೆ. ಗುಡ್‌ಬೈ ಫಾರ್ ಎವರ್'' ಎಂದು ಹೊರಟಳು.

ಹಿಂತಿರುಗಿ ನೋಡಿದಳು. ಮರಣ ಸಂಕಟ ಪ್ರಾರಂಭವಾಗಿದೆ. ಅವಳು ವಿಕೃತವಾಗಿ ನಗಾಡಿದಳು. ಕ್ಯಾಕರಿಸಿ ಉಗಿದಳು.

●●●

ಬೆಳಗ್ಗೆ ಹನ್ನೊಂದು ಗಂಟೆ. ಕಾಲೇಜಿನ ಕಾಂಪೌಂಡ್ ಆವರಣದಲ್ಲಿ ಅಶ್ವಿನಿ ಗೆಳೆಯರ ಜೊತೆ ಉತ್ಸಾಹದಿಂದ ನಗು, ನಗುತ್ತಾ ಹರಟೆ ಹೊಡೆಯುತ್ತಿದ್ದಾಳೆ.

ಪೊಲೀಸ್ ಸೈರನ್ ಕೇಳಿಸಿತು. ಕಾಂಪೌಂಡ್ ಒಳ ಆವರಣದೊಳಗೆ ಪೊಲೀಸ್ ವಾಹನ ಪ್ರವೇಶಿಸಿತು. ವಿದ್ಯಾರ್ಥಿಗಳು ಗಾಬರಿಯಾಗಿದ್ದಾರೆ. ಪೊಲೀಸರು ಅವಳನ್ನು ಹುಡುಕುತ್ತಿದ್ದಾರೆ. ಇಲ್ಲಿಗೆ ಬರುವ ಮೊದಲೇ ಪೊಲೀಸ್ ಅಧಿಕಾರಿ ಕಾಲೇಜಿನ ಪ್ರಿನ್ಸಿಪಾಲ್‌ಗೆ ಸಂಕ್ಷಿಪ್ತವಾಗಿ ವಿಷಯ ತಿಳಿಸಿದ್ದರು.

ಕಾಲೇಜಿನ ವಿದ್ಯಾರ್ಥಿಗಳು. ಪ್ರಿನ್ಸಿಪಾಲ್-ಲೆಕ್ಚರರ್‌ಗಳು. ಎಲ್ಲರೂ ಸಹ ಹೊರಗೆ ಬಂದಿದ್ದಾರೆ. ಇಬ್ಬರು ಪಿ.ಸಿ.ಗಳು ಯುವತಿನ ಗುಂಪಿನಲ್ಲಿದ್ದ ಅಶ್ವಿನಿಯನ್ನು ಪತ್ತೆ ಮಾಡಿದ್ದರು. ಅವಳನ್ನು ಅಧಇಕಾರಿ ಮತ್ತು ಪ್ರಿನ್ಸಿಪಾಲ್ ಇರುವ ಜಾಗಕ್ಕೆ ಕರೆತರುತ್ತಿದ್ದಾರೆ.

''ಅಶ್ವಿನಿ... ಕೊಲೆ ಆರೋಪ ಖಚಿತವಾಗಿರೋದ್ರಿಂದ ನಿನ್ನನ್ನು ಅರೆಸ್ಟ್ ಮಾಡುತ್ತಿದ್ದೇನೆ'' ಎಂದು ಹೇಳುತ್ತಿರುವಾಗಲೇ ಮತ್ತೊಂದು ಜೀಪಿನಲ್ಲಿ ಲೇಡಿ ಕಾನ್‌ಸ್ಟೇಬಲ್‌ಗಳು ಬಂದರು.

ಭಯ ಮತ್ತು ಕುತೂಹಲ ಎಲ್ಲವನ್ನೂ ಕಾಡುತ್ತಿದೆ. 'ಈ ಕಾಲೇಜಿನ ವಿದ್ಯಾರ್ಥಿ ಶ್ರೀವತ್ಸನನ್ನು ನೆನ್ನೆ ರಾತ್ರಿ ಬೇವಿನಗುಡ್ಡದ ಕಲ್ಲಿನ ಮಂಟಪದಲ್ಲಿ ಕೊಲೆ ಮಾಡಿದ್ದೀಯ.''

ಅವಳು ತನ್ನ ಮೊಬೈಲ್ ಎತ್ತಿಕೊಂಡಿದ್ದಳು. ಆದರೆ ಶ್ರೀವತ್ಸ ಅವಳ ಜೊತೆ ಪ್ರಣಯದಾಟ ಆಡುವಾಗ ಮತ್ತು ಅವಳು ವಿಸ್ಕಿ ಕುಡಿಸುವಾಗ ತನ್ನ ಮೊಬೈಲ್‌ನಲ್ಲಿ ವೀಡಿಯೋ ರೆಕಾರ್ಡ್ ಮಾಡಿದ್ದನು. ಅವಳಾಡಿದ್ದ ಮಾತುಗಳು ಮತ್ತು ಎದೆಗೆ ಜಾಡಿಸಿದ್ದು ಎಲ್ಲಾ ಕವರೇಜ್ ಆಗಿತ್ತು . ಅವನ ಮೊಬೈಲ್ ಕೊನೆಯ ಕ್ಷಣಗಳಲ್ಲಿ ಇವಳು ಜಾಡಿಸಿದ್ದಾಗ, ಇವನು ನರಳುತ್ತಾ ಹೊರಳಾಡುತ್ತಿದ್ದಾಗ ದಿಂಬಿನ ಅಡಿ ಸೇರಿತ್ತು . ಅವಳು ಪೊಲೀಸರ ಕಸ್ಟಡಿಯಲ್ಲಿದ್ದಾಳೆ. ನ್ಯಾಯಾಲಯದಲ್ಲಿ ವಿಚಾರಣೆ ನಡೆಯುತ್ತಿದೆ. ☯

13 ☞ ಆದರೆ ಬಿದರಹಳ್ಳಿಯ ಶಿವು ಎಂಬಾತ ಮಂಗಳವಾರ ಬೆಳಿಗ್ಗೆ 9:30 ರ ಸಮಯದಲ್ಲಿ ರಾಮಾಪುರ ಪೊಲೀಸರಿಗೆ ಗೃಹಿಣಿ ಶೋಭಾ ಶವ ಕಂಡು ಮಾಹಿತಿ ನೀಡಿದ್ದಾರೆ. ಕ್ರೈಸ್ತ ಜನಾಂಗದವರಾದ ಈ ದಂಪತಿಗಳಿಬ್ಬರು ಕ್ರಿಸ್ಮಸ್ ಹಬ್ಬದ ಸಂಭ್ರಮದಲ್ಲಿ ತೊಡಗಿಸಿಕೊಂಡು ಖುಷಿ ಪಡಬೇಕಾಗಿದ್ದ ವೇಳೆಯಲ್ಲಿ ಶೋಭಾ ಎಂಬ ನತದೃಷ್ಟೆ ಕೊಲೆಯಾಗಿ ಪತ್ತೆಯಾಗಿದ್ದಾಳೆ. ಈಕೆಯ ಕೆನ್ನೆಯ ಭಾಗದಲ್ಲಿ ರಕ್ತ ಹೆಪ್ಪುಗಟ್ಟಿದ್ದರಿಂದ ಇದೊಂದು ಕೊಲೆಯಾಗಿರಬೇಕೆಂದು ಪೊಲೀಸರು ಅನುಮಾನಿಸಿದ್ದಾರೆ.

ಇದರ ಬಗ್ಗೆ ಹೆಚ್ಚಿನ ಮಾಹಿತಿಗಳನ್ನು ರಾಮಾಪುರ ಪೊಲೀಸರು ಕಲೆ ಹಾಕಿ ಪ್ರಕರಣವನ್ನು ಭೇದಿಸಬೇಕಿದೆ. ಈ ಸಂಬಂಧ ರಾಮಾಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಂಡು ಮೃತೆ ಶೋಭಾಳ ಶವ ಪರೀಕ್ಷೆಯ ವರದಿ ನಂತರ ಪೊಲೀಸರು ಪ್ರಕರಣ ಭೇದಿಸುವತ್ತ ಪೊಲೀಸರು ಮುಂದಾಗಿರುವುದಾಗಿ ತಿಳಿದು ಬಂದಿದ್ದು ಒಟ್ಟಿನಲ್ಲಿ ಕ್ರಿಸ್ಮಸ್ ಹಬ್ಬ ಆಚರಣೆ ಮಾಡ ಬೇಕಾದ ಶೋಭ ಶವವಾಗಿರುವುದು ದುರಂತದಲ್ಲಿ ದುರಂತವಾಗಿದೆ. ರಾಮಾಪುರ ಪೊಲೀಸರು ತನಿಖೆ ಕೈಗೊಂಡು ಪ್ರಕರಣ ಭೇದಿಸುವತ್ತ ದಾಪುಗಾಲು ಹಾಕಿದ್ದಾರೆ. ಪೊಲೀಸರ ತನಿಖೆಯಿಂದ ನಿಖರ ಕಾರಣ ತಿಳಿದು ಬರಬೇಕಾಗಿದೆ. ☯

# ಫೆಬ್ರವರಿ 7ಕ್ಕೆ ತಲ್ವಾರ್ ಹಿಂದಿನ ಕಥೆ



ಸಮಾಜದಲ್ಲಿ ಅಥವಾ ನಮ್ಮ ಸುತ್ತಮುತ್ತ ಏನಾದರೂ ಒಂದು ಅಹಿತಕರ ಘಟನೆ ನಡೆದಾಗ ನಾವು ಸುಮ್ಮನಿರುವುದೂ ಸಹ ಅಪರಾಧವೇ, ಅದು ನಮ್ಮನ್ನು ಕಡೆವರೆಗೆ ಕಾಡುತ್ತಲೇ ಇರುತ್ತದೆ. ಏನಾದರೊಂದು ಘಟನೆ ನಡೆದಾಗ ಪಶ್ಚಾತ್ತಾಪ ಅನ್ನೋದು ಹೇಗಾಗುತ್ತೆ, ಹಣಕ್ಕಾಗಿ ಏನನ್ನಾದರೂ ಮಾಡಲು ಸಿದ್ದವಾಗಿದ್ದಂಥ ಹುಡುಗನೊಬ್ಬನ ಜೀವನದಲ್ಲಿ ಏನೇನೆಲ್ಲ ನಡೆದುಹೋಗುತ್ತದೆ ಎಂಬುದನ್ನು ನಿರ್ದೇಶಕ ಮುರಳಿ ಅವರು ತಮ್ಮ ತಲ್ವಾರ್ ಚಿತ್ರದ ಮೂಲಕ ಹೇಳಹೊರಟಿದ್ದಾರೆ. ಆ ರೀತಿಯ ಘಟನೆ ನಡೆದಾಗ ನಾಯಕನಿಗೆ ಯಾವ ರೀತಿ ಪಶ್ಚಾತ್ತಾಪವಾಗುತ್ತೆ ಎಂಬುದನ್ನೂ ಸಹ ಮುರಳಿ ಅವರು ಈ ಚಿತ್ರದಲ್ಲಿ ಹೇಳಿದ್ದಾರೆ,

ಕೆಲ ವರ್ಷಗಳ ಹಿಂದೆ ಮುಮ್ತಾಜ್ ಎಂಬ ಅಪ್ಪಟ ಪ್ರೇಮಕಥಾಹಂದರ ಇರುವ ಚಿತ್ರವನ್ನು ನಿರ್ದೇಶಿಸಿದ್ದ ಮುರಳಿ ಅವರು ಈಸಲ ತಲ್ವಾರ್ ಹಿಡಿದುಕೊಂಡು ಸೆಂಟಿಮೆಂಟ್ ಜತೆಗೆ ಮಾಸ್ ಎಂಟರ್‌ಟೈನರ್ ಕಥೆಯೊಂದನ್ನು ಹೇಳೋ ಪ್ರಯತ್ನ ಮಾಡಿದ್ದಾರೆ. ತಲ್ವಾರ್ ಚಿತ್ರದಲ್ಲಿ ಯುವನಟ ಧರ್ಮ ಕೀರ್ತಿರಾಜ್ ನಾಯಕನಾಗಿ ಮಾಸ್ ಅವತಾರದಲ್ಲಿ ಕಾಣಿಸಿಕೊಂಡಿದ್ದಾರೆ, ಈ ಚಿತ್ರ ಫೆಬ್ರವರಿ ತಿಂಗಳ 7ರಂದು ರಾಜ್ಯಾದ್ಯಂತ ಬಿಡುಗಡೆಯಾಗುತ್ತಿದೆ, ಮಾಸ್ ಕಂಟೆಂಟ್ ಒಳಗೊಂಡಿರುವ ಈ ಚಿತ್ರದ ಪಲ್ ಮರುಕಳಿಸಿತೇನೋ.. ಎಂಬ ಮಧುರ ಗೀತೆ ಸರಿಗಮ ಕನ್ನಡ ಯೂಟ್ಯೂಬ್ ಚಾನೆಲ್‌ನಲ್ಲಿ ರಿಲೀಸಾಗಿದ್ದು ಅತಿಹೆಚ್ಚು ವೀಕ್ಷಣೆಯಾಗುವ ಮೂಲಕ ಸಖತ್ ವೈರಲ್ ಆಗಿದೆ. ಜತೆಗೆ ಚಿತ್ರದ ಟೀಸರ್ ಕೂಡ ಪ್ರೇಕ್ಷಕರಲ್ಲಿ ಹೊಸ ಕುತೂಹಲ ಮೂಡಿಸಿದೆ.

ಟಚ್ ಸ್ಟೋನ್ ಪಿಕ್ಚರ್ಸ್ ಬ್ಯಾನರ್ ಅಡಿಯಲ್ಲಿ ಈ ಚಿತ್ರವನ್ನು ಹಿರಿಯ ಛಾಯಾಗ್ರಾಹಕ ಸುರೇಶ್ ಬೈರಸಂದ್ರ ಅವರು ಅದ್ದೂರಿಯಾಗಿ ನಿರ್ಮಾಣ ಮಾಡಿದ್ದಾರೆ. ಕನ್ನಡದ ಹಲವಾರು ಸ್ಟಾರ್ ನಟರಿಗೆ ಕ್ಯಾಮೆರಾ ಹಿಡಿದಿರುವ ಸುರೇಶ್ ಬೈರಸಂದ್ರ ಅವರು ಉತ್ತಮ ಛಾಯಾಗ್ರಾಹಕರಾಗಿ ಗುರುತಿಸಿಕೊಂಡಿದ್ದಾರೆ, ಇದೇ ಮೊದಲ ಬಾರಿಗೆ ನಿರ್ಮಾಪಕರಾಗುವ ಮೂಲಕ ಚಿತ್ರರಂಗದಲ್ಲಿ ಹೊಸ ಹೆಜ್ಜೆಯನ್ನು ಇಟ್ಟಿದ್ದಾರೆ. ಮುರಳಿ ಅವರು ಈ ಹಿಂದೆ ಮುಮ್ತಾಜ್ ಅಲ್ಲದೆ ಮತ್ತೊಂದು ಚಿತ್ರವನ್ನು ನಿರ್ದೇಶಿಸಿದ್ದು ಇದು ಅವರ ಮೂರನೇ ಚಿತ್ರ. ಚಿತ್ರಕ್ಕೆ ಕಥೆ, ಚಿತ್ರಕಥೆ ಬರೆದು ಆ್ಯಕ್ಷನ್-ಕಟ್ ಹೇಳಿದ್ದಾರೆ. ಚಿತ್ರದ ಕುರಿತಂತೆ ಮಾತನಾಡಿದ ಧರ್ಮ ಕೀರ್ತಿರಾಜ್, ತಲ್ವಾರ್ ಎಂದಕೂಡಲೇ ಬರೀ ಆ್ಯಕ್ಷನ್ ಚಿತ್ರ ಎಂದುಕೊಳ್ಳಬೇಕಿಲ್ಲ, ಅದರ ಜತೆಗ ಮನಕಲಕುವ ಮದರ್ ಸೆಂಟಿಮೆಂಟ್ ಕಥೆಯೂ ಚಿತ್ರದಲ್ಲಿದೆ, ಈ ಚಿತ್ರದ ಮೂಲಕ ನಿರ್ದೇಶಕ ಮುರಳಿ ಅವರು ನನಗೆ ಬೇರೆಯದೇ ಇಮೇಜ್ ನೀಡಿದ್ದಾರೆ.

ಸದ್ಯದಲ್ಲೇ ತಲ್ವಾರ್ ಚಿತ್ರದ ಟ್ರೈಲರ್ ಸಿನಿಮಾ ಕುರಿತಂತೆ ಮಾತನಾಡಿರುವ ನಿರ್ದೇಶಕ ಮುರಳಿ ರೌಡಿಸಂ ಹಾಗೂ ಸಂಬಂಧಗಳ ಸುತ್ತ ನಡೆವ ಕಥೆ ಇಟ್ಟುಕೊಂಡು ನಾನು ಈ ಚಿತ್ರವನ್ನು ನಿರ್ದೇಶನ ಮಾಡಿದ್ದೇನೆ. ಇದು ನನ್ನ ಮೂರನೇ ಚಿತ್ರ, ನಾನು ಹಾಸ್ಟೆಲ್‌ನಲ್ಲಿ ಓದುತ್ತಿದ್ದಾಗ ನಡೆದ ನೈಜ ಘಟನೆಯೊಂದನ್ನು ತೆಗೆದುಕೊಂಡು ಈ ಚಿತ್ರಕಥೆ ಮಾಡಿದ್ದೇನೆ. ಮುಮ್ತಾಜ್ ನಂತರ ಮತ್ತೊಮ್ಮೆ ಧರ್ಮ ಕೀರ್ತಿರಾಜ್ ಅವರ ಜೊತೆ ಕೆಲಸ ಮಾಡಿದ್ದು ತೃಪ್ತಿ ತಂದಿದೆ. ಅವರು ನಿರ್ದೇಶಕರ ನಟ, ಅದ್ಭುತವಾಗಿ ಅಭಿನಯಿಸಿದ್ದಾರೆ, ಜತೆಗೆ ಅವರು ತುಂಬಾ ಡಿಫರೆಂಟ್ ಆಗಿ ಕಾಣಿಸಿಕೊಂಡಿದ್ದಾರೆ. ನಾಲ್ಕು ಪ್ರಮುಖ ಆ್ಯಕ್ಷನ್ ದೃಶ್ಯಗಳು ಈ ಚಿತ್ರದ ಹೈಲೈಟ್ ಎನ್ನಬಹುದು. ಸದ್ಯದಲ್ಲೇ ನಮ್ಮ ಚಿತ್ರದ ಟ್ರೇಲರನ್ನು ಬಿಡುಗಡೆ ಮಾಡುತ್ತಿದ್ದೇವೆ ಎಂದು ಹೇಳಿದರು. ಪ್ರವೀಣ್ ಕೆ.ಬಿ. ಅವರು ಈ ಚಿತ್ರದ ಹಾಡುಗಳಿಗೆ ಸಂಗೀತ ಸಂಯೋಜನೆ ಮಾಡಿದ್ದಾರೆ. ಈ ಚಿತ್ರದಲ್ಲಿ ನಾಯಕಿಯಾಗಿ ಅದಿತಿ ಅವರು ಅಭಿನಯಿಸಿದ್ದು, ಅವರ ಪಾತ್ರಕ್ಕೆ ಎರಡು ಶೇಡ್ ಇದೆ. ಉಳಿದಂತೆ ಬಿಗ್ ಬಾಸ್ ಖ್ಯಾತಿಯ ನಟ ಜಯರಾಮ್ ಕಾರ್ತೀಕ್ (ಜೆಕೆ), ಶರತ್ ಲೋಹಿತಾಶ್ವ ಮಜಾಭಾರತ ಅವಿನಾಶ್ ಮುಂತಾದವರಿದ್ದಾರೆ. ☯

# ಯುಗಾದಿ ವೇಳೆಗೆ ಗ್ಯಾಂಗ್ಸ್ ಆಫ್ ಯುಕೆ

ಡೆಡ್ಲಿ ಸೋಮ, ಮಾದೇಶದಂಥ ಯಶಸ್ವೀ ಚಿತ್ರಗಳಿಗೆ ಆಕ್ಷನ್ ಕಟ್ ಹೇಳಿದ ನಿರ್ದೇಶಕ ರವಿ ಶ್ರೀವತ್ಸ ಅವರೀಗ ನಿರ್ಮಾಪಕರಾಗಿದ್ದಾರೆ, ತಾವೇ ನಿರ್ದೇಶನ ಮಾಡುತ್ತಿರುವ ನೂತನ ಚಿತ್ರ ಗ್ಯಾಂಗ್ಸ್ ಆಫ್ ಯುಕೆಗೆ ಬಂಡವಾಳ ಹೂಡೋ ಮೂಲಕ ಪ್ರೊಡ್ಯೂಸರ್ ಸಹ ಆಗಿದ್ದಾರೆ. 2025ರ ಯುಗಾದಿ ಹಬ್ಬದ ವೇಳೆಗೆ 'ಗ್ಯಾಂಗ್ಸ್ ಆಫ್ ಯುಕೆ' ಚಿತ್ರವು ರಾಜ್ಯಾದ್ಯಂತ ಅದ್ದೂರಿಯಾಗಿ ತೆರೆ ಕಾಣಲಿದೆ. ರವಿ ಶ್ರೀವತ್ಸ ಅವರು ತಮ್ಮದೇ ಆದ ಡೆಡ್ಲಿ ಆರ್ಟ್ಸ್ ಎಂಬ ಹೊಸ ನಿರ್ಮಾಣ ಸಂಸ್ಥೆಯೊಂದನ್ನು ಸ್ಥಾಪಿಸಿದ್ದು, ಆ ಬ್ಯಾನರ್‌ನ ಮೊದಲ ಕೊಡುಗೆಯಾಗಿ 'ಗ್ಯಾಂಗ್ಸ್ ಆಫ್ ಯುಕೆ' ಚಿತ್ರವನ್ನು ನಿರ್ಮಿಸುತ್ತಿದ್ದಾರೆ. ಜತೆಗೆ ಈ ಚಿತ್ರದಲ್ಲಿ ಸಾಕಷ್ಟು ಹೊಸ ಪ್ರತಿಭೆಗಳಿಗೆ ಅವಕಾಶ ನೀಡಿ ಬೆಳೆಸಿದ್ದಾರೆ.

ಬಾಗಲಕೋಟೆಯ ಪಿಲ್ಲಾರಿ ಫಾಲ್ಸ್‌ನಲ್ಲಿ ನಡೆದ ನೈಜಘಟನೆಯೊಂದನ್ನು ಇಟ್ಟುಕೊಂಡು ರವಿ ಶ್ರೀವತ್ಸ ಅವರು 'ಗ್ಯಾಂಗ್ಸ್ ಆಫ್ ಯುಕೆ' ಚಿತ್ರದ ಕಥೆಯನ್ನು ರೆಡಿ ಮಾಡಿಕೊಂಡಿದ್ದಾರೆ. ರಕ್ತ ತನ್ನ ಕುರುಹನ್ನು ಬಿಟ್ಟು ಹೋಗುತ್ತೆ, ಜಿದ್ದು ಒಬ್ಬರಿಂದ ಒಬ್ಬರಿಗೆ ಟ್ರಾವೆಲ್ ಆಗುತ್ತೆ ಅನ್ನೋ ಕಾನ್ಸೆಪ್ಟ್ ಮೇಲೆ ಈ ಚಿತ್ರದ ಕಥಾಹಂದರ ಸಾಗುತ್ತದೆ. ಉತ್ತರ ಕರ್ನಾಟಕದ ಹತ್ಯಾಕಾಂಡ ಎಂಬ ಟ್ಯಾಗ್ ಲೈನ್ ಈ ಚಿತ್ರಕ್ಕಿದೆ. ಚಿತ್ರರಂಗದಲ್ಲಿ ಹೆಣ್ಣುಮಕ್ಕಳಿಗೆ ಪ್ರಾಧಾನ್ಯತೆಯಿಲ್ಲ ಎನ್ನುವವರಿಗೆ ಗ್ಯಾಂಗ್ಸ್ ಆಫ್ ಯುಕೆ ಚಿತ್ರವು ಉತ್ತರವಾಗಲಿದೆ.

ಎಂ.ಎಸ್. ರಮೇಶ್ ಅವರ ಜತೆ ಸೇರಿ ಈ ಚಿತ್ರಕಥೆಯನ್ನು ರೆಡಿ ಮಾಡಿಕೊಂಡಿರುವ ರವಿ ಶ್ರೀವತ್ಸ ಅವರು 56 ಜನ ಕಲಾವಿದರಲ್ಲಿ ಬಹುತೇಕ ಹೊಸಬರಿಗೇ ಅವಕಾಶ ನೀಡಿದ್ದಾರೆ. ಒರಟ ಪ್ರಶಾಂತ್, ಜ್ಯೋತಿ ಶೆಟ್ಟಿ, ಕೋಟೆ ಪ್ರಭಾಕರ್, ಪದ್ಮಾ ವಾಸಂತಿ, ಮುನಿ ಹೀಗೆ ಹೊಸಬರ ಜೊತೆ ಹಳಬರೂ ಸಹ ಈ ಚಿತ್ರದಲ್ಲಿ ನಟಿಸಿದ್ದಾರೆ. ಸದ್ಯ ಈ ಚಿತ್ರದ ಪೋಸ್ಟ್ ಪ್ರೊಡಕ್ಷನ್ ಕೆಲಸಗಳು ಕೊನೇ ಹಂತದಲ್ಲಿದ್ದು, ಶೀಘ್ರವೇ ಚಿತ್ರದ ಫಸ್ಟ್ ಕಾಪಿ ಹೊರಬರಲಿದೆ. ನಿರ್ಮಾಪಕರಾಗಿ ಲಕ್ಷ್ಮಿ ನಾರಾಯಣ್ ಅವರು ರವಿ ಶ್ರೀವತ್ಸ ಅವರ ಜೊತೆ ಕೈಜೋಡಿಸಿದ್ದಾರೆ. ಆರ್.ಗಿರಿ ಅವರ ಛಾಯಾಗ್ರಹಣ, ಲಕ್ಷ್ಮಣ್ ರೆಡ್ಡಿ ಅವರ ಸಂಕಲನ, ಥ್ರಿಲ್ಲರ್ ಮಂಜು, ಡಿಫರೆಂಟ್ ಡ್ಯಾನಿ ಅವರ ಸಾಹಸ ಸಂಯೋಜನೆ ಈ ಚಿತ್ರಕ್ಕಿದೆ. ವಿಶೇಷವಾಗಿ ಸಂತ ಶಿಶುನಾಳ ಷರೀಫರ ಕೆಲ ಗೀತೆಗಳನ್ನು ಚಿತ್ರಕ್ಕಾಗಿ ಬಳಸಿಕೊಳ್ಳಲಾಗಿದ್ದು, ಒಟ್ಟು 9 ಹಾಡುಗಳು 'ಗ್ಯಾಂಗ್ಸ್ ಆಫ್ ಯುಕೆ' ಚಿತ್ರದಲ್ಲಿವೆ. ಸಾಧು ಕೋಕಿಲ ಅವರು ಈ ಚಿತ್ರದ ಮ್ಯೂಸಿಕ್ ಕಂಪೋಜ್ ಮಾಡಿದ್ದಾರೆ.

ಕೆವಿ.ರಾಜು ಅವರ ಪುತ್ರ ಅಮೋಘ್ ಈ ಚಿತ್ರದ ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಸೋನು ಉಪಾಧ್ಯ, ಪ್ರವೀಣ್, ಉಗ್ರಂ ರೆಡ್ಡಿ, ಸತ್ಯ, ಧಿಲ್ಲಾನ್, ನವೀನ್, ಪ್ರಜ್ವಲ್ ಮಸ್ಕಿ, ಉಮೇಶ್, ವಿಕಾಸ್, ಟಂಕಸಾಲೆ ಉಮೇಶ್, ಮಹಂತೇಶ್ ಹುಲ್ಲೂರು ಸೇರಿ ಒಂದಷ್ಟು ಸ್ಥಳೀಯ ಪ್ರತಿಭೆಗಳನ್ನು ಚಿತ್ರದಲ್ಲಿ ಬಳಸಿಕೊಳ್ಳಲಾಗಿದ್ದು, ಪತ್ರಕರ್ತ ನವೀನ್ ಬಂಗಾರಪ್ಪ ಭೋಸರಾಜ ಎಂಬ ರಾಜಕಾರಣಿಯಾಗಿ ಕಾಣಿಸಿಕೊಂಡಿದ್ದಾರೆ. ☯




# ಶಿವರಾತ್ರಿ ಹಬ್ಬದಂದು 'ರಾಕ್ಷಸ' ಚಿತ್ರ ಬಿಡುಗಡೆ!

ಈವರೆಗೆ 36ಕ್ಕೂ ಹೆಚ್ಚು ಚಿತ್ರಗಳಲ್ಲಿ ಕಾಣಿಸಿಕೊಂಡಿರುವ ನಟ ಪ್ರಜ್ವಲ್ ದೇವರಾಜ್, ಇದೀಗ ಹೊಸ ಅವತಾರದಲ್ಲಿ ಕಾಣಿಸಿಕೊಳ್ಳಲಿದ್ದು, ಲೋಹಿತ್ ಹೆಚ್. ನಿರ್ದೇಶನದ ಟೈಮ್-ಲೂಪ್ ಹಾರರ್ ಚಿತ್ರ 'ರಾಕ್ಷಸ'ದೊಂದಿಗೆ ಪ್ರೇಕ್ಷಕರ ಎದುರಿಗೆ ಬರಲಿದ್ದಾರೆ. ಈ ಹಿಂದೆ ಚಿತ್ರದ ಬಿಡುಗಡೆಯನ್ನು ಮುಂದೂಡಲಾಗಿತ್ತು. ಇದೀಗ ಚಿತ್ರವು ಶಿವರಾತ್ರಿ ಹಬ್ಬದಂದು ಫೆಬ್ರುವರಿ 26ಕ್ಕೆ ಚಿತ್ರಮಂದಿರಗಳಲ್ಲಿ ತೆರೆಕಾಣಲು ಸಿದ್ಧವಾಗಿದೆ. ಮಮ್ಮಿ ಸೇವ್ ಮಿ ಮತ್ತು ದೇವಕಿ ಚಿತ್ರ ನಿರ್ದೇಶಿಸಿದ್ದ ಲೋಹಿತ್ ಅವರ ರಾಕ್ಷಸ ವಿಶಿಷ್ಟ ಪರಿಕಲ್ಪನೆಯೊಂದಿಗೆ ಮೂಡಿಬಂದಿದೆ ಎನ್ನುತ್ತದೆ ಚಿತ್ರತಂಡ.



ಚಿತ್ರದಲ್ಲಿ, ಪ್ರಜ್ವಲ್ ಅವರು ಸಮಸ್ಯೆಯ ಸುಳಿಯಲ್ಲಿ ಸಿಕ್ಕಿಬಿದ್ದ ತಂದೆಯ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಅಪರಿಚಿತ ಮತ್ತು ಭಯಾನಕ ಶಕ್ತಿಯಿಂದ ತನ್ನ ಮಗುವನ್ನು ರಕ್ಷಿಸಲು ಹತಾಶವಾಗಿ ಹೋರಾಡುತ್ತಾನೆ. ಸದ್ಯ ಟೀಸಸ್ ಬಿಡುಗಡೆಯಾಗಿದ್ದು, ಪ್ರೇಕ್ಷಕರಲ್ಲಿ ತೀವ್ರ ನಿರೀಕ್ಷೆಯನ್ನು ಹುಟ್ಟುಹಾಕಿದೆ.

ಶಾನ್ವಿ ಎಂಟರ್ಟೈನ್ಮೆಂಟ್ ಅಡಿಯಲ್ಲಿ ದೀಪು ಬಿ.ಎಸ್., ನವೀನ್ ಗೌಡ ಮತ್ತು ಮಾನಸ್ ಈ ಸಿನಿಮಾವನ್ನು ನಿರ್ಮಿಸಿದ್ದು, ನೋಬಿನ್ ಪಾಲ್ ಅವರ ಸಂಗೀತ ಸಂಯೋಜನೆ, ಜೇಬಿನ್ ಪಿ. ಜೇಕಬ್ ಅವರ ಛಾಯಾಗ್ರಹಣ, ವಿನೋದ್ ಅವರ ಸಾಹಸ ನಿರ್ದೇಶನವಿದೆ.

ಚಿತ್ರದಲ್ಲಿ ಶ್ರೀಧರ್, ಗೌತಮ್, ಸೋಮಶೇಖರ್, ವಿಹಾನ್ ಕೃಷ್ಣ, ಶೋಭರಾಜ್, ವತ್ಸಲಾ ಮೋಹನ್, ಸಿದ್ಲಿಂಗು ಶ್ರೀಧರ್ ಮತ್ತು ಅರುಣ್ ರಾಥೋಡ್ ಸೇರಿದಂತೆ ಅನೇಕ ಕಲಾವಿದರು ನಟಿಸಿದ್ದಾರೆ. ರಾಕ್ಷಸ ಸಿನಿಮಾದ ಶೇ 80 ರಷ್ಟು ಚಿತ್ರೀಕರಣ ರಾಮೋಜಿ ಫಿಲಂ ಸಿಟಿಯಲ್ಲಿ ನಡೆದಿದ್ದು, ಚಿತ್ರದ ಇನ್ನುಳಿದ ಭಾಗವನ್ನು ಬೆಂಗಳೂರಿನಲ್ಲಿ ಚಿತ್ರೀಕರಣ ನಡೆಸಲಾಗಿದೆ. ☯

POLICE NEWS REGISTERED KA/BGW-1618/2024-26 REGD. WITH RNI NO. 36669/82 PAGES : 16 POSTED AT BANGALORE PSO BG 560026 Every Tuesday Publishing Date : 5.1.2025

# ಬಾಲಿವುಡ್‌ಗೆ ಶ್ರೀಲೀಲಾ

ಟಾಲಿವುಡ್‌ನಲ್ಲಿ ಮಿಂಚಿದ ಕನ್ನಡದ ನಟಿ ಶ್ರೀಲೀಲಾ ಇದೀಗ ಬಾಲಿವುಡ್‌ಗೆ ಹೊರಟಿರುವ ಸುದ್ದಿ ಬಂದಿದೆ. ಕರಣ್ ಜೋಹರ್ ನಿರ್ಮಾಣ, ಸಮೀರ್ ವಿದ್ವಾನ್ಸ್ ನಿರ್ದೇಶನದ, ಕಾರ್ತಿಕ್ ಆರ್ಯನ್ ನಾಯಕನಾಗಿ ನಟಿಸುತ್ತಿರುವ 'ತೂ ಮೇರಿ ಮೈ ತೇರಾ, ಮೈ ತೇರಾ ತೂ ಮೇರಿ' ಚಿತ್ರದಲ್ಲಿ ಶ್ರೀಲೀಲಾ ನಾಯಕಿಯಾಗಿ ನಟಿಸುತ್ತಿದ್ದಾರೆ ಎನ್ನಲಾಗಿದೆ. ಕನ್ನಡದಿಂದ ಟಾಲಿವುಡ್‌ಗೆ ಹೋಗಿ ಅಲ್ಲಿಂದ ಹಿಂದಿ, ತಮಿಳು ಚಿತ್ರರಂಗದಲ್ಲಿ ಕಾಣಿಸಿಕೊಂಡು ಸದ್ಯಕ್ಕೆ ಬಹುಭಾಷೆಯಲ್ಲಿ ಬಹುಬೇಡಿಕೆಯ ನಟಿ ಎನಿಸಿಕೊಂಡಿರುವ ರಶ್ಮಿಕಾ ಮಂದಣ್ಣ ಅವರ ಹಾದಿಯಲ್ಲೇ ಶ್ರೀಲೀಲಾ ಕೂಡ ಹೆಜ್ಜೆ ಹಾಕುತ್ತಿದ್ದಾರೆ.





# 'ವರ್ಜಿನ್ ಹುಡುಗಿ' ಸಿಗುವುದಿಲ್ಲ ಎಂದ ಗಾಯಕಿ ಚಿನ್ಮಯಿ ಶ್ರೀಪಾದ!

ಭಾರತೀಯ ಪುರುಷರಿಗೆ ಮದುವೆಯಾಗಲು 'ವರ್ಜಿನ್ ಹುಡುಗಿಯರು' ಸಿಗುವುದಿಲ್ಲ ಎಂದು ಹೇಳಿದ ಟ್ವಿಟರ್ ಬಳಕೆದಾರರೊಬ್ಬರನ್ನು ಗಾಯಕಿ ಚಿನ್ಮಯಿ ಶ್ರೀಪಾದ ತರಾಟೆಗೆ ತೆಗೆದುಕೊಂಡಿದ್ದಾರೆ. ವರ್ಜಿನ್ ಎನ್ನುವುದು ಮಹಿಳೆಯರಿಗೆ ಮಾತ್ರ ಅನ್ವಯವಾಗುತ್ತದೆಯೇ? ಪುರುಷರಿಗೂ ಇದು ಅನ್ವಯವಾಗುವುದಿಲ್ಲವೇ ಎಂದು ಪ್ರಶ್ನಿಸಿದ್ದಾರೆ.

ಜನವರಿ 1 ರಂದು, @venom1s ಎಂಬ ಹೆಸರಿನ ಎಕ್ಸ್ ಬಳಕೆದಾರರೊಬ್ಬರು, 'Blinkit CEO' ನಿನ್ನೆ ರಾತ್ರಿ 1.2 ಲಕ್ಷ ಕಾಂಡೋಮ್‌ಗಳನ್ನು ಡೆಲಿವರಿ ಮಾಡಲಾಗಿದೆ ಎಂದು ಪೋಸ್ಟ್ ಮಾಡಿದ್ದಾರೆ. ಇದು ಕೇವಲ ಒಂದು ರಾತ್ರಿ ಮತ್ತು ಕೇವಲ Blinkitನಲ್ಲಿ ಮಾತ್ರ ಇರುವ ಲೆಕ್ಕ. ಇತರ ಇ-ಕಾಮರ್ಸ್ ಸೈಟ್‌ಗಳು ಮತ್ತು ಮಾರುಕಟ್ಟೆಯ ಮಾರಾಟವು 10 ಮಿಲಿಯನ್‌ಗಳಷ್ಟು ಹೆಚ್ಚಾಗಿರುತ್ತದೆ. 'ಈ ಪೀಳಿಗೆಯಲ್ಲಿ ಮದುವೆಯಾಗಲು ವರ್ಜಿನ್ ಹುಡುಗಿ ಸಿಕ್ಕರೆ ಅದು ಅದೃಷ್ಟ' ಎಂದು ಬರೆದುಕೊಂಡಿದ್ದರು.

ಈಗ ಡಿಲೀಟ್ ಮಾಡಿರುವ ಟ್ವೀಟ್‌ನ ಸ್ಕ್ರೀನ್‌ಶಾಟ್ ಅನ್ನು ಹಂಚಿಕೊಂಡಿರುವ ಚಿನ್ಮಯಿ, 'ಹಾಗಾದರೆ ಪುರುಷರು ಮಹಿಳೆಯರೊಂದಿಗೆ ವಿವಾಹಪೂರ್ವ ಸಂಭೋಗವನ್ನು ಹೊಂದಿರಬಾರದು'. ಯಾರಾದರೂ ವಿವಾಹಪೂರ್ವ ಲೈಂಗಿಕತೆಯ ವಿರುದ್ಧ ಕಠಿಣ ದೃಷ್ಟಿಕೋನಗಳನ್ನು ಹೊಂದಿದ್ದರೆ, ಅವರು ಆ ಮಾನದಂಡಗಳನ್ನು ಸಾರ್ವತ್ರಿಕವಾಗಿ ಅನ್ವಯಿಸಬೇಕು ಎಂದಿದ್ದಾರೆ.

ಮತ್ತೊಬ್ಬ ಸಾಮಾಜಿಕ ಮಾಧ್ಯಮ ಬಳಕೆದಾರರು ಚಿನ್ಮಯಿ ಅವರ ಅಭಿಪ್ರಾಯಕ್ಕೆ 'ವಿದೂಷಕ' ಎಂದು ಕರೆದು, ಮಹಿಳೆಯರೂ ಸಹ ಮಾಡಬಾರದು ಎಂದು ಹೇಳಿದ್ದಾರೆ. ಇದಕ್ಕೆ ಪ್ರತಿಕ್ರಿಯಿಸಿರುವ ಗಾಯಕಿ, 'ಮಹಿಳೆಯರು 'VIRRRRRGIN' ಗೀಳು ಹೊಂದಿರುವವರಲ್ಲ. ಹೇಗಾದರೂ ಸರಿ ಪುರುಷರು ಲೈಂಗಿಕವಾಗಿ ಸಕ್ರಿಯರಾಗಿರುತ್ತಾರೆ ಎಂದು ಭಾವಿಸುತ್ತಾರೆ ಮತ್ತು ನೀವೆಲ್ಲರೂ ಸುರಕ್ಷಿತ ಅಥವಾ ಅಸುರಕ್ಷಿತ ಲೈಂಗಿಕತೆಯನ್ನು ಹೊಂದಿದ್ದೀರಾ ಎಂದು ಕೇಳಲು ಸಹ ಮಹಿಳೆಯರು ಧೈರ್ಯ ಮಾಡುವುದಿಲ್ಲ' ಎಂದಿದ್ದಾರೆ.

ಗಾಯಕಿಗೆ ಸಾಮಾಜಿಕ ಮಾಧ್ಯಮ ಬಳಕೆದಾರರಿಂದ ಬೆಂಬಲ ವ್ಯಕ್ತವಾಗಿದೆ. ಅವರಲ್ಲಿ ಹಲವರು ಮೂಲ ಟ್ವೀಟ್ ಅನ್ನು ಟೀಕಿಸಿದ್ದಾರೆ. ಈ ಹಿಂದೆ ಆನ್‌ಲೈನ್‌ನಲ್ಲಿ ತಮ್ಮ ವಿರುದ್ಧ ಉಂಟಾದ ಟೀಕೆಗಳಿಂದಾಗಿ ತನ್ನ ಟ್ವೀಟ್‌ಗಳಿಗೆ ಪ್ರತ್ಯುತ್ತರ ನೀಡುವುದನ್ನು ನಿರ್ಬಂಧಿಸಿದ್ದಾರೆ.

## ರಾಜಕೀಯ ಸುದ್ದಿಯೂ ಇರುತ್ತದೆ...

'ಪೊಲೀಸ್ ನ್ಯೂಸ್' ವಾರಪತ್ರಿಕೆಯಲ್ಲಿ ಬರೀ ಅಪರಾಧ ವರದಿಗಳು ಮಾತ್ರ ಬರುತ್ತದೆ ಅಂದುಕೊಳ್ಳಬೇಡಿ. ಬದಲಾದ ಕಾಲಮಾನದಲ್ಲಿ ಇನ್ನು ಮುಂದೆ ರಾಜಕೀಯ, ಭ್ರಷ್ಟಾಚಾರ, ಮುಚ್ಚಿ ಹೋಗಿರುವ 'ಕ್ರೈಂ' ಮುಂತಾದ ರಹಸ್ಯ ವರದಿಗಳನ್ನು ಬ್ಲಾಸ್ಟ್ ಮಾಡಲಿದ್ದೇವೆ. ನಿಮ್ಮ ಊರುಗಳಲ್ಲಿ ಇಂತಹ ಬ್ಲಾಸ್ಟ್ ಮಾಡುವಂತಹ ಸುದ್ದಿಗಳಿದ್ದರೆ ನಮಗೆ ಕಳುಹಿಸಿ ಕೊಡಿ. ನಿಮ್ಮ ಹೆಸರು, ವಿಳಾಸವನ್ನು ರಹಸ್ಯವಾಗಿಡುವ ಜವಾಬ್ದಾರಿ ನಮ್ಮದು. ನೀವು ಕಳುಹಿಸುವ ವರದಿಗೆ ದಾಖಲೆಗಳಿದ್ದರೆ ಒಳ್ಳೆಯದು. ಅಕಸ್ಮಾತ್ ದಾಖಲೆಗಳು ಇಲ್ಲದಿದ್ದಲ್ಲಿ, ನೀವು ಕಳುಹಿಸುವ ವರದಿಯಲ್ಲಿ ದಾಖಲೆಗಳು ಸಿಗುವ ಜಾಗವನ್ನು ನಮೂದಿಸಿದರೆ ಸಾಕು, ದಾಖಲೆ ಎತ್ತುವ ಜವಾಬ್ದಾರಿ ನಮ್ಮದು.

**ನಮ್ಮ ವಿಳಾಸ :**

8884452699
policenewsreporter@gmail.com
ನಂ. 165, 8ನೇ ಮುಖ್ಯರಸ್ತೆ, ಬಿಇಎಂಎಲ್ ಬಡಾವಣೆ,
ಬಸವೇಶ್ವರನಗರ, ಬೆಂಗಳೂರು-560 079
080-23588510


# ಮಾಸ್ ಗಜರಾಮನ ಆಗಮನ

ಕನ್ನಡ ಚಿತ್ರರಂಗದ ಹಿರಿಯ ನಟ ಡಿಂಗ್ರಿ ನಾಗರಾಜ್ ಅವರ ಪುತ್ರ ರಾಜವರ್ಧನ್ ಈಗಾಗಲೇ 'ಬಿಚ್ಚುಗತ್ತಿ' ಸಿನಿಮಾದ ಮೂಲಕ ಬಣ್ಣದ ಲೋಕಕ್ಕೆ ಎಂಟ್ರಿ ಕೊಟ್ಟು, ತಮ್ಮ ಸಾಮರ್ಥ್ಯ ಎಂಥದ್ದು ಎಂಬುದನ್ನು ತೋರಿಸಿದ್ದಾರೆ. ಆನಂತರ 'ಹಿರಣ್ಯ' ಅನ್ನೋ ಸಿನಿಮಾ ಮೂಲಕ ಪ್ರೇಕ್ಷಕರ ಮುಂದೆ ಬಂದಿದ್ದ ಇದೇ ರಾಜವರ್ಧನ್ ಇದೀಗ, ಗಜರಾಮ ಎಂಬ ಸಿನಿಮಾ ಮೂಲಕ ಮತ್ತೊಮ್ಮೆ ಚಿತ್ರಮಂದಿರದಲ್ಲಿ ಆರ್ಭಟಿಸಲು ಅಣಿಯಾಗಿದ್ದಾರೆ.

ರಾಜವರ್ಧನ್ ನಟನೆಯ ಬಹುನಿರೀಕ್ಷಿತ 'ಗಜರಾಮ' ಚಿತ್ರಕ್ಕೆ ಸುನಿಲ್‌ಕುಮಾರ್ ವಿ.ಎ. ಕಥೆ, ಚಿತ್ರಕಥೆ ಬರೆದು ಆಕ್ಷನ್ ಕಟ್ ಹೇಳಿದ್ದಾರೆ. ಚಿತ್ರರಂಗದಲ್ಲಿ ಹಲವು ವರ್ಷಗಳಿಂದ ಸಹಾಯಕ ನಿರ್ದೇಶಕರಾಗಿ ದುಡಿದಿರುವ ಸುನೀಲ್ ಕುಮಾರ್ ವಿ.ಎ. ಅವರ ನಿರ್ದೇಶನದ ಮೊದಲ ಚಿತ್ರ ಇದಾಗಿದ್ದು, ನಿರ್ದೇಶನ ವಿಭಾಗದಲ್ಲಿ ದುಡಿದ ಅನುಭವ ಇರುವ ಸುನೀಲ್‌ಕುಮಾರ್ 'ಗಜರಾಮ' ಸಿನಿಮಾ ಮೂಲಕ ಸ್ವತಂತ್ರ ನಿರ್ದೇಶಕರಾಗಿ ಬಡ್ತಿ ಪಡೆದಿದ್ದಾರೆ. ಬಿಡುಗಡೆಗೆ ಸಿದ್ದವಾಗಿರೋ ಈ ಚಿತ್ರ ಫೆಬ್ರವರಿ 7ರಂದು ರಾಜ್ಯಾದ್ಯಂತ ಸಿನಿಮಾ ಥಿಯೇಟರ್‌ಗೆ ಎಂಟ್ರಿ ಕೊಡಲಿದೆ. ಈಗಾಗಲೇ ಟೈಟಲ್, ಟೀಸರ್ ಹಾಗೂ ಸಾರಾಯಿ ಶಾಂತಮ್ಮ ಹಾಡಿನ ಮೂಲಕ ಸಿನಿರಸಿಕರ ನಿರೀಕ್ಷೆಯನ್ನು ಹೆಚ್ಚಿಸಿರುವ ನಿರ್ದೇಶಕ ಸುನಿಲ್ ಕುಮಾರ್ ವಿ.ಎ. ಅವರು ಗಜರಾಮ ಚಿತ್ರದ ಮೂಲಕ ಭರ್ಜರಿ ಆಕ್ಷನ್ ಎಂಟರ್‌ಟೈನರ್ ಚಿತ್ರವೊಂದನ್ನು ಕನ್ನಡಿಗರಿಗೆ ನೀಡೋದಿಕ್ಕೆ ಹೊರಟಿದ್ದಾರೆ.

ಗಜರಾಮನಾಗಿ ರಗಡ್ ಅವತಾರದಲ್ಲಿ ಕಾಣಿಸಿಕೊಂಡಿರುವ ರಾಜವರ್ಧನ್ ಅವರಿಗೆ ಜೋಡಿಯಾಗಿ ಹರಿಕಥೆ ಅಲ್ಲ ಗಿರಿಕಥೆ ಖ್ಯಾತಿಯ ಬೆಡಗಿ ತಪಸ್ವಿನಿ ಪೂಣಚ್ಚ ಬಣ್ಣ ಹಚ್ಚಿದ್ದಾರೆ. ಲವ್‌ಸ್ಟೋರಿ ಹಾಗೂ ಮಾಸ್ ಆಕ್ಷನ್ ಕಥಾಹಂದರ ಒಳಗೊಂಡ ಈ ಚಿತ್ರದಲ್ಲಿ ರಾಜವರ್ಧನ್ ಜೋಡಿಯಾಗಿ ನಟಿಸಿರುವ ತಪಸ್ವಿನಿ ಪೂಣಚ್ಚ ಅವರು ತಮ್ಮ ಪಾತ್ರದ ಬಗ್ಗೆ ಮಾತನಾಡುತ್ತ ಗಜರಾಮ ಸಿನಿಮಾದ ಪಾತ್ರ ನನಗೆ ತುಂಬಾ ಇಷ್ಟವಾಯ್ತು. ಚಿತ್ರದಲ್ಲಿ ನಾನೊಬ್ಬ ಹಳ್ಳಿ ಹುಡುಗಿಯ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದೇನೆ ಎಂದು ಹೇಳಿದ್ದಾರೆ,





ಉಳಿದಂತೆ ಶಿಷ್ಯ ದೀಪಕ್ ಅವರು ಈ ಚಿತ್ರದ ಮತ್ತೊಂದು ಪ್ರಮುಖ ಪಾತ್ರದಲ್ಲಿ ನಟಿಸಿದ್ದು, ಖಳನಟನಾಗಿ ಪೈಲ್ವಾನ್ ಖ್ಯಾತಿಯ ಕಬೀರ್ ದುಹಾನ್ ಸಿಂಗ್ ಅವರು ಅಬ್ಬರಿಸಿದ್ದಾರೆ. ವಿಶೇಷವಾಗಿ ನಟಿ ಅವರು ಸ್ಪೆಷಲ್ ನಂಬರ್ ಹಾಡಿಗೆ ಹೆಜ್ಜೆ ಹಾಕಿದ್ದಾರೆ. ಇನ್ನು ಈ ಚಿತ್ರಕ್ಕೆ ಕೆ.ಎಸ್. ಚಂದ್ರಶೇಖರ್ ಅವರ ಛಾಯಾಗ್ರಾಹಣ, ನೇಶ್ ಬಿ. ಮಠದ್ ಅವರ ಸಂಕಲನ, ನಂಜಯ್ ಅವರ ಕೊರಿಯೋಗ್ರಾಫಿ ಹಾಗೂ ಚಿನ್ಮಯ್ ಭಾವಿಕೆರೆ, ಜಯಂತ್ ಕಾಯ್ಕಿಣಿ ಅವರ ಸಾಹಿತ್ಯವಿದೆ. ಈ ಬಾಂಡ್ ರವಿ ಎಂಬ ಚಿತ್ರವನ್ನು ನಿರ್ಮಿಸಿದ್ದ, ಲೈಫ್‌ಲೈನ್ ಫಿಲಂ ಪ್ರೊಡಕ್ಷನ್ ನರಸಿಂಹಮೂರ್ತಿ ಅವರು ಗಾಜರಾಮ ಚಿತ್ರವನ್ನು ಅದ್ದೂರಿಯಾಗಿ ನಿರ್ಮಾಣ ಮಾಡಿದ್ದಾರೆ. ಜತೆಗೆ ಮಲ್ಲಿಕಾರ್ಜುನ್ ಕಾಶಿ ಮತ್ತು ಝೇವಿಯರ್ ಫರ್ನಾಂಡಿಸ್ ಕೂಡ ನಿರ್ಮಾಣದಲ್ಲಿ ಸಹಕಾರ ನೀಡಿದ್ದಾರೆ. ಮಾಸ್ ಆಕ್ಷನ್ ಎಂಟರ್‌ಟೈನರ್ ಆಗಿರುವ 'ಗಜರಾಮ' ಚಿತ್ರಕ್ಕೆ ಮನೋಮೂರ್ತಿ ಅವರು ಸಂಗೀತ ನೀಡುತ್ತಿರುವುದು ವಿಶೇಷ.

Vol. 40 No. 31 Edited, Printed, Published & Owned by M. RAHUL, Printed by him at Shri Omkar Printers, # 4/1, Mahimappa Industrial Estate, Near PIA Bhavan, 100ft Road, Jalahalli Cross, Chokkasandra, T. Dasarahalli Post, BANGALORE-560 057. 080-23588510, 9513892666
Email: policenewsreporter@gmail.com